

ಮನುವಾದಿಗಳು ನ್ಯಾಯಾಧೀಶರಾದರೆ?

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 6 | ಜನವರಿ 31–ಫೆಬ್ರವರಿ 6, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com






ನೇತಾಜಿಯ ಮೂರ್ತಿಯನು ಸ್ಥಾಪಿಸಬಹುದು

ಅವರ ಜಾತ್ಯಾತೀತತೆಯನ್ನು ಬಚ್ಚಿಡಲಾರರು





ಎಲ್ಐಸಿ ಯ ಮಹಾ ಐಪಿಓ : ಬುಡಮೇಲು ಮಾಡುವ ಹಾನಿಕಾರಕ ಹೆಜ್ಜೆ



ಬಜೆಟ್‌ನಲ್ಲಿ ಆರ್ಥಿಕ ಪುನಶ್ಚೇತನಕ್ಕೆ ನಿರ್ಮಲಾ ಸೀತಾರಾಂ ಏನು ಮಾಡಬೇಕು?

ಜೀವ ರಕ್ಷಿಸಿ– ಜೀವನ ಉಳಿಸಿ ಜೀವಿಸಲು ಬಿಡಿ ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನ



ಐಎಎಸ್ ನಲ್ಲಿ ಕೇಂದ್ರ ನಿಯೋಜನೆಯ ನಿಯಮಗಳ ತಿದ್ದುಪಡಿಗಳು ಸಹಕಾರಿ ಒಕ್ಕೂಟ ತತ್ವದ ಉಲ್ಲಂಘನೆ: ಪಿಣರಾಯಿ ವಿಜಯನ್

ಐಎಎಸ್ ಮುಂತಾದ ಅಖಿಲ ಭಾರತ ಆಡಳಿತ ಸೇವೆಗಳ ಅಧಿಕಾರಿಗಳ ನಿಯೋಜನೆಯ ನಿಯಮಗಳಿಗೆ ಕೇಂದ್ರ ಸರಕಾರ ತರಬೇಕೆಂದಿರುವ ತಿದ್ದುಪಡಿಗಳು ಪ್ರಧಾನಿಗಳು ಹೇಳುವ ಸಹಕಾರಿ ಒಕ್ಕೂಟ ತತ್ವದ ಬೇರನ್ನೇ ದುರ್ಬಲಗೊಳಿಸುತ್ತವೆ, ಆದ್ದರಿಂದ ಇವನ್ನು ಕೈಬಿಡಬೇಕು ಎಂದು ಕೇರಳದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಐಎಎಸ್ (ಕೇಡರ್) ನಿಯಮಗಳು 1954ನ್ನು ತಿದ್ದುಪಡಿ ಮಾಡಲು ಬಯಸಿದೆ ಎಂದು ಜನವರಿ 12 ರಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿತ್ತು. ಈ ಬಗ್ಗೆ ಜನವರಿ 25 ರೊಳಗೆ ಅಭಿಪ್ರಾಯ ತಿಳಿಸುವಂತೆ ರಾಜ್ಯಗಳಿಗೆ ಕೇಂದ್ರ ಸೂಚಿಸಿತ್ತು.

ಈ ಕುರಿತು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅದಾಗಲೇ ಈ ನಿಯಮಾವಳಿಗಳು ಕೇಂದ್ರ ಸರಕಾರದ ಕಡೆಗೇ ಬಾಗಿವೆ, ಈ ತಿದ್ದುಪಡಿಗಳು ಇದನ್ನು ಇನ್ನಷ್ಟು ಹೆಚ್ಚಿಸುತ್ತವೆ ಎಂದು ಹೇಳಿದ್ದಾರೆ.

ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಒಂದೇ ಮಟ್ಟದಲ್ಲಿವೆ, ಏಕೆಂದರೆ ಅವೆರಡೂ ಜನರಿಂದ ಚುನಾಯಿತವಾದವುಗಳು. ಅಧಿಕಾರಗಳ ಹಂಚಿಕೆಯಲ್ಲಿ ಸಂವಿಧಾನ ಕೇಂದ್ರ ಸರಕಾರಕ್ಕೆ ಹೆಚ್ಚಿನ ವಿಷಯಗಳಲ್ಲಿ ಕಾರ್ಯವ್ಯಾಪ್ತಿ ನೀಡಿದೆಯೆಂಬುದೇನೋ ನಿಜ. ಒಂದು ಚೈತನ್ಯಶೀಲ ಪ್ರಜಾಸತ್ತಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಬಹಳಷ್ಟು ವಿಭಿನ್ನ ತತ್ವಗಳನ್ನು ಮತ್ತು ರಾಜಕೀಯ ಅಭಿಪ್ರಾಯಗಳನ್ನು ಹೊಂದಿರುವ ರಾಜಕೀಯ ಪಕ್ಷಗಳ ಆಳ್ವಿಕೆಗೆ ಒಳಗಾಗಬಹುದು. ಆದರೆ ಇವೆಲ್ಲವೂ ಸಂವಿಧಾನದ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸುತ್ತವೆ.

ಅಖಿಲ ಭಾರತ ಆಡಳಿತ ಸೇವೆಗಳ ಅಧಿಕಾರಿಗಳ ನಿಯೋಜನೆಯ ನಿಯಮಗಳಿಗೆ ತರಬೇಕೆಂದಿರುವ ತಿದ್ದುಪಡಿಗಳು ಖಂಡಿತವಾಗಿಯೂ ಕೇಂದ್ರದಲ್ಲಿನ ಆಳುವ ಪಕ್ಷ/ಕೂಟಗಳಿಗಿಂತ ಭಿನ್ನವಾದ ಪಕ್ಷ/ಕೂಟದ ಆಡಳಿತದಲ್ಲಿರುವ ರಾಜ್ಯ ಸರಕಾರದ ಧೋರಣೆಗಳನ್ನು ಜಾರಿಗೊಳಿಸುವಲ್ಲಿ ಅಖಿಲ ಭಾರತ ಸೇವೆಗಳ ಅಧಿಕಾರಿಗಳಲ್ಲಿ ಒಂದು ರೀತಿಯ ಭಯದ ಮಾನಸಿಕತೆಯನ್ನು ಮತ್ತು ಹಿಂಜರಿಕೆಯ ನಿಲುವನ್ನು ಹುಟ್ಟಿಸುತ್ತವೆ, ಇವು ಸಹಕಾರಿ ಒಕ್ಕೂಟ ತತ್ವದ ಬುಡಕ್ಕೇ ಏಟು ಕೊಡುತ್ತದೆ ಎಂದು ಪಿಣರಾಯಿ ವಿಜಯನ್ ತಮ್ಮ ಪತ್ರದಲ್ಲಿ ಪ್ರಧಾನಿ ಮೋದಿಯವರಿಗೆ ಹೇಳಿದ್ದಾರೆ.

ಇವರಲ್ಲದೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಛತ್ತೀಸ್‌ಗಢ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಮತ್ತು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಕೂಡಾ ಆಕ್ಷೇಪ ವ್ಯಕ್ತಪಡಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕದ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಕೂಡಾ ಸಿಎಂ ಬೊಮ್ಮಾಯಿ ಅವರಿಗೆ ಪತ್ರ ಬರೆದು, ಕೇಂದ್ರ ಸರ್ಕಾರದ ನಿರ್ಧಾರವನ್ನು ಒಪ್ಪಿಕೊಳ್ಳದಂತೆ ಮನವಿ ಮಾಡಿಕೊಂಡಿದ್ದಾರೆ. ಎನ್‌ಡಿಎ ರಾಜ್ಯವಾದ ಬಿಹಾರ ಮತ್ತು ಬಿಜೆಪಿ ರಾಜ್ಯ ಮಧ್ಯ ಪ್ರದೇಶ ಕೂಡ ಹೊಸ ತಿದ್ದುಪಡಿಗೆ ಆಕ್ಷೇಪಣೆ ಸಲ್ಲಿಸಿವೆ ಎದು ತಿಳಿದುಬಂದಿದೆ.

ಜನವರಿ 31: ವಿಶ್ವಾಸಘಾತ ದಿನಾಚರಣೆಯ ಎಸ್‌ಕೆಎಂ ಕರೆಗೆ ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆ

ಜನವರಿ 31ನ್ನು "ಒಂದು ವಿಶ್ವಾಸಘಾತದ ದಿನ' ಎಂದು ಆಚರಿಸುವ ಸಂಯುಕ್ತ ಕಿಸಾನ್ ಮೋರ್ಚಾದ ನಿರ್ಧಾರ ಸರಿಯಾಗಿದೆ, ಈ ಸರಕಾರದ ವಿಶ್ವಾಸಘಾತವನ್ನು ಗಮನಿಸದೇ ಇರುವುದಿಲ್ಲ ಎಂದು ಅದಕ್ಕೆ ತಿಳಿಸಬೇಕಾಗಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ವಲಯವಾರು ಸಂಘಗಳು ಮತ್ತು ಒಕ್ಕೂಟಗಳ ಜಂಟಿ ವೇದಿಕೆ ಹೇಳಿದೆ. ಜನವರಿ 31ರ ಈ ಕರಾಳ ದಿನಾಚರಣೆಗೆ ಸಕಲ ಬೆಂಬಲ ಮತ್ತು ಸೌಹಾರ್ದವನ್ನು ನೀಡಬೇಕು ಎಂದು ಜಂಟಿ ವೇದಿಕೆ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಪ್ರಧಾನ ಮಂತ್ರಿಗಳು ನವಂಬರ್ 19 ರಂದು ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಲಾಗುವುದು ಎಂದು ಪ್ರಕಟಿಸಿದಂದಿನಿಂದ ಈ ಕುರಿತ ಬೆಳವಣಿಗೆಗಳನ್ನು ತಾವು ಆಸಕ್ತಿಯಿಂದ ಗಮನಿಸುತ್ತಿರುವುದಾಗಿ ಹೇಳಿರುವ ಜಂಟಿ ವೇದಿಕೆಯ ಮುಖಂಡರು, ಆಗ ಈ ಪ್ರಕಟಣೆಯ ಬಗ್ಗೆ ಒಟ್ಟಾರೆಯಾಗಿ ಹಿಗ್ಗು ವ್ಯಕ್ತಗೊಂಡರೂ, ಎಸ್‌ಕೆಎಂ ಒಂದು ಜಾಗರೂಕ ನಿಲುವನ್ನು ತಳೆಯಿತು. ದಿಲ್ಲಿ ಗಡಿಗಳಲ್ಲಿನ ಧರಣಿಗಳನ್ನು ನಿಲ್ಲಿಸಿದರೂ, ಇನ್ನೂ ಹಲವು ಮಹತ್ವ ಆಗ್ರಹಗಳು ಈಡೇರಬೇಕಾಗಿವೆ, ಈ ವಿಷಯದಲ್ಲಿ ಸರಕಾರ ಕೈಗೊಳ್ಳುವ ಕ್ರಮಗಳ ಮೇಲೆ ತಮ್ಮ ಮುಂದಿನ ಕಾರ್ಯಾಚರಣೆಯನ್ನು ನಿರ್ಧರಿಸಲಾಗುವುದು ಎಂದು ಅದು ಹೇಳಿತು.

ದುರದೃಷ್ಟವಶಾತ್, ಸರಕಾರ ಎಸ್‌ಕೆಎಂಗೆ ಲಿಖಿತವಾಗಿ ಕೊಟ್ಟ ಆಶ್ವಾಸನೆಗಳ ಬಗ್ಗೆ ಹಿಂದೇಟು ಹಾಕುತ್ತಿರುವಂತೆ ಕಾಣುತ್ತದೆ. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಳಿಗೆ ಕಾನೂನಾತ್ಮಕ ಖಾತರಿಯ ಪ್ರಶ್ನೆ, ವಿದ್ಯುತ್ ತಿದ್ದುಪಡಿ ಮಸೂದೆಯನ್ನು ವಾಪಾಸು ಪಡೆಯುವುದು, ಲಖಿಂಪುರ್ ಖೇರಿಯ ಅತ್ಯಾಚಾರದ ಆರೋಪವಿರುವ ಮಂತ್ರಿ ಅಜಯ್ ಮಿಶ್ರಟೇನಿಯನ್ನು ಕೇಂದ್ರ ಸಂಪುಟದಿಂದ ವಜಾ ಮಾಡಬೇಕು ಮುಂತಾದ ಆಗ್ರಹಗಳನ್ನು ಕೈಗೆತ್ತಿಕೊಂಡಿಲ್ಲ. ಪ್ರಧಾನಿಗಳು ರೈತರ ಬಂಡೆಯಂತಹ ಐಕ್ಯತೆಯೆದುರು ತಲೆಬಾಗಿದರು ಎಂದು ಅವರ ಪ್ರತಿಷ್ಠೆಗೆ ಉಂಟಾದ ಕುಂದನ್ನು ನಿವಾರಿಸಲು ಕೃಷಿ ಮಂತ್ರಿ ನರೇಂದ್ರ ತೋಮರ್, "ನಾವು ಯಾವಾಗ ಬೇಕಾದರೂ ಮತ್ತೆ ಆ ಕಾನೂನುಗಳನ್ನು ತರಬಹುದು" ಎಂದು ನಾಚಿಕೆಯಿಲ್ಲದೆ ಹೇಳಿದರು.

ಈ ಹಿನ್ನೆಲೆಯಲ್ಲಿ ಎಸ್‌ಕೆಎಂನ ನಿರ್ಧಾರ ಸರಿಯಾಗಿಯೇ ಇತ್ತು ಎಂದಿರುವ ಕಾರ್ಮಿಕ ಸಂಘಟನೆಗಳ ಕೇಂದ್ರೀಯ ಜಂಟಿ ವೇದಿಕೆ ಜನವರಿ 31ರ ಈ ಕರಾಳ ದಿನಾಚರಣೆಗೆ ಸಕಲ ಬೆಂಬಲ ಮತ್ತು ಸೌಹಾರ್ದವನ್ನು ನೀಡಬೇಕು ಎಂದು ಎಲ್ಲ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಕಾರ್ಮಿಕ ಸಂಘಗಳ ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ನೀಡಿರುವ ಎಸ್‌ಕೆಎಂ ನಿರ್ಧಾರಕ್ಕೆ ಧನ್ಯವಾದವನ್ನೂ ಜಂಟಿ ವೇದಿಕೆ ಅರ್ಪಿಸಿದೆ.

ಮನರೇಗಕ್ಕೆ ಮುಂದಿನ ಹಣಕಾಸು ವರ್ಷದಲ್ಲಿ ಕನಿಷ್ಟ ರೂ. 2.64 ಲಕ್ಷ ಕೋಟಿಗಳನ್ನು ಒದಗಿಸಬೇಕಾಗಿದೆ–ಪಿಎಇಜಿ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಅಡಿಯಲ್ಲಿ 2022–23ರ ಹಣಕಾಸು ವರ್ಷದ ಬಜೆಟಿನಲ್ಲಿ ರೂ.2.64 ಲಕ್ಷ ಕೋಟಿ ರೂ.ಗಳನ್ನು ಒದಗಿಸಬೇಕಾಗಿದೆ ಎಂದು ಉದ್ಯೋಗ ಖಾತ್ರಿಯ ಜನತಾ ಕಾರ್ಯಾಚರಣೆ(ಪಿಎಇಜಿ) ಸಂಸ್ಥೆ ಬಜೆಟ್–ಪೂರ್ವ ಸಲಹೆಯಲ್ಲಿ ಹೇಳಿದೆ. ಇದು ಕಳೆದ ಬಜೆಟಿನಲ್ಲಿ ನೀಡಿರುವುದರ ಎರಡು ಪಟ್ಟಿಗಿಂತಲೂ ಹೆಚ್ಚು.

ಇದು 70 ವರ್ಷಗಳ ವಿಫಲತೆಯ ಪ್ರತೀಕ ಎಂದು ಪ್ರಧಾನ ಮಂತ್ರಿಗಳು ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡಾಗ ಹೀಗಳೆದಿದ್ದ ಈ ಯೋಜನೆಯೇ ಕೊವಿಡ್ ಮಹಾ ಸೋಂಕಿನಿಂದ ಅತಿ ಹೆಚ್ಚು ಬಾಧಿತರಾದ ಗ್ರಾಮೀಣ ಬಡವರಿಗೆ ಆಸರೆಯಾಗಿ ನಿಂತಿತು ಎಂಬುದನ್ನು ಈಗ ಸುಮಾರಾಗಿ ಎಲ್ಲರೂ ಒಪ್ಪುತ್ತಾರೆ.

ಈ ಮಹಾಸೋಂಕಿನ ಅವಧಿಯಲ್ಲಿ 2020–21ರ ಹಣಕಾಸು ವರ್ಷದಲ್ಲಿ ಈ ಯೋಜನೆಯ ಅಡಿಯಲ್ಲಿ ಉದ್ಯೋಗ ನಿರ್ಮಾಣದ ವ್ಯಕ್ತಿ–ದಿನಗಳ ಪ್ರಮಾಣ 46%ದಷ್ಟು ಹೆಚ್ಚಿತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಡಿಸೆಂಬರ್ 2021ರ ವೇಳೆಗಾಗಲೇ 2019–20ರಲ್ಲಿ ನಿರ್ಮಾಣವಾದ ಉದ್ಯೋಗಳ ಪ್ರಮಾಣಕ್ಕಿಂತ 10% ಹೆಚ್ಚಾಗಿತ್ತು. ಆದ್ದರಿಂದ ಇದು ಕನಿಷ್ಟ ಆವಶ್ಯಕತೆ ಎಂದು ಪಿಎಇಜಿ ಹೇಳಿದೆ.

2.64 ಲಕ್ಷ ಕೋಟಿಯ ಲೆಕ್ಕ ಹಾಕಿರುವುದು ಪ್ರಸಕ್ತ ಹಣಕಾಸು ವರ್ಷದಲ್ಲಿ ಕೆಲಸ ಕೇಳಿದವರ ಸಂಖ್ಯೆಯನ್ನಷ್ಟೇ ಆಧಾರ ವಾಗಿಟ್ಟುಕೊಂಡು. ಕನಿಷ್ಟ 100 ದಿನಗಳ ಉದ್ಯೋಗ ಕೊಡಬೇಕಾದ ಈ ಕಾಯ್ದೆಯ ಅಡಿಯಲ್ಲಿ ಪ್ರಸಕ್ತ ವರ್ಷದಲ್ಲಿ ಇದು ಈಡೇರಿದ್ದು ಕೇವಲ 5% ಗ್ರಾಮೀಣ ಕುಟುಂಬಗಳಿಗೆ ಮಾತ್ರ, ಎಂದೂ ಪಿಎಇಜಿ ಟಿಪ್ಪಣಿ ಗಮನಿಸಿದೆ.

ಕಳೆದ ವರ್ಷದ ಪಿಎಇಜಿ ಮತ್ತು ನರೇಗ ಸಂಘರ್ಷ ಮೋರ್ಚಾ ಕನಿಷ್ಟ 1.5 ಲಕ್ಷ ಕೋಟಿ ರೂ.ಗಳನ್ನು ಒದಗಿಸಬೇಕು ಎಂದಿದ್ದವು. ಆದರೆ ಕೇಂದ್ರ ಬಜೆಟಿನಲ್ಲಿ ಒದಗಿಸಿದ್ದು ಕೇವಲ 73,000 ಕೋಟಿ ರೂ, ಅದರಲ್ಲಿ 26% ದಷ್ಟು ಅದರ ಹಿಂದಿನ ವರ್ಷದ ಬಾಕಿ ಕೂಲಿ ಇದರಿಂದಾಗಿ ಪ್ರಸಕ್ತ ಹಣಕಾಸು ವರ್ಷದ ಆರು ತಿಂಗಳ ಕಳೆಯುವಷ್ಟರಲ್ಲೇ ಈ ಹಣ ಖಾಲಿಯಾಗಿ ಹೋಯಿತು. ನಂತರ ಕೇಂದ್ರ ಸರಕಾರ ಹೆಚ್ಚುವರಿ 25,000 ಕೋಟಿ ರೂ.ಗಳನ್ನು ಮಂಜೂರು ಮಾಡಿತು. ಆದರೆ ಅದರಲ್ಲಿ ಇದುವರೆಗೆ ಬಿಡುಗಡೆ ಮಾಡಿರುವುದು ಕೇವಲ 7114 ಕೋಟಿ ರೂ.

ಕೆಲಸ ಮಾಡಿದವರ ಕೂಲಿಯ ಲೆಕ್ಕಾಚಾರವನ್ನು ಒಂದು ವಾರದೊಳಗೆ ಮಾಡಬೇಕು ಎಂದು ಈ ಕಾಯ್ದೆ ವಿಧಿಸುತ್ತದೆ. ಆದರೆ 50.2% ಪ್ರಕರಣಗಳಲ್ಲಿ ಇದು ಸಾಧ್ಯವಾಗಿಲ್ಲ. ಕಳೆದ ಐದು ವರ್ಷಗಳಲ್ಲಿ ಮನರೇಗ ಬಾಬ್ತು ಒದಗಿಸಿದ ಹಣದಲ್ಲಿ 20% ದಷ್ಟು ಹಿಂದಿನ ಕೂಲಿ ಬಾಕಿಗೇ ಹೋಗುತ್ತಿತ್ತು ಎಂದು ಪಿಎಇಜಿ ಟಿಪ್ಪಣಿ ಹೇಳಿದೆ. ಸರಕಾರ ಸರಿಯಾಗಿ ನಿಧಿ ಒದಗಿಸದಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ.



ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯರೂ ಮತ್ತು ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯೂ ಆಗಿದ್ದ ಬುದ್ಧದೇಬ್ ಭಟ್ಟಾಚಾರ್ಯ ಅವರಿಗೆ 2022ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿರುವುದಾಗಿ ಪ್ರಕಟವಾಗಿದೆ. ಆದರೆ ಕಾಂ. ಭಟ್ಟಾಚಾರ್ಯ ಅದನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ. "ಪದ್ಮಭೂಷಣ ಪ್ರಶಸ್ತಿಯ ಬಗ್ಗೆ ನನಗೇನೂ ತಿಳಿಯದು, ಯಾರೂ ನನಗೆ ಆ ಬಗ್ಗೆ ಏನೂ ಹೇಳಿಲ್ಲ. ನನಗೆ ಪದ್ಮಭೂಷಣ ಪ್ರಶಸ್ತಿ ಕೊಟ್ಟಿದ್ದರೆ, ಅದನ್ನು ಸ್ವೀಕರಿಸಲು ನಾನು ನಿರಾಕರಿಸುತ್ತೇನೆ" ಎಂದು ಅವರು ಟ್ವೀಟ್ ಮಾಡಿದ್ದಾರೆ.

ಸಿಪಿಐ(ಎಂ) ಇನ್ನು ಪುಷ್ಟೀಕರಿಸುತ್ತ, ಪ್ರಭುತ್ವದ ಇಂತಹ ಪ್ರಶಸ್ತಿಗಳನ್ನು ಸ್ವೀಕರಿಸದಿರುವುದು ಸಿಪಿಐ(ಎಂ)ನ ಧೋರಣೆಯಾಗಿದೆ. ನಮ್ಮ ಕೆಲಸ ಜನರಿಗಾಗಿ, ಯಾವುದೇ ಪ್ರಶಸ್ತಿಗಾಗಿ ಅಲ್ಲ. ಕಾಂ. ಇಎಂಎಸ್ ನಂಬೂದರಿಪಾಡ್ ಈ ಹಿಂದೆ ಒಂದು ಪ್ರಶಸ್ತಿಯನ್ನು ನಿರಾಕರಿಸಿದ್ದರು ಎಂದು ಹೇಳಿದೆ.

ಸ್ಟೇಟ್ ಬ್ಯಾಂಕಿನ ಮಹಿಳಾ–ವಿರೋಧಿ ಮಾರ್ಗಸೂಚಿಗಳು: ಹಿಂತೆಗೆದುಕೊಳ್ಳಲು ಎಐಡಿಡಬ್ಲ್ಯುಎ ಆಗ್ರಹ

ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) ಭಾರತದ ಅತಿ ದೊಡ್ಡ ಬ್ಯಾಂಕ್, ಗರ್ಭಿಣಿ ಮಹಿಳೆಯರ ನೇಮಕಾತಿ ಗೆ ಸಂಬಂಧಪಟ್ಟಂತೆ ನಿರ್ದೇಶನಗಳನ್ನು ಪರಿಷ್ಕರಿಸಿದೆ. ಇವು ಮಹಿಳೆಯರಿಗೆ ಎಸ್‌ಬಿಐನ ಹೊಸ ವರ್ಷದ ತಾರತಮ್ಯ ಲೇಪಿತ ಉಡುಗೊರೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಖಂಡಿಸಿದೆ.

ಗರ್ಭಿಣಿಯಾಗಿರುವುದನ್ನು ಒಂದು ಅಂಗವಿಕಲತೆ ಎಂದು ಇನ್ನು ಮುಂದೆ ಪರಿಗಣಿಸಬಾರದು ಎಂದು ಈ ಹಿಂದೆ 2009ರಲ್ಲಿ ಎಸ್‌ಬಿಐ ಒಂದು ನಿರ್ದೇಶನವನ್ನು ನೀಡಿತ್ತು. ಅದು ಕೇರಳದ ಮಹಿಳಾ ಚಳುವಳಿ ಎತ್ತಿದ ಕೂಗು, ಅದನ್ನು ಬೆಂಬಲಿಸಿ ಆಗಿನ ಕೇರಳದ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದದ್ದು ಮತ್ತು ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ನಿನ ಪ್ರಯತ್ನಗಳ ಫಲಶ್ರುತಿಯಾಗಿತ್ತು.

ಇದಕ್ಕೆ ಮೊದಲು ಮಹಿಳೆಯರು ನೇಮಕಾತಿಯ ಅಥವ ಬಡ್ತಿಯ ಸಮಯದಲ್ಲಿ ಅವರು ಗರ್ಭಿಣಿಯಾಗಿದ್ದಾರೆಯೇ ಎಂಬ ಬಗ್ಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕು ಮತ್ತು ಅದರಲ್ಲಿ ತನ್ನ ಮುಟ್ಟಿನ ಬಗ್ಗೆ ವಿವರಗಳನ್ನು ಕೊಡುವ ಒಂದು ಘೋಷಣಾ ಫಾರಂಗೆ ಸಹಿ ಹಾಕಬೇಕು ಎಂದು ಒತ್ತಾಯಿಸಲಾಗುತ್ತಿತ್ತು. 2009ರಲ್ಲಿ ಈ ವಿಧಿಯನ್ನು ನಿಲ್ಲಿಸಲಾಯಿತು ಮತ್ತು ಆರು ತಿಂಗಳ ವರೆಗಿನ ಗರ್ಭಿಣಿಯರಿಗೆ, ಅವರ ಉದ್ಯೋಗದಿಂದ ಅವರ ಮತ್ತು ಅವರ ಗರ್ಭದ ಆರೋಗ್ಯಕ್ಕೆ ಏನೂ ತೊಂದರೆಯಾಗುವುದಿಲ್ಲ ಎಂಬ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿಶೇಷಜ್ಞರಿಂದ ಪಡೆಯಬೇಕಾಗಿತ್ತಷ್ಟೇ.

ಮಹಿಳಾ ಅಭ್ಯರ್ಥಿಗಳು ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ಮೇಲೆ ವೈದ್ಯಕೀಯ ಪರೀಕ್ಷೆಯ ಫಾರಂನಲ್ಲಿ ಮಹಿಳೆಯ ಆರೋಗ್ಯ ಕುರಿತಾದ ವಿವರಗಳನ್ನು ಕೊಡಬೇಕಾಗಿತ್ತಷ್ಟೇ.

ಈಗ ಎಸ್‌ಬಿಐ ಈ ನಿರ್ದೇಶನಗಳನ್ನು ಪರಿಷ್ಕರಿಸಿ 2009ರ ಹಿಂದೆ ಇದ್ದ ಅವಮಾನವನ್ನು ಮತ್ತೆ ಜಾರಿಗೆ ತಂದಿದೆ ಎಂದಿರುವ ಎಐಡಿಡಬ್ಲ್ಯುಎ, ಇದು ಎಲ್ಲರಿಗೂ ಸಮಾನ ಅವಕಾಶವನ್ನು ಖಾತ್ರಿಪಡಿಸುವ ಸಂವಿಧಾನಿಕ ಅಂಶದ ಉಲ್ಲಂಘನೆಯಾಗಿದೆ. ಈ ಮಹಿಳಾ–ವಿರೋಧಿ ಮಾರ್ಗಸೂಚಿಗಳನ್ನು ಎಸ್‌ಬಿಐ ಕೂಡಲೇ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ಮನುವಾದಿಗಳು ನ್ಯಾಯಾಧೀಶರಾದರೆ?

ಮನುವಾದಿಗಳು ನ್ಯಾಯಪೀಠವನ್ನು ಅಲಂಕರಿಸಿದರೆ ಸಾಮಾಜಿಕ ನ್ಯಾಯದಿಂದ ವಂಚಿತರಾದವರಿಗೆ ನ್ಯಾಯ ಯಾಕೆ ದೊರಕುವುದಿಲ್ಲ ಎಂಬ ಪ್ರಶ್ನೆಗೆ ರಾಯಚೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಇದೇ ಜನವರಿ 26 ರಂದು 73ನೇ ಗಣರಾಜ್ಯೋತ್ಸವದ ಆಚರಣೆಯ ಸಂದರ್ಭದಲ್ಲಿ ನ್ಯಾಯಾಧೀಶರೊಬ್ಬರು ತಮ್ಮ ದುರ್ವರ್ತನೆಯ ಮೂಲಕ ಉತ್ತರ ನೀಡಿದ್ದಾರೆ. ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳಬೇಕಾಗಿತ್ತು. ಕಾರ್ಯಕ್ರಮದ ವೇದಿಕೆಯಲ್ಲಿ ಮಹಾತ್ಮ ಗಾಂಧೀಜಿಯವರ ಮತ್ತು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಭಾವಚಿತ್ರಗಳನ್ನು ಇಡಲಾಗಿತ್ತು. "ಅಂಬೇಡ್ಕರ್ ರವರ ಭಾವಚಿತ್ರವನ್ನು ತೆಗೆಯದ್ದರೆ ನಾನು ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಿಲ್ಲ" ಎಂದು ಹಟ ಹಿಡಿದಿದ್ದಾರೆ. ಕೊನೆಗೂ ಅಂಬೇಡ್ಕರ್ ರವರ ಭಾವಚಿತ್ರವನ್ನು ತೆರವುಗೊಳಿಸಿದ ನಂತರವಷ್ಟೇ ಆ ನ್ಯಾಯಾಧೀಶರು ತ್ರಿವರ್ಣಧ್ವಜದ ಆರೋಹಣ ಮಾಡಿದ್ದಾರೆ. ಡಾ॥ ಅಂಬೇಡ್ಕರ್ ಅವರ ಭಾವಚಿತ್ರವನ್ನು ತೆರವುಗೊಳಿಸಿ ಡಾ. ಅಂಬೇಡ್ಕರ್ ರವರಿಗೆ ಅವಮಾನ ಮಾಡಿದ ಈ ಪ್ರಕರಣ ರಾಜ್ಯಾದ್ಯಂತ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರು ತಮ್ಮ ಬದುಕಿನುದ್ದಕ್ಕೂ ಇಂತಹ ಅವಮಾನವನ್ನು ಅನುಭವಿಸಿದ್ದಾರೆ ಹಾಗೂ ದಿಟ್ಟತನದಿಂದ ಎದುರಿಸಿದ್ದಾರೆ. ಅವರು ಇಂದು ನಮ್ಮ ಕಣ್ಣೆದುರು ಇಲ್ಲದಿರುವಾಗಲೂ ಅವರನ್ನು ಅವಮಾನಿಸುವುದು ನಿಂತಿಲ್ಲ. ಅವರನ್ನು ಅವಹೇಳನ ಮಾಡುವುದು, ಅವರ ಪ್ರತಿಮೆಗಳಿಗೆ ಹಾನಿಯುಂಟು ಮಾಡುವುದು, ಅವರ ಭಾವಚಿತ್ರಗಳನ್ನು ಧ್ವಂಸ ಮಾಡುವುದು ಮುಂತಾದ ಕೃತ್ಯಗಳ ಮೂಲಕ ದೇಶಕ್ಕೆ ಮಹೋನ್ನತವಾದ ಕೊಡುಗೆ ನೀಡಿದ ಮಹಾನ್ ಮಾನವತಾವಾದಿಗೆ ಇಂದಿಗೂ ಮನುವಾದಿಗಳ ಆಕ್ರಮಣಕಾರಿ ಅವಮಾನ ನಡೆಯುತ್ತಲೇ ಇದೆ.

ರಾಯಚೂರ್ ನಲ್ಲಿ ನಡೆದ ದುರ್ಘಟನೆ ಆಕಸ್ಮಿಕವಲ್ಲ. ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಮನುವಾದಿಗಳ ಅಧಿಕಾರ ಬಂದಿರುವುದು ಸಾಮಾಜಿಕ ನ್ಯಾಯ ವಂಚಿತರ ಮೇಲೆ ಸವರ್ಣೀಯರು ಎಂದು ಕರೆಯಲ್ಪಡುತ್ತಿರುವವರ ದಾಳಿ ದೌರ್ಜನ್ಯಗಳು ಅಧಿಕಗೊಳ್ಳಲು ಪ್ರಮುಖ ಕಾರಣವಾಗಿದೆ. ದಲಿತರು ನ್ಯಾಯ ಕೋರಿ ಪೋಲಿಸ್ ಠಾಣೆಯನ್ನು ಪ್ರವೇಶಿಸುವುದೇ ಅಸಾಧ್ಯ. ಹೇಗೋ ಧೈರ್ಯಮಾಡಿ ಪೋಲಿಸ್ ಠಾಣೆಗೆ ಪ್ರವೇಶ ಪಡೆದರೂ ಅಲ್ಲಿ ದಲಿತರ ದೂರು ದಾಖಲಾಗುವುದಿಲ್ಲ. ಅವರನ್ನು ಹಲವು ದಿನ ಒಡಾಡಿಸಿ, ಸತಾಯಿಸಿ ಕೊನೆಯಲ್ಲಿ ಬಲವಂತದ ರಾಜಿ ಮಾಡಿಸಿ, ಎರಡೂ ಕಡೆಗಳಿಂದ ಮುಚ್ಚಳಿಕೆಗೆ ಸಹಿ ಹಾಕಿಸಿ ಕಳುಹಿಸಿ ಬಿಡುತ್ತಾರೆ. ಇದನ್ನು ಪ್ರಶ್ನೆ ಮಾಡಿದರೆ ದೂರು ಕೊಟ್ಟ ದಲಿತನ ವಿರುದ್ಧವೇ ಕೌಂಟರ್ ಕೇಸ್ ದಾಖಲು ಮಾಡಿ ಶೋಷಕ ಸವರ್ಣೀಯರ ಸೇವೆ ಮಾಡುತ್ತಾರೆ. ಬಹುತೇಕ ಪೋಲಿಸ್ ಠಾಣೆಗಳಲ್ಲಿ ಪರಿಸ್ಥಿತಿ ಹೀಗೇ ಇರುವುದರಿಂದ ದಲಿತರು ತಮಗಾದ ಅನ್ಯಾಯದ ವಿಷಯದಲ್ಲಿ ದೂರು ನೀಡಲು ಪೋಲಿಸ್ ಠಾಣೆಗೇ ಹೋಗುವುದಿಲ್ಲ. ಹೀಗಾಗಿ ದಲಿತರಿಗೆ, ದಮನಿತರಿಗೆ ನ್ಯಾಯ ಎಂಬುದು ಮರೀಚಿಕೆಯಾಗಿರುತ್ತದೆ.

ನ್ಯಾಯಾಲಯಗಳಲ್ಲಿಯೂ ಇಂತಹ ಕೆಲವು ನ್ಯಾಯಾಧೀಶರಿರುತ್ತಾರೆ. ತಮ್ಮ ವೃತ್ತಿಯನ್ನು ಪವಿತ್ರವಾದ ಸೇವೆಯೆಂದು ಅವರು ಭಾವಿಸುವುದಿಲ್ಲ. ಶ್ರೀಮಂತರ ಪರವಾಗಿ ಕೆಟ್ಟ ತೀರ್ಪುಗಳನ್ನು ನೀಡಲು ಅವರು ಹೇಸುವುದಿಲ್ಲ. ಏಕೆಂದರೆ ನಿವೃತ್ತಿ ನಂತರವೂ ಸರ್ಕಾರದಿಂದ ಲಾಭದಾಯಕ ಅವಕಾಶವನ್ನು ಅವರು ಎದುರು ನೋಡುತ್ತಿರುತ್ತಾರೆ. ಸಾಮಾಜಿಕ ನ್ಯಾಯಕ್ಕಾಗಿ ತಮ್ಮ ಇಡೀ ಬದುಕನ್ನೇ ಸವೆಯಿಸಿದ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಹಿಸದ ಒಬ್ಬ ನ್ಯಾಯಾಧೀಶನಿಂದ ಸಾಮಾಜಿಕ ನ್ಯಾಯದ ಪರವಾದ ತೀರ್ಪುಗಳನ್ನು ನಿರೀಕ್ಷಿಸಲು ಸಾಧ್ಯವೇ? ದಲಿತರಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ನ್ಯಾಯ ದೊರಕಿಸುವುದಕ್ಕೆ ಹೆಚ್ಚಿನ ಆದ್ಯತೆ ಸಿಗಬೇಕಾಗಿರುವುದು ಇಂದಿನ ಅವಶ್ಯಕತೆ. ಹಾಗೆಂದ ಮಾತ್ರಕ್ಕೆ ದುರ್ಬಲ ವರ್ಗದವರಿಗೆ ಕಾನೂನು ಮೀರಿ ತಾರತಮ್ಯ ಮಾಡಬೇಕಾಗಿಲ್ಲ. ದುರ್ಬಲ ವರ್ಗದವರಿಗೆ ನ್ಯಾಯಾಲಯದ ಮೇಲೆ ವಿಶ್ವಾಸ ಮೂಡುವಂತಾಗಬೇಕು. ಧೈರ್ಯದಿಂದ ಸಾಕ್ಷಿ ಹೇಳುವವರಿಗೆ ರಕ್ಷಣೆ ಇರಬೇಕು. ಸಾಮಾಜಿಕ ನ್ಯಾಯದ ಪ್ರತಿರೂಪವೇ ಆಗಿರುವ ಡಾ. ಅಂಬೇಡ್ಕರ್‌ರವರ ಭಾವ ಚಿತ್ರಕ್ಕೆ ಅವಮಾನ ಮಾಡುವ ನ್ಯಾಯಾಧೀಶನಿಂದ ನ್ಯಾಯವನ್ನು ನಿರೀಕ್ಷಿಸಲು ಸಾಧ್ಯವೇ? ಮನುವಾದಿ ಮೆದುಳನ್ನು ತಮ್ಮ ತಲೆಯಲ್ಲಿ ತುಂಬಿಕೊಂಡಿರುವ ನ್ಯಾಯಾಧೀಶರು ಗಣನೀಯ ಸಂಖ್ಯೆಯಲ್ಲಿ ಇರುವುದರಿಂದ ದಲಿತರಿಗೆ, ಅಲ್ಪ ಸಂಖ್ಯಾತರಿಗೆ ನ್ಯಾಯ ಸಿಗುವುದೇ?

ರಾಷ್ಟ್ರ ಧ್ವಜಾರೋಹಣಕ್ಕೆ ಸಂಬಂಧಪಟ್ಟಂತೆ ಕೆಲವು ನಿಯಮಗಳು ಇರಬಹುದು. ಅವುಗಳನ್ನು ಎಲ್ಲರೂ ಮಾನ್ಯ ಮಾಡಿ ಜಾರಿ ಮಾಡಬೇಕು. ಧ್ವಜಾರೋಹಣ ಸಂದರ್ಭದಲ್ಲಿ ಗಾಂಧೀಜೀಯವರ ಭಾವಚಿತ್ರ ಇಡಬೇಕೇ, ಡಾ. ಅಂಬೇಡ್ಕರ್ ಭಾವಚಿತ್ರ ಇಡಬೇಕೇ ಅಥವ ಎರಡೂ ಭಾವ ಚಿತ್ರಗಳನ್ನು ಇಡಬೇಕೇ ಎಂಬುದನ್ನು ಸೂಕ್ತ ವೇದಿಕೆಯಲ್ಲಿ ಚರ್ಚಿಸಿ ನಿಗದಿಪಡಿಸಬಹುದು. ಇಲ್ಲಿ ಬಾಬಾಸಾಹೇಬ್ ರವರ ಭಾವಚಿತ್ರವನ್ನು ಇಟ್ಟಾಗಿತ್ತು. ಸರಿಯೋ ತಪ್ಪೋ ಆ ಕ್ರಿಯೆ ನಡೆದು ಹೋಗಿತ್ತು. ಅದು ನಿಯಮಬಾಹಿರ ಆಗಿದ್ದರೂ ಬಾಬಾಸಾಹೇಬರ ಭಾವಚಿತ್ರವನ್ನು ತೆರವುಗೊಳಿಸುವ ಮತ್ತು ಆ ಮೂಲಕ ಇಡೀ ರಾಜ್ಯದ ಜನರಲ್ಲಿ ಆತಂಕವನ್ನು ಸೃಷ್ಟಿಸುವುದು ಅಗತ್ಯವಿತ್ತಾ? ಭಾವಚಿತ್ರಗಳನ್ನು ಇರಿಸಿದ್ದು ಒಬ್ಬ ನಿರಪರಾಧಿಯನ್ನು ಶಿಕ್ಷೆಗೆ ಒಳಪಡಿಸುವ ಕೆಟ್ಟ ತೀರ್ಪಿಗಿಂತ ಉತ್ತಮ ನಿರ್ಧಾರವೇ ಆಗಿತ್ತು.

ರಾಯಚೂರಿನ ನ್ಯಾಯಾಧೀಶರು ತಪ್ಪು ಎಸಗಿದ್ದಾರೆ. ಉನ್ನತ ನ್ಯಾಯಾಲಯ ಸೂಕ್ತವಾಗಿ ತನಿಖೆ ಮಾಡಿ ಸೂಕ್ತ ಶಿಕ್ಷೆಯನ್ನು ಘೋಷಿಸಬೇಕು. ಅದು ಎಲ್ಲರಿಗೂ ಮಾದರಿಯಾಗಬೇಕು. ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ಜಾತಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸುವುದು ನ್ಯಾಯಾಧೀಶರ ಜವಾಬ್ದಾರಿಯೂ ಆಗಿರಬೇಕು. ಧ್ವಜಾರೋಹಣದ ಸಮಯದಲ್ಲಿ ಕಾನೂನು ಬಾಹಿರ ಪದ್ಧತಿಗಳಿಗೆ ನಾವು ಧರ್ಮನಿರಪೇಕ್ಷ ನಾಡಿನ ಪ್ರಜೆಗಳು ಆಸ್ಪದ ಕೊಡಬಾರದು. ಬೇರೆ ಬೇರೆ ಭಾವಚಿತ್ರಗಳನ್ನು ಇರಿಸಲು ಬಯಸಬಾರದು. ನಮ್ಮಲ್ಲಿ ಬಹಳಷ್ಟು ಮಂದಿ ಹುತಾತ್ಮರಿದ್ದಾರೆ. ಮಹಾತ್ಮರಿದ್ದಾರೆ. ಅವರೆಲ್ಲರ ಭಾವಚಿತ್ರಗಳನ್ನು ಪ್ರದರ್ಶಿಸುವ ಸ್ಥಳವೂ ಅದಲ್ಲ, ಸಂದರ್ಭವೂ ಅದಲ್ಲ. ಭಾವಚಿತ್ರಗಳಿಗೆ ತೆಂಗಿನಕಾಯಿ ಒಡೆದು, ದೂಪ ದೀಪ ಬೆಳಗಿಸಿ ಬೇರೆ ಬೇರೆ ರೀತಿಯ ಪೂಜೆಗೆ ಅವಕಾಶ ನೀಡಬಾರದು. ಎಲ್ಲ ಮತ ಪಂಥದವರಿಗೆ ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಜುಗರ ಆಗದಂತೆ ನೋಡಿಕೊಳ್ಳುವುದು ಸಾಧ್ಯವಾಗಬೇಕು. ಗಾಂಧಿ, ಅಂಬೇಡ್ಕರ್ ಮೊದಲಾದವರ ಸ್ಮರಣೆ ನಮ್ಮೆಲ್ಲರನ್ನು ಒಂದಾಗಿಸುವಂತಿರಬೇಕು. ಮನುವಾದದ ಸರ್ವಾಧಿಕಾರವನ್ನು ಮುರಿದು ಹಾಕಬೇಕು.

ಸುಳ್ಳುಗಳ ಮೂಲಕ ಸಾಮಾಜಿಕ ಸುಧಾರಣೆಯ ಹರಿಕಾರ ಶ್ರೀ ನಾರಾಯಣ ಗುರು ಅವರಿಗೆ ಮಾಡಿದ ಅಪಚಾರವನ್ನು ಬಿಜೆಪಿ ಮುಚ್ಚಿಟ್ಟುಕೊಳ್ಳಲಾಗದು

ಕೇರಳ ರಾಜ್ಯ ಸರಕಾರ ಸೂಚಿಸಿದ ಶ್ರೀ ನಾರಾಯಣಗುರು ಇರುವ ಸ್ಥಬ್ದ ಚಿತ್ರವನ್ನು ಪರಿಗಣಿಸದೇ ಕೇಂದ್ರ ಸರಕಾರ, ಸಾಮಾಜಿಕ ಬದಲಾವಣೆಯ ಹರಿಕಾರ ಶ್ರೀ ನಾರಾಯಣ ಗುರುಗಳಿಗೆ ಅಪಚಾರವೆಸಗಿದೆ. ಆ ಮೂಲಕ ಹಿಂದುಳಿದ ಹಾಗೂ ಶೋಷಿತ ಜನ ಸಮುದಾಯಗಳನ್ನು ಅಪಮಾನಿಸಿದೆ. ಇದು ದೇಶ ಮಟ್ಟದಲ್ಲಿ ವ್ಯಾಪಕವಾಗಿ ಖಂಡನೆಗೆ ಹಾಗೂ ಟೀಕೆಗೊಳಗಾಗಿದೆ. ಕೇಂದ್ರ ಸರಕಾರ ಮತ್ತು ಬಿಜೆಪಿಯು ಆ ಕುರಿತು ಸಮರ್ಪಕ ಕಾರಣ ನೀಡಿ ತಮ್ಮನ್ನು ಸಮರ್ಥಿಸಿ ಕೊಳ್ಳುವಲ್ಲಿ ಘೋರವಾಗಿ ವಿಫಲವಾಗಿವೆ. ಇದರಿಂದಾಗಿ, ಹಿಂದುಳಿದ ಹಾಗೂ ಶೋಷಿತ ಜನ ಸಮುದಾಯಗಳ ನಡುವೆ ತನಗೆ ರಾಜಕೀಯವಾಗಿ ಹಿನ್ನಡೆಯಾಗಬಹುದೆಂದು ಬೆದರಿದ ಬಿಜೆಪಿ ತನ್ನ ತಪ್ಪನ್ನು ಜನತೆಯ ನಡುವೆ ಮುಚ್ಚಿಕೊಳ್ಳಲು ಮತ್ತು ಆ ವಿಚಾರವನ್ನು ಮರೆ ಮಾಚಲು ಹಲವು ಸುಳ್ಳುಗಳನ್ನು ಮತ್ತು ಆ ಕುರಿತು ಪ್ರಶ್ನಿಸಿದವರ ಹಾಗೂ ಪಕ್ಷಗಳ ಮೇಲೆ ಆಧಾರ ರಹಿತ ಆಪಾದನೆಗಳನ್ನು ಮಾಡುತ್ತಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಿಜೆಪಿಯ ಜನ ವಿರೋಧಿ ನಡೆಯನ್ನು ಬಲವಾಗಿ ಖಂಡಿಸಿದೆ.

ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿಗೆ, ಶ್ರೀ ನಾರಾಯಣ ಗುರುಗಳ ಕುರಿತು ಅಪಾರ ಗೌರವವಿದೆಯೆಂದು ಅದರ ಮುಖಂಡತ್ವ ಬಡಾಯಿ ಕೊಚ್ಚಿಕೊಳ್ಳುತ್ತಿದೆ. ನಿಜವಾಗಲು ತಮ್ಮ ಪಕ್ಷಕ್ಕೆ ಹಾಗೂ ಸರಕಾರಗಳಿಗೆ ಗೌರವವಿದ್ದರೇ, ಯಾಕೆ ಕೇರಳ ಸರಕಾರದ ಸ್ಥಬ್ದ ಚಿತ್ರವನ್ನು ನಿರಾಕರಿಸಲಾಯಿತು? ಯಾಕೆ ಶ್ರೀ ನಾರಾಯಣ ಗುರುಗಳ ಪ್ರತಿಮೆಯ ಜಾಗದಲ್ಲಿ ಬದಲಿ ಪ್ರತಿಮೆ ಇಡಲು ಸೂಚಿಸಲಾಯಿತು? ಎಂಬ ಕುರಿತು ಸ್ಪಷ್ಠನೆ ನೀಡಬೇಕಲ್ಲವೇ? ಅದು ಬಿಟ್ಟು, ಪ್ರಗತಿಪರರ ಹಾಗೂ ಸಾಮಾಜಿಕ ಬದಲಾವಣೆಯ ಹರಿಕಾರರ ಕುರಿತ ಕೇಂದ್ರ ಸರಕಾರದ ಮಲಿನ ಜನವಿರೋಧಿ ನಿಲುಮೆಯನ್ನು ಪ್ರಶ್ನಿಸಿದವರ ಮೇಲೆ ಆಧಾರ ರಹಿತ ಸುಳ್ಳು ಅಪಾದನೆಗಳನ್ನು ಮಾಡುವ ಮೂಲಕ, ವಿಷಯಾಂತರ ಕೆಲಸದಲ್ಲಿ ತೊಡಗಿರುವುದು ಸರಿಯೇ? ಆ ಮೂಲಕ ತನ್ನ ತಪ್ಪನ್ನು ಬಿಜೆಪಿ ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಲ್ಲವೇ? ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಹಿಂದುಳಿದವರು, ಶೋಷಿತ ಜನ ಸಮುದಾಯಗಳು ಎಚ್ಚೆತ್ತುಕೊಂಡಿವೆ. ಜಾತಿತಾರತಮ್ಯ, ಅಸ್ಪೃಶ್ಯಾಚರಣೆ ಹಾಗೂ ಲಿಂಗ ತಾರತಮ್ಯಗಳಿಂದ ನಲುಗುವ ಶೋಷಿತ ಜನ ಸಮುದಾಯಗಳನ್ನು ಇಂತಹ ಆಧಾರ ರಹಿತ ಸುಳ್ಳುಗಳ ಮೂಲಕ ಇನ್ನೆಷ್ಟು ದಿನ ವಂಚಿಸಲು ಸಾಧ್ಯ?! ಎಂದಿದೆ ಮತ್ತು ಇದು ಬಿಜೆಪಿ ಮತ್ತು ಅದರ ನಾಯಕ ಆರ್.ಎಸ್.ಎಸ್.ಗಳು ಹಿಡಿದಿರುವ ಅದಃಪತನದ ಹಾದಿಯನ್ನು ತೆರೆದು ತೋರುತ್ತದೆ ಎಂದು ಸ್ಪಷ್ಟ ಪಡಿಸಿದೆ.

ಸ್ವತಃ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವರು ಮೂರುವರ್ಷಗಳಿಗೊಮ್ಮೆ ಸ್ಥಬ್ದ ಚಿತ್ರ ಆಯ್ಕೆ ಮಾಡಲಾಗುತ್ತದೆ ಎಂದು ರಾಜ್ಯದ ಜನತೆಗೆ ಸುಳ್ಳು ಹೇಳುತ್ತಾರೆ. ಆದರೇ ಮುಖ್ಯಮಂತ್ರಿಗಳು ಕಳೆದ ಒಂದು ದಶಕದಿಂದ ನಿರಂತರವಾಗಿ ಪ್ರತಿವರ್ಷ ಕರ್ನಾಟಕದ ಸ್ಥಬ್ದ ಚಿತ್ರ ಆಯ್ಕೆಯಾಗುತ್ತಿದೆ ಎನ್ನುವ ಮೂಲಕ ತಮ್ಮ ಸಂಪುಟದ ಸಚಿವರ ಮಾತನ್ನು ಅಲ್ಲಗಳೆಯುತ್ತಾರೆ.

ಕೇರಳದಲ್ಲಿ ಶ್ರೀ ನಾರಾಯಣ ಗುರುಗಳ ಪ್ರತಿಮೆಗೆ ಅಪಮಾನ ಮಾಡಿದ ಕೇಸಿನಲ್ಲಿ ಬಂಧನಕ್ಕೊಳಗಾದವರು ಯಾರು? ಹಿಂದೂ ಮತಾಂಧರೇ ಹೊರತು ಬೇರೆಯವರಲ್ಲಾ ಎಂಬುದನ್ನು ನೆನಪಿಸಿದೆ.

ದೇಶದ ರೈತರು – ಕಾರ್ಮಿಕರ ನಿರಂತರವಾದ ಸಮರ ಶೀಲ ಹೋರಾಟಕ್ಕೆ ಮಣಿದು, ರೈತರು, ಕೂಲಿಕಾರರು ಹಾಗೂ ಕಸುಬುದಾರರ ಕೈನಿಂದ ವ್ಯವಸಾಯವನ್ನು ಕಿತ್ತುಕೊಂಡು, ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ ವರ್ಗಾಯಿಸುವ ರೈತ ವಿರೋಧಿ ಕಾಯ್ದೆಗಳನ್ನು, ಪ್ರಧಾನ ಮಂತ್ರಿಗಳು ದೇಶದ ಮುಂದೆ ಮಂಡಿಯೂರಿ ಕೈ ಮುಗಿದು ಕ್ಷಮೆ ಕೇಳಿ ವಾಪಾಸು ಪಡೆಯಲಿಲ್ಲವೇ? ಅದೇ ರೀತಿ, ಅದಕ್ಕೂ ಮುನ್ನ ಚಳುವಳಿಗಳನ್ನು ದಮನ ಮಾಡಲು ಮತ್ತು ಆಧಾರ ರಹಿತವಾಗಿ ಚಳುವಳಿಕಾರರನ್ನು ನಿಂದಿಸುವ ಮೂಲಕ ದೇಶದ ಜನತೆಯ ದಾರಿ ತಪ್ಪಿಸುವ ಕೆಲಸ ಮಾಡಲಿಲ್ಲವೇ?

ಪ್ರಧಾನ ಮಂತ್ರಿಗಳೇ ತಪ್ಪೆಂದು ಒಪ್ಪಿಕೊಂಡು ರೈತ ವಿರೋಧಿ ಕಾಯ್ದೆಗಳನ್ನು ವಾಪಾಸು ಪಡೆದಿರುವಾಗ, ನಮ್ಮ ರಾಜ್ಯ ಸರಕಾರ ಅವುಗಳ ಜಾರಿಯ ಮೂರು ಕಾಯ್ದೆಗಳನ್ನು ಹಾಗೆ ಉಳಿಸಿಕೊಂಡು ವಂಚಿಸುತ್ತಿಲ್ಲವೇ? ಮತ್ತು ಅದು ಕರ್ನಾಟಕದ ರೈತ– ಕಾರ್ಮಿಕರು ಮೂತಿಗೆ ಇಕ್ಕುವುದನ್ನು ನಿರ್ಲಜ್ಜತನದಿಂದ ಕಾಯುತ್ತಿಲ್ಲವೇ?! ಎಂದು ಸಿಪಿಐಎಂ ಛೇಡಿಸಿದೆ.

ಹೀಗಾಗಿ ಬಿಜೆಪಿ ತಪ್ಪು ಮಾಡುವುದು ಮತ್ತು ಅದನ್ನು ಸಮರ್ಥಿಸಿಕೊಳ್ಳುವುದು ಮತ್ತು ವಿಷಾಯಾಂತರ ಮಾಡಿ ಜನತೆಯ ದಾರಿ ತಪ್ಪಿಸಲು ಯತ್ನಿಸುವುದು ಅದರ ಜಾಯಮಾನವಾಗಿದೆ.

ಈಗಲಾದರೂ, ಕೇಂದ್ರ ಸರಕಾರ ಹಾಗೂ ಬಿಜೆಪಿ ತನ್ನ ತಪ್ಪನ್ನು ತಿದ್ದಿಕೊಂಡು ಕೇರಳ ಸರಕಾರದ ಶ್ರೀ ನಾರಾಯಣ ಗುರು ಸ್ಥಬ್ದ ಚಿತ್ರವನ್ನು ಒಪ್ಪಿಕೊಳ್ಳಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ನಾರಾಯಣ ಗುರುಗಳ ಸ್ತಬ್ಧಚಿತ್ರ ನಿರಾಕರಿಸಿದ ಕೇಂದ್ರ ಸರಕಾರದ ವಿರುದ್ಧ ನಾರಾಯಣ ಗುರುಗಳ ಭಾವಚಿತ್ರ ಮೆರವಣಿಗೆ

ಗಣರಾಜ್ಯೋತ್ಸವದ ಪೆರೇಡ್ ನಲ್ಲಿ ನಾರಾಯಣಗುರುಗಳ ಸ್ಥಬ್ದ ಚಿತ್ರವನ್ನು ನಿರಾಕರಿಸಿದ ಕೇಂದ್ರ ಸರಕಾರದ ವಿರುದ್ಧ ಎಡ ಜಾತ್ಯಾತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟದ ನೇತ್ರತ್ವದಲ್ಲಿ ಮಂಗಳೂರಿನ ಪುರಭವನದ ಎದುರಿನಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಹಾರಾ ಅರ್ಪಣೆ ಮಾಡಿದ ಬಳಿಕ ನಗರದ ಕ್ಲಾಕ್ ಟವರ್ ನಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಗುರುಗಳ ಭಾವಚಿತ್ರ ಮೆರವಣಿಗೆ ನಡೆಯಿತು.

ಬಳಿಕ ಜಿಲ್ಲಾಧಿಕಾರಿಗಳ ಕಚೇರಿಯೆದುರು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು, 'ಸಂಘ ಪರಿವಾರಕ್ಕೆ ನಾರಾಯಣ ಗುರುಗಳ ಕುರಿತು ಯಾವುದೇ ಗೌರವವಿಲ್ಲ. ಕೆಳಜಾತಿಗಳಿಗೆ ಅತ್ಮಗೌರವ ಕೊಡಿಸುವ ಗುರುಗಳ ಸಾಮಾಜಿಕ ಚಳುವಳಿಯಿಂದ ಪರಿವಾರ ಶಕ್ತಿಗಳು ನಾರಾಯಣ ಗುರುಗಳ ಕುರಿತು ಹೊಂದಿರುವ ಅಸಹನೆ ಗಣರಾಜ್ಯೋತ್ಸವ ಪಥಸಂಚಲನದಿಂದ ಗುರುಗಳ ಸ್ಥಬ್ದಚಿತ್ರ ನಿರಾಕರಣೆಯ ಮೂಲಕ ಹೊರಬಿದ್ದಿದೆ. ನಾರಾಯಣ ಗುರುಗಳಿಗೆ ಆಗಿರುವ ಅವಮಾನ ಬಿಜೆಪಿಯ ರಾಜಕೀಯ ಚದುರಂಗದಾಟಕ್ಕೆ ಬ್ರೇಕ್ ಹಾಕಲಿದೆ' ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಸಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ವಿ. ಕುಕ್ಯಾನ್ ರವರು ಮಾತನಾಡುತ್ತಾ, 'ಕಮ್ಯುನಿಸ್ಟರು ನಾರಾಯಣಗುರುಗಳ ಸಮಾನತೆಯ ಸಂದೇಶಗಳನ್ನು ಸದಾ ಎತ್ತಿಹಿಡಿದಿದ್ದಾರೆ. ಬಡವರ ಭೂಹೀನರ ಅಸ್ಪ್ರಶ್ಯರ ಹಕ್ಕುಗಳಿಗಾಗಿ ಕೇರಳದ ಎಡರಂಗ ಸರಕಾರ ಅಳವಡಿಸಿರುವ ಕಾರ್ಯಕ್ರಮಗಳು ನಾರಾಯಣ ಗುರುಗಳು ಪ್ರತಿಪಾದಿಸಿದ ವಿಚಾರಗಳೇ ಆಗಿದೆ. ಬಿಜೆಪಿ ಪರಿವಾರದ ಚಿಂತನೆಗಳಿಗೂ ನಾರಾಯಣ ಗುರುಗಳ ವಿಚಾರಗಳಿಗೂ ಅಕಾಶ ಭೂಮಿಯಷ್ಟು ಅಂತರವಿದೆ' ಎಂದು ಹೇಳಿದರು.



ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳರವರು ಮಾತನಾಡಿ, 'ತುಳುನಾಡಿನಲ್ಲಿ ಹಿಂದುಳಿದ ಜಾತಿಯ ಜನರನ್ನು ಪರಸ್ಪರ ಹಿಂಸೆಗೆ ಪ್ರಚೋದಿಸಿ ರಾಜಕೀಯ ಅಧಿಕಾರ ಹಿಡಿದಿರುವ ಬಿಜೆಪಿ, ನಾರಾಯಣ ಗುರುಗಳ ತತ್ವಗಳ ಬದ್ಧ ವಿರೋಧಿಯಾಗಿದೆ. ಹಸಿಸುಳ್ಳುಗಳು ರಕ್ತ ಹರಿಸುವ ಇತಿಹಾಸ ಹೊಂದಿರುವ ಸಚಿವ ಸುನಿಲ್ ಕುಮಾರ್, ನಳೀನ್ ಕುಮಾರ್ ಕಟೀಲು, ಹರಿಕೃಷ್ಣ ಬಂಟ್ವಾಳ ಮುಂತಾದವರಿಗೆ ಶಾಂತಿ ಸಹಬಾಳ್ವೆ, ಮಾನವ ಧರ್ಮದ ಭೋಧಕ ನಾರಾಯಣ ಗುರುಗಳ ಹೆಸರೆತ್ತುವ ಯೋಗ್ಯತೆ ಇಲ್ಲ. ಸಚಿವ ಸುನಿಲ್ ಕುಮಾರ್ ರವರನ್ನು ಹಿಂಸೆಯ ಮೂಲಕ ಧರ್ಮಗಳ ಧ್ರುವೀಕರಣ ನಡೆಸಿ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದಲೇ ಸಂಘ ಪರಿವಾರ ದ.ಕ.ಜಿಲ್ಲೆಗೆ ಉಸ್ತುವಾರಿ ಸಚಿವರಾಗಿ ಕಾರ್ಕಳದಿಂದ ರಪ್ತು ಮಾಡಿದೆ. ಸುನಿಲ್ ಕುಮಾರ್ ರವರ ಮತೀಯ ಹಿಂಸೆಯ ರಾಜಕಾರಣವನ್ನು ಉದ್ಯೋಗ, ಶಿಕ್ಷಣ, ಆರೋಗ್ಯದ ಹಕ್ಕಿನ ಹೋರಾಟ ಹಾಗೂ ನಾರಾಯಣಗುರುಗಳ ಆತ್ಮಗೌರವದ ಚಿಂತನೆಗಳ ಮೂಲಕ ದ.ಕ. ಜಿಲ್ಲೆಯ ಜಾತ್ಯಾತೀತ ಸಂಘಟನೆಗಳು ಎದುರುಗೊಳ್ಳಲಿದೆ' ಎಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡಿ, 'ಹಸಿಹಸಿ ಸುಳ್ಳು ಹೇಳುವ ಬಿಜೆಪಿ ಸಂಘ ಪರಿವಾರವು ನಾರಾಯಣ ಗುರುಗಳ ಸ್ಥಬ್ದಚಿತ್ರ ನಿರಾಕರಿಸಿ ಶಂಕರಾಚಾರ್ಯರ ಪ್ರಸ್ತಾಪ ನೀಡಿರುವ ಬಗ್ಗೆ ಸ್ಪಷ್ಟನೆ ನೀಡದೆ ಕೇರಳದ ಕಮ್ಯುನಿಸ್ಟ್ ಸರಕಾರದ ವಿರುದ್ಧ ಇಲ್ಲ ಸಲ್ಲದ ದ್ವೇಷಪೂರಿತ ವಿಚಾರಗಳನ್ನು ಹರಿಯಬಿಟ್ಟು ಜನತೆಯಲ್ಲಿ ಗೊಂದಲ ಸೃಷ್ಠಿಸಲು ಹುನ್ನಾರ ನಡೆಸುತ್ತಿದೆ' ಎಂದು ಹೇಳಿದರು.

ಸಭೆಯನ್ನುದ್ದೇಶಿಸಿ ದಲಿತ ಚಳುವಳಿಯ ಮುಖಂಡರಾದ ಡಾ. ಕೃಷ್ಣಪ್ಪ ಕೊಂಚಾಡಿ ಹಾಗೂ ಎಂ. ದೇವದಾಸ್, ರೈತ ಸಂಘಟನೆಯ ಮುಖಂಡರಾದ ರವಿಕಿರಣ ಪೂನಚರವರು ಮಾತನಾಡಿ, ನಾರಾಯಣ ಗುರುಗಳ ಚಿಂತನೆಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರಾದ ಜೆ. ಬಾಲಕೃಷ್ಣ ಶೆಟ್ಟಿ, ಸುಕುಮಾರ್, ಸದಾಶಿವದಾಸ್, ಜಯಂತ ನಾಯಕ್, ಸಿಪಿಐ ನಾಯಕರಾದ ಬಿ. ಶೇಖರ್, ತಿಮ್ಮಪ್ಪ ಕಾವೂರು, ಕೊರಗ ಸಂಘಟನೆಗಳ ಒಕ್ಕೂಟದ ಮುಖಂಡರಾದ ಸುಂದರ ಕೊರಗ ಬೆಳುವಾಯಿ, ದಲಿತ ಸಂಘಟನೆಗಳ ಮುಖಂಡರಾದ ರಘು ಎಕ್ಕಾರು, ಸರೋಜಿನಿ, ಸೀತಾ, ನಾಗೇಶ್, ಲಕ್ಷ್ಮಣ್ ಕಾಂಚನ್, ಕೃಷ್ಣ ತಣ್ಣೀರು ಬಾವಿ, ಕಾರ್ಮಿಕ ಮುಖಂಡರಾದ ಎಚ್.ವಿ. ರಾವ್, ಸೀತಾರಾಂ ಬೇರಿಂಜ, ಸುರೇಶ್ ಕುಮಾರ್, ರಾಧಾ ಮೂಡಬಿದ್ರೆ, ಗಿರಿಜಾ, ಕರುಣಾಕರ್, ರವಿಚಂದ್ರ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು, ಮುಸ್ತಾಫ, ಸಂತೋಷ್ ಅರ್.ಎಸ್., ಯುವಜನ ನಾಯಕರಾದ ಬಿ.ಕೆ. ಇಮ್ತಿಯಾಜ್, ಸಂತೋಷ್ ಬಜಾಲ್, ಮನೋಜ್ ವಾಮಂಜೂರು, ನವೀನ್ ಕೊಂಚಾಡಿ, ಸುನೀಲ್ ತೇವುಲ, ರಫೀಕ್ ಹರೇಕಳ, ಮುಷ್ತಾರಾಜ್ ಬೋಳೂರು, ಕ್ರಷ್ಣಪ್ಪ ವಾಮಂಜೂರು, ದಿನೇಶ್, ಮಹಿಳಾ ನಾಯಕರಾದ ಶಾಂತಾ, ಸರೋಜಿನಿ, ರೇಣುಕಾ, ಭಾರತಿ ಬೋಳಾರ, ಜಯಂತಿ ಶೆಟ್ಟಿ ಸಾಮಾಜಿಕ ಚಿಂತಕರಾದ ಪದ್ಮನಾಭ ಕೋಟ್ಯಾನ್, ಪಟ್ಟಾಭಿರಾಮ ಸೋಮಯಾಜಿ, ಅಸುಂತ ಡಿಸೋಜ, ಪ್ರಮೀಳಾ ದೇವಾಡಿಗ, ರಮೇಶ್ ಉಳ್ಳಾಲ, ವಿವಿಧ ಸಂಘಟನೆಗಳ ಮುಖಂಡರಾದ ಬಿ.ಎಂ. ಮಾಧವ, ಪುರುಷೋತ್ತಮ ಪೂಜಾರಿ, ಬಿ.ಎಸ್. ದೇವಾಡಿಗ, ರಮೇಶ್ ಸುವರ್ಣ, ಪ್ರೇಮನಾಥ ಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

ಖಾಸಗಿ ಬಸ್ ಮಾಲೀಕರ ಒತ್ತಡಕ್ಕೆ ಮಣಿದು ಸರಕಾರಿ ನರ್ಮ್ ಬಸ್ ದರ ಏರಿಕೆ ವಿರೋಧಿಸಿ ಪ್ರತಿಭಟನೆ



ಖಾಸಗಿ ಬಸ್ ಮಾಲೀಕರ ಒತ್ತಡಕ್ಕೆ ಮಣಿದು ಸರಕಾರಿ ನರ್ಮ್ ಬಸ್ ದರ ಏರಿಕೆ ಮಾಡಿರುವುದನ್ನು ವಿರೋಧಿ ಹಾಗೂ ಎಲ್ಲಾ ರೂಟ್ ಗಳಲ್ಲಿ ಬಸ್ ಓಡಿಸಬೇಕು ಎಂದು ಒತ್ತಾಯಿಸಿ ಇಂದು ಸಿಐಟಿಯು ಉಡುಪಿ ತಾಲೂಕಿನ ಸಮಿತಿ ನೇತೃತ್ವದಲ್ಲಿ ಉಡುಪಿಯ ನರ್ಮ್ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿ ನಿಲ್ದಾಣದಾಧಿಕಾರಿ ಮೂಲಕ ವಿಭಾಗೀಯ ಅಧಿಕಾರಿ ಮಂಗಳೂರು ವಿಭಾಗ ಇವರಿಗೆ ಕಳುಹಿಸುವ ಜೊತೆಗೆ ತಕ್ಷಣವೇ ದರ ಏರಿಕೆ ವಾಪಾಸು ಪಡೆಯಬೇಕು. ಉಡುಪಿ ಗ್ರಾಮಾಂತರ ಎಲ್ಲಾ ರೂಟ್ ಗಳಿಗೆ ಬಸ್ ಬಿಡಬೇಕು. ಹಾಗೂ ಎಲ್ಲಾ ಬಸ್ ನಿಲ್ದಾಣಗಳಲ್ಲಿ ವೇಳಪಟ್ಟಿ ಹಾಕಬೇಕು ಎಂದು ಒತ್ತಾಯಿಸಿ ಸಿಐಟಿಯು ತಾಲ್ಲೂಕು ಸಮಿತಿಯಿಂದ ಪ್ರತಿಭಟನೆ ನಡೆಸಿದೆ. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರನ್ನು ಒಟ್ಟು ಸೇರಿಸಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದೆ. ಸಿಐಟಿಯು ನ ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಖಜಾಂಚಿ ಶಶಿಧರ್ ಗೊಲ್ಲ, ಸಿಐಟಿಯು ಉಡುಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಕವಿರಾಜ್, ಎಸ್, ಉಮೇಶ್ ಕುಂದರ್, ನಳಿನಿ, ಸಂಜೀವ ಬಳ್ಕೂರು, ವಿದ್ಯಾರಾಜ್, ಸದಾಶಿವ ಬ್ರಹ್ಮವರ ಉಪಸ್ಥಿತರಿದ್ದರು.

ಗಾಂಧಿ ಚಿಂತನೆಗಳು ದೇಶಕ್ಕೆ ಪೂರಕವಾದರೆ ಗೋಡ್ಸೆ ಚಿಂತನೆಗಳು ದೇಶಕ್ಕೆ ಮಾರಕ



ದೇಶದ ಸಂವಿಧಾನದ ಮೂಲ ಆಶಯಗಳಾದ ಜಾತ್ಯಾತೀತವಾದ, ಪ್ರಜಾಪ್ರಭುತ್ವ, ಸೌಹಾರ್ದತೆ ತೀರಾ ಅಪಾಯದಲ್ಲಿದೆ. ಸಂವಿಧಾನದ ಬುಡಕ್ಕೆ ಕೊಡಲಿ ಪೆಟ್ಟು ನೀಡುವ ಕೋಮುವಾದವನ್ನು ಇಲ್ಲಿನ ಸರಕಾರಗಳು ಪ್ರಜ್ಞಾಪೂರ್ವಕವಾಗಿ ಪೋಷಿಸುತ್ತಿವೆ. ರಾಜಕೀಯಕ್ಕಾಗಿ ಧರ್ಮದ ಬಳಕೆಯಾಗುವ ಮೂಲಕ ಪ್ರಸ್ತುತ ರಾಜಕಾರಣವು ಸರಳತೆಯನ್ನೂ, ಸಜ್ಜನಿಕೆಯನ್ನೂ ಮರೆತಿದೆ.ಈ ಸಂದರ್ಭದಲ್ಲಿ ಗಾಂಧಿ ಹಾಗೂ ಅವರ ಆದರ್ಶಗಳನ್ನು ದೇಶವು ಸದಾ ನೆನಪು ಮಾಡಿಕೊಳ್ಳಬೇಕಿದೆ. ಇಂದಿನ ಯುವಜನತೆ ಗಾಂಧಿ ಆದರ್ಶಗಳನ್ನು ಅಣಕಿಸುತ್ತಿದ್ದು, ಕೊಲೆಗಡುಕ ಗೋಡ್ಸೆಯ ವಿಚಾರಗಳತ್ತ ಅರಿವಿನ ಕೊರತೆಯಿಂದ ಒಲವು ತೋರುತ್ತಿದೆ. ಇದು ದೇಶಕ್ಕೆ ತೀರಾ ಅಪಾಯವನ್ನು ತಂದೊಡ್ಡಲಿದೆ. 'ಗಾಂಧಿಯ ಚಿಂತನೆಗಳು ಈ ದೇಶಕ್ಕೆ ಸದಾ ಪೂರಕವಾಗಿದ್ದರೆ, ಗೋಡ್ಸೆಯ ಚಿಂತನೆಗಳು ದೇಶಕ್ಕೆ ಮಾರಕವಾಗಿದೆ' ಎಂದು ಸುನೀಲ್ ಕುಮಾರ್ ಬಜಾಲ್ ಹೇಳಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಗುರುಪುರ ವಲಯ ಸಮಿತಿಯ ಆಶ್ರಯದಲ್ಲಿ ಗಾಂಧಿ ಹುತಾತ್ಮ ದಿನಾಚರಣೆಯ ಅಂಗವಾಗಿ ಸೌಹಾರ್ದತಾ ದಿನಾಚರಣೆಯನ್ನು ತಾರಿಗುಡ್ಡೆ ಬೊಂಡಂತಿಲದ ಸಂಗಾತಿ ಭವನದಲ್ಲಿ 27 ಜನವರಿ 2022 ರಂದು ಆಚರಿಸಿದೆ.

ಸಭೆಯಲ್ಲಿ ಸಿಪಿಐಎಂ ಗುರುಪುರ ವಲಯ ಕಾರ್ಯದರ್ಶಿ ಸದಾಶಿವ ದಾಸ್ ರವರು ಮಾತನಾಡುತ್ತಾ, 'ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಮುನ್ನಡೆಸಿ ತನ್ನದೇ ಆದ ಛಾಪನ್ನು ಮೂಡಿಸಿದ ಗಾಂಧೀಜಿಯವರ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಇಡೀ ಜಗತ್ತೇ ಕೊಂಡಾಡಿದೆ. ಆದರೆ ಸಂಘ ಪರಿವಾರವು ಮಾತ್ರ ತನ್ನ ಹುಟ್ಟಿನಿಂದಲೇ ಗಾಂಧೀಜಿಯವರ ವಿರುದ್ಧ ದ್ವೇಷ ಸಾಧಿಸುತ್ತಲೇ ಬಂದಿದೆ.ಮಾತ್ರವಲ್ಲದೆ 8 ಬಾರಿ ಕೊಲೆಯತ್ನವನ್ನೂ ನಡೆಸಿದೆ' ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ಮನೋಜ್ ವಾಮಂಜೂರುರವರು, 'ಗಾಂಧೀಜಿಯವರ ಆಶಯಗಳನ್ನು ಮಣ್ಣುಪಾಲು ಮಾಡಿ ದೇಶವನ್ನು ಮತ್ತೆ ಧರ್ಮದ ಆಧಾರದಲ್ಲಿ ವಿಭಜಿಸಲು ಹೊರಟ ಮತಾಂಧ ಶಕ್ತಿಗಳು ನಾಥೂರಾಂ ಗೋಡ್ಸೆಯನ್ನು ಮಹಾನ್ ನಾಯಕನಂತೆ ಬಿಂಬಿಸುತ್ತಿದೆ. ಇಂತಹ ದುಷ್ಕೃತ್ಯಗಳಿಗೆ ಕುಮ್ಮಕ್ಕು ನೀಡುವ ಸಂಘಪರಿವಾರ ನಿಜಕ್ಕೂ ಭಯೋತ್ಪಾದಕ ಸಂಘಟನೆಯಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಗುರುಪುರ ವಲಯ ಸಮಿತಿ ಸದಸ್ಯರಾದ ಕೆ. ಗಂಗಯ್ಯ ಅಮೀನ್, ನೋಣಯ್ಯ ಗೌಡ, ಹೊನ್ನಯ್ಯ ಅಮೀನ್, ಸಿಪಿಐ(ಎಂ) ಸ್ಥಳೀಯ ನಾಯಕರಾದ ಜಯಶೀಲ ಕರ್ಕೇರ, ಶೇಖರ ಗಂಪ, ಭವಾನಿ ಮುಂತಾದವರು ಉಪಸ್ಥಿತರಿದ್ದರು.

ಜೀವ ರಕ್ಷಿಸಿ–ಜೀವನ ಉಳಿಸಿ–ಜೀವಿಸಲು ಬಿಡಿ ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನ

ಕೋವಿಡ್ ವಾರಾಂತ್ಯ ಕರ್ಫ್ಯೂ ವಾಪಸ್ಸು ಪಡೆದು ಹಲವು ಕ್ಷೇತ್ರಗಳಿಗೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಸಡಲಿಕೆ ಮಾಡಿದ ರಾಜ್ಯ ಸರ್ಕಾರ ಜನರು ತಮ್ಮ ಹಕ್ಕುಗಳ ಸಂರಕ್ಷಣೆಗಾಗಿ ಹಾಗೂ ರೈತ, ಕಾರ್ಮಿಕ, ಜನ ವಿರೋಧಿ ನೀತಿಗಳು, ಕಾನೂನುಗಳ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಲು ಇರುವ ಸಂವಿಧಾನದ ಮೂಲಭೂತ ಹಕ್ಕಾಗಿರುವ ಪ್ರತಿಭಟನೆಯ ಮೇಲೆ ನಿರ್ಬಂಧ ಮುಂದುವರೆಸಿರುವುದು ಪ್ರಜಾಪ್ರಭುತ್ವ ವಿರೋಧಿಸಿ 24 ಜನವರಿ 2022 ರಂದು ರಾಜ್ಯದಲ್ಲಿ ಏಳು ಪಕ್ಷಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ.

'ಜೀವ ರಕ್ಷಿಸಿ, ಜೀವನ ಉಳಿಸಿ, ಜೀವಿಸಲು ಬಿಡಿ' ಎನ್ನುವ ಘೋಷಣೆಯೊಂದಿಗೆ ಇಂದು ಮನೆ ಮನೆಯಿಂದ, ಕಚೇರಿ–ಕಾರ್ಖಾನೆಗಳ ಮುಂಭಾಗ ಕೋವಿಡ್ ನಿಯಮಗಳನ್ನು ಪರಿಪಾಲಿಸಿ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಕರೆ ನೀಡಿದ್ದವು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಭಾರತ ಕಮ್ಯುನಿಸ್ಟ್ ಪಕ್ಷ–ಸಿಪಿಐ, ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯ (ಕಮ್ಯುನಿಸ್ಟ್)– ಎಸ್‌ಯುಸಿಐ(ಸಿ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ, ಲೆನಿನ್‌ವಾದಿ) (ಲಿಬರೇಷನ್)– ಸಿಪಿಐ(ಎಂಎಲ್)–(ಲಿಬರೇಷನ್), ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ – ಎಐಎಫ್‌ಬಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ (ಅಂಬೇಡ್ಕರ್‌ವಾದ) –ಆರ್‌ಪಿಐ, ಸ್ವರಾಜ್ ಇಂಡಿಯಾ ರಾಜ್ಯ ಘಟಕದ ಸಮಿತಿಯ ಕರೆ ಮೇರೆಗೆ ಪ್ರತಿಭಟನೆಗಳು ನಡೆದಿವೆ.

ಕೋವಿಡ್ 3ನೇ ಅಲೆ ದಿನೆ ದಿನೇ ಸಾವಿರಾರು ಸಂಖ್ಯೆಯಲ್ಲಿ ಹೆಚ್ಚಳಗೊಳ್ಳುತ್ತದೆ. ವಾರಾಂತ್ಯ ಲಾಕ್‌ಡೌನ್ ಮತ್ತಿತರ ಕ್ರಮಗಳಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ ಜನರಿಗೆ ಪರಿಹಾರ ಒದಗಿಸಲು ಸಾಧ್ಯವಾಗದ ರಾಜ್ಯದ ಬಿಜೆಪಿ ಸರ್ಕಾರ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಆಸ್ಪತ್ರೆಗೆ ದಾಖಲಾಗುವ ಕೋವಿಡ್ ಸೋಕಿಂತರ ದರ ಆಧರಿಸಿ ವಾರಾಂತ್ಯ ಕರ್ಫ್ಯೂ ವಾಪಸ್ಸು ಪಡೆದಿದೆ. ಅಲ್ಲದೇ ಮದುವೆ ಸಮಾರಂಭಗಳಿಗೆ ಹೊರಾಂಗಣದಲ್ಲಿ 200, ಒಳಾಂಗಣದಲ್ಲಿ 100 ಮಂದಿಗೆ ಅವಕಾಶ, ದೇವಾಲಯಗಳಲ್ಲಿ ದರ್ಶನ, ಮಳಿಗೆಗಳಲ್ಲಿ, ಸಿನಿಮಾ, ಹೋಟೆಲುಳಲ್ಲಿ ಶೇ 50:50, ಸೇರಿದಂತೆ ಮತ್ತಿತರ ವಾಣಿಜ್ಯ ಚಟುವಟಿಕೆಗಳಿಗೆ ಕೆಲ ನಿಬಂಧನೆಗಳಿಗೆ ಒಳಪಟ್ಟು ವಾರಪೂರ್ತಿ ನಡೆಸಲು ಅನುವುಗೊಳಿಸಿದೆ. ಕೋವಿಡ್ ಸೋಂಕಿಗೆ ಒಳಗಾದ ಜನರಿಗೆ ಪರಿಹಾರವಾಗಲಿ, ಕಾರ್ಮಿಕರಿಗೆ ವೇತನವಾಗಲಿ ನೀಡುವ ಕುರಿತು ಆದೇಶಿಸಿಲ್ಲ.

ಸರ್ಕಾರ ತನ್ನ ವೈಫಲ್ಯಗಳನ್ನು ಮರೆಮಾಚಲು ಹಾಗೂ ಜನಾಕ್ರೋಶವನ್ನು ತಡೆಯಲು ಪ್ರತಿಭಟನೆಗಳ ಮೇಲೆ ನಿಬಂಧನೆಗಳನ್ನು ವಿಧಿಸಿದೆ.

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಛೇರಿ ಇಎಂಎಸ್ ಭವನ ಮುಂಭಾಗ ನಡೆದ ಮತ ಪ್ರದರ್ಶನದಲ್ಲಿ ರಾಜ್ಯ ಸಾಮಾನ್ಯ ಶಾಖೆ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಮಾತನಾಡಿ ಕೊರೊನಾ ಸೋಂಕಿನ ಪಿಡುಗಿಗೆ ಅಪಾರ ಸಂಖ್ಯೆಯಲ್ಲಿ ಜನ ಬಲಿಯಾಗಿದ್ದಾರೆ ಮತ್ತು ಈ ಅವಧಿ ಹೊರಿಸಿದ ಅಪಾರ ಸಂಕಷ್ಟಗಳ ಕುರಿತು ವಿವರಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನತೆಯ ಜೀವ– ಜೀವನವನ್ನು ಸಂರಕ್ಷಿಸಲು ಪರಿಹಾರವನ್ನು ಘೋಷಿಸಬೇಕು' ಎಂದು ಆಗ್ರಹಿಸಿದರು.

ಕೊರೊನಾ ಎರಡು ಅಲೆಗಳ ಬಿಕ್ಕಟ್ಟಿನ ಸಂಕಷ್ಟದ ಸಂದರ್ಭವನ್ನು ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ತಮ್ಮ ಜನವಿರೋಧಿ ನೀತಿಗಳನ್ನು ಜಾರಿಗೊಳಿಸಲು ದುರುಪಯೋಗ ಮಾಡಿಕೊಳ್ಳುತ್ತಿರುವುದು ಮತ್ತು ತಮ್ಮ ನೀತಿಗಳಿಂದ ಬೇಸತ್ತ ಜನರ ಹೋರಾಟಗಳು ಬೆಳೆದು ಬರದಂತೆ ಜನತೆಯನ್ನು ಕೋಮುವಾದಿ, ಮತೀಯವಾದಿ ನೆಲೆಗಳಿಂದ ವಿಭಜಿಸಲು, ಹಿಂಸಾಚಾರ, ದ್ವೇಷ ಹೆಚ್ಚಿಸಲು ಯತ್ನಿಸುತ್ತಿರುವುದನ್ನು ಅವರು ಖಂಡಿಸಿದರು.

ಸಿಪಿಐ(ಎಂ) ರಾಜ್ಯ ಮುಖಂಡ ಜಿ.ಎನ್. ನಾಗರಾಜ್ ಮಾತನಾಡಿ, "ನೆರೆಹೊರೆಯ ಪಾಕಿಸ್ತಾನ, ಬಾಂಗ್ಲಾದೇಶ ಗಳಂತಹ ಸಣ್ಣ ದೇಶಗಳು ಕೊರೊನಾ ಸಂಕಷ್ಟದಲ್ಲಿ ಜನತೆಗೆ ನೀಡಿದ ಪರಿಹಾರದಷ್ಟಾದರೂ ಕೊಡದ ಕೇಂದ್ರ ಸರಕಾರದ ನೀತಿಯನ್ನು ಖಂಡಿಸಿದರು.

ಎಡಪಕ್ಷಗಳು ಮತ್ತು ಇತರೆ ಪ್ರಜಾಸತ್ತಾತ್ಮಕ ಪಕ್ಷಗಳು ಆಗ್ರಹಿಸುತ್ತಿರುವ ಪ್ರಮುಖ ಬೇಡಿಕೆಗಳನ್ನು ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯ, ಕಾರ್ಮಿಕ ಮುಖಂಡ ಕೆ.ಮಹಾಂತೇಶ್ ಮಂಡಿಸಿದರು.

ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ.ಬಯ್ಯಾರೆಡ್ಡಿ, ಬ್ಯಾಂಕ್ ನೌಕರರ ಅಖಿಲ ಭಾರತ ಮುಖಂಡ ರತ್ನಾಕರ್ ಶೆಣೈ, ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯ, ಚಂದ್ರಪ್ಪ ಹೊಸ್ಕೇರಾ, ಮೋನಪ್ಪ, ಕರ್ನಾಟಕ ರಾಜ್ಯ ಅಂಗವಿಕಲರ ಸಂಘಟನೆ ರಾಜ್ಯ ಕಾರ್ಯದರ್ಶಿ ಜಿ.ಎನ್. ಯಶಸ್ವಿ, ಮುಖಂಡರಾದ ರಾಜನ್, ನಾಗರಾಜ್, ನಿತಿನ್ ಮುಂತಾದವರು ಭಾಗವಹಿಸಿದ್ದರು.


ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಕಛೇರಿ, ಜ್ಯೋತಿಬಸು ಭವನ ಮುಂಭಾಗ ನಡೆದ ಮತ ಪ್ರದರ್ಶನದಲ್ಲಿ ನಗರದಲ್ಲಿ ಕೋವಿಡ್ ನಿಯಂತ್ರಣಕ್ಕೆ ಮತ್ತಷ್ಟು ವೈದ್ಯಕೀಯ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಸೋಂಕು ಹರಡದಂತೆ ಎಚ್ಚರವಹಿಸಬೇಕು, ಸೋಂಕಿತರಿಗೆ ಪರಿಹಾರ, ಸೋಂಕಿತ ಕಾರ್ಮಿಕರಿಗೆ ವೇತನ ಖಾತ್ರಿ ಮಾಡಬೇಕು ಹಾಗೂ ಕೋವಿಡ್ ನಿಬಂಧನೆಗಳಿಗೆ ಒಳಪಟ್ಟು ಜನರು ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳ ಮೂಲಕ ಪ್ರತಿಭಟನೆಗಳನ್ನು ನಡೆಸಿ ತಮ್ಮ ಮೂಲಭೂತ ಹಕ್ಕನ್ನು ಚಲಾಯಿಸಲು ಪ್ರತಿಭಟನೆಗಳ ಮೇಲಿನ ನಿರ್ಬಂಧಗಳನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು.

ಸಿಪಿಐ(ಎಂ) ಪಕ್ಷದ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಬುಗತಗಹಳ್ಳಿ ಶಾಖೆ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ತೆರಿಗೆ ರಹಿತ ಪ್ರತಿ ಕುಟುಂಬಕ್ಕೂ ರೂ. 10 ಸಾವಿರ ಪರಿಹಾರ ಮೊತ್ತ ನೀಡಬೇಕು. ತಲಾ ಹತ್ತು ಕೆ.ಜಿ. ಅಕ್ಕಿ ಒದಗಿಸಬೇಕು ಆಗ್ರಹಿಸಿ ರೈತ, ಕೂಲಿ ಕಾರ್ಮಿಕರ ಪ್ರತಿಭಟನೆ ನಡೆಸಿದರು.

ಕೋವಿಡ್ ಮೂರನೇ ಅಲೆ ತಡೆಗಟ್ಟಲು ಕ್ರಮ ಹಾಗೂ ಎಲ್ಲಾ ಜನರಿಗೆ ಕನಿಷ್ಠ ಪರಿಹಾರಕ್ಕೆ ಒತ್ತಾಯಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಕರೆ ನೀಡಿದ್ದ ಮನೆ– ಮನೆಯಿಂದ ಪ್ರತಿಭಟನೆಯ ಭಾಗವಾಗಿ ಮೈಸೂರು ಜಿಲ್ಲೆಯಲ್ಲಿ ಪ್ರತಿಭಟನೆಗಳು ನಡೆದವು. ನಂತರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಹಕ್ಕೊತ್ತಾಯ ಸಲ್ಲಿಸಿದರು.

ಉಳಿದಂತೆ, ದಕ್ಷಿಣ ಕನ್ನಡ, ಚಿಕ್ಕಬಳ್ಳಾಪುರ, ಕಲಬುರಗಿ, ಕೋಲಾರ, ಉತ್ತರ ಕನ್ನಡ, ಉಡುಪಿ, ತುಮಕೂರು, ಧಾರವಾಡ, ಬಳ್ಳಾರಿ, ಬೀದರ್, ಕೊಪ್ಪಳ, ಯಾದಗಿರಿ, ವಿಜಯಪುರ, ಹಾಸನ, ಮತ್ತಿತರ ಕಡೆಗಳಲ್ಲಿ 7 ಪಕ್ಷಗಳ ಮುಖಂಡರು, ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು.

4244 ಅಂಗನವಾಡಿ ಕೇಂದ್ರಗಳ ಕತೆ ಏನಾಯ್ತು? ಕೇಂದ್ರ ಸರಕಾರಕ್ಕೆ ಹೈಕೋರ್ಟ್ ಪ್ರಶ್ನೆ



ರಾಜ್ಯಕ್ಕೆ ಹೆಚ್ಚುವರಿಯಾಗಿ 4,244 ಅಂಗನವಾಡಿ ಕೇಂದ್ರಗಳ ಮಂಜೂರಾತಿಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತು ಮೂರು ವಾರಗಳಲ್ಲಿ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಗುರುವಾರ ನಿರ್ದೇಶಿಸಿದೆ.

ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಸಂಬಂಧಿಸಿದಂತೆ 2011 ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ಹೈದ್ರಾಬಾದ್ ಕರ್ನಾಟಕದಲ್ಲಿನ (ಕಲ್ಯಾಣ ಕರ್ನಾಟಕ) ಅಪೌಷ್ಟಿಕತೆ ನಿವಾರಣೆ ಮಾಡಲು ಹೆಚ್ಚುವರಿ ಅಂಗನವಾಡಿಗಳನ್ನು ನಿರ್ಮಾಣ ಮಾಡುವುದಾಗಿ ಕೇಂದ್ರ ಸರಕಾರ ಹೇಳಿತ್ತು. ಆದರೆ ಆ ಅಂಗನವಾಡಿಗಳು ಜಾರಿಗೆ ಬಂದಿರಲಿಲ್ಲ. ಹಾಗಾಗಿ 2011 ರಲ್ಲಿ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು.

ಸಾರ್ವಜನಿಕ ಹಿತಾಸಕ್ತಿ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠವು ವಿಚಾರಣೆ ನಡೆಸಿತು.

ಕೇಂದ್ರ ಸರ್ಕಾರದ ಪರ ವಕೀಲ ಉನ್ನಿಕೃಷ್ಣನ್ ಅವರು "ರಾಜ್ಯಕ್ಕೆ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವಾಲಯದಿಂದ ಮಾಹಿತಿ ಪಡೆದುಕೊಳ್ಳಬೇಕಾಗಿದೆ. ಆದ್ದರಿಂದ, ಕೊಂಚ ಕಾಲಾವಕಾಶ ನೀಡಬೇಕು" ಎಂದು ಕೋರಿದರು. ಅದನ್ನು ಪರಿಗಣಿಸಿದ ಪೀಠ, ಮಾಹಿತಿ ಒದಗಿಸಲು ಮೂರು ವಾರಗಳ ಕಾಲಾವಕಾಶ ನೀಡಿತು.

ಜತೆಗೆ, ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ ಎನ್ ವೇಣುಗೋಪಾಲಗೌಡ ನೇತೃತ್ವದ ಉನ್ನತ ಮಟ್ಟದ ಸಮಿತಿಯ ಮಧ್ಯಂತರ ಶಿಫಾರಸ್ಸುಗಳನ್ನು ಜಾರಿಗೆ ತಂದಿರುವ ಕುರಿತ ವರದಿಯನ್ನು ಮುಂದಿನ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಸಲ್ಲಿಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ ಪೀಠ, ವಿಚಾರಣೆಯನ್ನು ಫೆಬ್ರವರಿ 18ಕ್ಕೆ ಮುಂದೂಡಿತು.

ಕೋವಿಡ್ ಪರಿಹಾರ ಬಿಡುಗಡೆಗೆ ಒತ್ತಾಯ



ಕೋವಿಡ್ 19 ಸೋಂಕು ದೇಶದಲ್ಲಿ 2020 ರಿಂದಲೂ ಭಾದಿಸುತ್ತಿವೆ. ಮೊದಲನೇ, ಎರಡನೇ ಅಲೆ ಸದ್ಯಕ್ಕೆ ಇಳಿಮುಖವಾಗಿದ್ದು ಮೂರನೇ ಅಲೆಯ ಭಯ ಜನತೆಯನ್ನ ಆತಂಕಕ್ಕೀಡುಮಾಡಿದೆ. ಸರ್ಕಾರದ ವರದಿಗಳ ಪ್ರಕಾರ ಕರ್ನಾಟಕದಲ್ಲಿ ಸೋಂಕಿತರ ಸಂಖ್ಯೆ 30,03,265, ಅಧಿಕೃತವಾಗಿ ಸಾವನಪ್ಪಿದವರ ಸಂಖ್ಯೆ 38,299. ಅನಧಿಕೃತ ವರದಿಗಳ ಪ್ರಕಾರ ಮೊದಲನೇ, ಎರಡನೇ ಅಲೆಯಲ್ಲಿ ಮೃತ ಪಟ್ಟವರ ಸಂಖ್ಯೆ ರಾಜ್ಯದಲ್ಲಿ 1 ಲಕ್ಷ ದಾಟಿದೆ ಎನ್ನುತ್ತವೆ. ಬಿಜೆಪಿ ಸರ್ಕಾರ ಪರಿಹಾರ ನೀಡುವ ಮತ್ತಿತರ ನೆಪಗಳನ್ನು ಮುಂದೆ ಮಾಡಿ ಸಾವಿನ ವರದಿಗಳು ಹೊರ ಬರದಂತೆ ಆಡಳಿತಾತ್ಮಕ ಕ್ರಮ ಕೈಗೊಂಡಿವೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬರುವ ಕಹಿ ಸತ್ಯವಾಗಿರುತ್ತದೆ.

ಯಾವುದೇ ಮುನ್ಸೂಚನೆ ನೀಡದೇ, ಯಾವುದೇ ಕ್ರಮ ವಹಿಸದೇ ಸರ್ಕಾರ ಲಾಕ್‌ಡೌನ್ ಘೋಷಿಸಿ ಆಸ್ಪತ್ರೆಗಳಲ್ಲಿ ಹಾಸಿಗೇ ಸಿಗದೇ, ಆಕ್ಸಿಜನ್ ಸಿಗದೇ ಸರಿಯಾದ ಚಿಕಿತ್ಸೆ ಸಿಗದೇ ವೆಚ್ಚ ಭರಿಸಲಾಗದೇ ಸೋಂಕಿನಂದ ಸಾವಿರಾರು ಜನರು ಅಸುನೀಗಿದ್ದರೆ, ಸಾವಿರಾರು ಮೃತ ದೇಹಗಳಿಗೆ ಘನತೆಯ ಅಂತ್ಯಕ್ರಿಯೆ ನಡೆಸಲು ಸಾಧ್ಯವಾಗಿಲ್ಲ. ಸಾವಿರಾರು ಕುಟುಂಬಗಳು ದುಬಾರಿ ಆಸ್ಪತ್ರೆ ಬಿಲ್‌ಗಳನ್ನು ಪಾವತಿಸಲಾಗದೇ ಮೃತ ದೇಹಗಳನ್ನು ಕೊಂಡ್ಯೋಯಲು ಸಾಧ್ಯವಾಗಲಿಲ್ಲ. 700 ಕ್ಕೂ ಅಧಿಕ ಮಕ್ಕಳು ತಂದೆ, ತಾಯಿ ಇಬ್ಬರನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರಗಳು ಲಾಕ್‌ಡೌನ್ ಘೋಷಿಸಿ ಕೈತೊಳೆದುಕೊಂಡಿತು. ಪಕ್ಷ ಹಾಗೂ ಸಂಘಟನೆಗಳ ಒತ್ತಾಯಕ್ಕೆ ಮಣಿದು ಆರಂಭದಲ್ಲಿ 1,100 ಕೋಟಿ ನಂತರ 500 ಕೋಟಿ ಆರ್ಥಿಕ ನೆರವು ಘೋಷಿಸಿತು. ಹಾಗೆ ಪ್ರಕಟಿಸಿದ ಆರ್ಥಿಕ ನೆರವು ಸಂಪೂರ್ಣವಾಗಿ ಅಸಂಘಟಿತ ಕಾರ್ಮಿಕರಿಗೆ ದೊರೆಯಲಿಲ್ಲ. ಮಾಸಿಕ 10 ಸಾವಿರ ಕೋವಿಡ್ ಪರಿಹಾರ ಧನ ನೀಡಬೇಕೆಂದು ಬೇಡಿಕೆ ಇಟ್ಟು ಅಂತಹ ಕಿಷ್ಟಕರ ಪರಿಸ್ಥಿತಿಯಲ್ಲಿ ಹೋರಾಟ ನಡೆಸಿದರೂ ಕೇವಲ 3 ಸಾವಿರ ಆರ್ಥಿಕ ನೆರವು ಘೋಷಿಸಿತು ನ್ಯಾಯಾಲಯದ ಮಧ್ಯ ಪ್ರವೇಶದ ನಂತರ ರೇಷನ್ ಕಿಟ್‌ಗಳನ್ನು ನೀಡಲು ನಿರ್ಧರಿಸಲಾಯಿತು. ಆದರೂ ಕಳಪೆ ಕಿಟ್ಟುಗಳನ್ನು ವಿತರಿಸಿತು. ಅಲ್ಲದೆ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಕಲ್ಯಾಣ ನಿಧಿಯನ್ನು ಕಿಟ್ ಹೆಸರಿನಲ್ಲಿ ದುರುಪಯೋಗ ಪಡಿಸಿಕೊಂಡು ಬಿಜೆಪಿ ಎಂಎಲ್‌ಎ ಗಳ ಮೂಲಕ ವಿತರಿಸಿ ತನ್ನ ಸರ್ಕಾರದ ಸಾಧನೆ ಎಂಬಂತೆ ಬಿಂಬಿಸಿತು. ರಾಜ್ಯದ ಜನಸಂಖ್ಯೆಯಲ್ಲಿ 3 ಕೋಟಿಯಷ್ಟು ಜನ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಅಲೆಯಲ್ಲಿ ಅತಿ ಹೆಚ್ಚು ಬದುಕನ್ನು ಕಳೆದುಕೊಂಡದ್ದು ಅಸಂಘಟಿತ, ವಲಸೆ ಕಾರ್ಮಿಕರು ಆದರೆ ಅಸಂಘಟಿತ–ವಲಸೆ ಕಾರ್ಮಿಕರಿಗೆ ಆಹಾರ ಕಿಟ್ಟು ಕೊಡಬೇಕೆಂಬ ನ್ಯಾಯಾಲಯದ ನಿರ್ದೇಶನ ಇದ್ದರೂ ಅವುಗಳು ಸರಿಯಾಗಿ ತಲುಪಲು ಬೇಕಾದ ಹಣಕಾಸಿನ ನೆರವು ಸಿಗದ ಪರಿಣಾಮ ಲಕ್ಷಾಂತರ ಕುಟುಂಬಗಳು ಆಹಾರ ಕಿಟ್‌ನಿಂದ ವಂಚಿತವಾಗಿವೆ.

ಕೋವಿಡ್ ನಿಯಂತ್ರಣಕ್ಕಾಗಿ ಜೀವ ಒತ್ತೆ ಇಟ್ಟು ಕೆಲಸ ಮಾಡುತ್ತಿರುವವರು ಕೋವಿಡ್ ವಾರಿಯರ್ಸ್‌ಗಳಾದ ಸ್ಕೀಂ ನೌಕರರಿಗೆ ಹಾಗೂ ಅಸಂಘಟಿತ ವಲಯದ 10 ವಿಭಾಗಕ್ಕೆ ಘೋಷಿಸಿದ ಮೊದಲನೇ, ಎರಡನೇ ಅಲೆಯ ಆರ್ಥಿಕ ನೆರವು 3000 ಹಾಗೂ 2000 ಗಳನ್ನು ಪಡೆಯಲು ಸರ್ಕಾರ ವಿಧಿಸಿದ ಮಾನದಂಡಗಳಿಂದ ಬಹಳಷ್ಟು ಕಾರ್ಮಿಕರು ಈ ಪರಿಹಾರ ಪಡೆಯುವಲ್ಲಿ ವಂಚಿತರಾದರು. ಕೋವಿಡ್ ವಾರಿಯರ್ಸ್‌ಗಳು, ಆರೋಗ್ಯ ಕಾರ್ಯಕರ್ತರು, ಆಶಾ, ಅಂಗನವಾಡಿ, ಗ್ರಾಮ ಪಂಚಾಯ್ತಿ, ಮುನ್ಸಿಪಲ್, ಕೊರೊನಾ ತಡೆಗಟ್ಟಲು ಕೆಲಸ ಮಾಡಿದ ಇವರಿಗೆ ಕೇವಲ ಕೊರೋನಾ ಪೀಡಿತರಾಗಿ ಸಾವನಪ್ಪಿದವರಿಗೆ ಮಾತ್ರವೇ 30 ಲಕ್ಷ ರೂ. ಗಳನ್ನು ಪರಿಹಾರವಾಗಿ ನೀಡಿತಲ್ಲ ವಿನಹ ಇದೇ ಸಂದರ್ಭದಲ್ಲಿ ಕೆಲಸ ಮಾಡಿ ಕೋವಿಡೇತರ ಕಾಯಿಲೆಗಳಿಂದ ಮೃತಪಟ್ಟವರಿಗೆ ಯಾವ ಪರಿಹಾರ ಇಲ್ಲದೆ ವಂಚಿತರಾಗಿದ್ದಾರೆ. ಮೃತಪಟ್ಟ ನೌಕರರ ಕುಟುಂಬಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಈಡಾಗಿವೆ. ಆದ್ದರಿಂದ ಎಲ್ಲಾ ಕೋವಿಡ್ ವಾರಿಯರ್ಸ್‌ಗಳಿಗೂ ಆರ್ಥಿಕ ಭದ್ರತೆ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು. ಅಷ್ಟೇ ಅಲ್ಲ ಕೋವಿಡ್‌ನಿಂದ ಮೃತರಾದ ಎಲ್ಲರಿಗೂ ಸರ್ಕಾರ 1 ಲಕ್ಷ ರೂ. ಗಳ ಪರಿಹಾರ ಎಂದು ಘೋಷಿಸಿದ್ದು ಘೋಷಣೆಯಾಗಿ ಉಳಿದಿದೆಯಲ್ಲಾ ವಿನಹ ಇನ್ನ ಜಾರಿ ಆಗಲಿಲ್ಲ. ಮೃತ ಕುಟುಂಬಗಳಿಗೆ ಹಾಗೂ ವಾರಿಯರ್ಸ್‌ಗಳಿಗೆ ಘೋಷಿಸಿದಂತೆ ತಕ್ಷಣ ಪರಿಹಾರದ ಹಣ ಬಿಡುಗಡೆ ಮಾಡಬೇಕೆಂದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯುತ್ತಿರುವ 23ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಒತ್ತಾಯಿಸುತ್ತದೆ.

ಬಜೆಟ್ ನಲ್ಲಿ ಆರ್ಥಿಕ ಪುನಶ್ಚೇತನಕ್ಕೆ ನಿರ್ಮಲಾ ಸೀತಾರಾಂ ಏನು ಮಾಡಬೇಕು?




ಪ್ರೊ. ಟಿ.ಆರ್. ಚಂದ್ರಶೇಖರ್

ಸಾರ್ವಜನಿಕ ವೆಚ್ಚವನ್ನು ರೂ. 40 ಲಕ್ಷ ಕೋಟಿಗೇರಿಸಬೇಕು. ಆಗ ಮಾತ್ರ ನಮಗೆ 'ಕೆ' ವಿನ್ಯಾಸದ ಆರ್ಥಿಕ ಪುನಶ್ಚೇತನದ ನಕಾರಾತ್ಮಕ ಪರಿಣಾಮಗಳನ್ನು ಎದುರಿಸುವುದು ಸಾಧ್ಯ. ನೇರ ತೆರಿಗೆಗಳ ದರಗಳನ್ನು ಏರಿಕೆ ಮಾಡಬೇಕು ಮತ್ತು ಜಿ.ಎಸ್.ಟಿ. ದರಗಳನ್ನು ಶೇ.5 ಕ್ಕಿಂತ ಹೆಚ್ಚು ಮಾಡಬಾರದು. ಸೆಸ್ ಮತ್ತು ಸರ್ ಚಾರ್ಜ್‌ಗಳನ್ನು ಹಂಚಿಕೊಳ್ಳುವ ತೆರಿಗೆ ರಾಶಿಯ ಭಾಗ ಮಾಡಬೇಕು. ನಮಗೆ ಇಂದು 'ಉಳ್ಳವರ ಬಜೆಟ್ಟಿ'ಗೆ ಪ್ರತಿಯಾಗಿ 'ಉಳಿದವರ ಬಜೆಟ್ಟು' ಬೇಕಾಗಿದೆ.

ನಮ್ಮ ಆರ್ಥಿಕತೆಯು ಕಳೆದ ನಾಲ್ಕು–ಐದು ವರ್ಷಗಳಿಂದ ಆರ್ಥಿಕ ಕುಸಿತವನ್ನು ಅನುಭವಿಸಿಕೊಂಡು ಬರುತ್ತಿದೆ. ಉದಾ: ದೇಶದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಬೆಳವಣಿಗೆ ದರ 2016–17ರಲ್ಲಿ ಶೇ. 8.3 ರಷ್ಟಿದ್ದುದು 2017–18ರಲ್ಲಿ ಶೇ. 6.8ಕ್ಕೆ, 2018–19ರಲ್ಲಿ ಶೇ. 6.5ಕ್ಕೆ, 2019–20ರಲ್ಲಿ ಶೇ. 4.1 ಕ್ಕೆ ಇಳಿಯುತ್ತಾ ಬಂದಿದ್ದು ಕೊವಿಡ್ ಪೆಂಡಮಿಕ್‌ನಿಂದಾಗಿ 2020–21ರಲ್ಲಿ ಇದು ಶೇ. (–)7.3ರಷ್ಟು ಕುಸಿದಿದೆ. ಕೊವಿಡ್ ಪೆಂಡಮಿಕ್–ಪೂರ್ವದಲ್ಲಿಯೇ ನಮ್ಮ ಆರ್ಥಿಕತೆಯ ಸ್ಥಿತಿಗತಿಯು ಡಿಮಾನಿಟೈಸೇಶನ್ ಮತ್ತು ಜಿಎಸ್‌ಟಿಯ ನಿರ್ವಹಣೆಯಲ್ಲಿನ ವೈಫಲ್ಯದಿಂದಾಗಿ ಹದಗೆಟ್ಟಿತ್ತು. ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ಇದು ಮತ್ತಷ್ಟು ಗಂಭಿರವಾಯಿತು. ಕೊವಿಡ್ ಎರಡನೆಯ ಅಲೆಯ ನಂತರ ಆರ್ಥಿಕತೆಯು ಪುನಶ್ಚೇತನ ಆರಂಭವಾಗಿದೆ ಎನ್ನುವಾಗ ಅದರ ಮೂರನೆಯ ಅಲೆ ಮತ್ತೆ ಆರ್ಥಿಕತೆಗೆ ತಟ್ಟಿದೆ. ಆರ್ಥಿಕ ಪುನಶ್ಚೇತನ ಕುಂಠಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಈಗ 2022–23ನೆಯ ಸಾಲಿನ ಬಜೆಟ್ ಬಗ್ಗೆ ಚರ್ಚೆ ಮಾಡಬೇಕಾಗಿದೆ.

1. 'ಕೆ' ವಿನ್ಯಾಸದ ಆರ್ಥಿಕ ಪುನಶ್ಚೇತನ

ನಮ್ಮ ಆರ್ಥಿಕತೆಯು 2021–22ರಲ್ಲಿ ನಡೆಯುತ್ತಿರುವ ಆರ್ಥಿಕ ಪುನಶ್ಚೇತನವನ್ನು ಅನೇಕ ಅರ್ಥಶಾಸ್ತ್ರಜ್ಞರು ಇಂಗ್ಲೀಷ್ ವರ್ಣಮಾಲೆಯ 'ಕೆ' ಅಕ್ಷರದ ವಿನ್ಯಾಸದ ಮೂಲಕ ವಿವರಿಸಲು ಪ್ರಯತ್ನಿಸುತ್ತಿದ್ದಾರೆ. ಇದೊಂದು ಆಕರ್ಷಣೀಯ ಹಾಗೂ ವಿಚಾರಣೀಯ ವಿಶ್ಲೇಷಣೆಯಾಗಿದೆ. ಇದು ಸಮಾಜದಲ್ಲಿನ ಅಸಮಾನತೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ. ಇದನ್ನು ವಿಶ್ವ ಅಸಮಾನತೆ ವರದಿ 2021 ಮತ್ತು ಆಕ್ಸ್‌ಫಾಂ ವರದಿಗಳು ದೃಢಪಡಿಸುತ್ತಿವೆ. ಈ ಇಂಗ್ಲೀಷ್ ವರ್ಣಮಾಲೆಯ 'ಕೆ' ಅಕ್ಷರದ ಒಂದು ಕೈ ಮೇಲ್ಮುಖಿಯಾಗಿದ್ದರೆ ಮತ್ತೊಂದು ಕೆಳಮುಖಿಯಾಗಿರುತ್ತದೆ. ಇದರ ಒಂದು ವಿವರಣೆಯೆಂದರೆ ನಮ್ಮಲ್ಲಿ ನಡೆದಿರುವ ಪುನಶ್ಚೇತನವು ತೀವ್ರಗತಿಯಲ್ಲಿ ನಡೆದಿರುವ ಆರ್ಥಿಕ ಅಸಮಾನತೆಯ ಸೂಚಿ ಎಂಬುದಾಗಿದೆ. ಆರ್ಥಿಕತೆಯಲ್ಲಿ ಉನ್ನತ ವರ್ಗದ ವರಮಾನ, ಬೃಹತ್ ಉದ್ದಿಮೆಗಳ ಲಾಭ, ಆರ್ಥಿಕ ಪಿರಮಿಡ್‌ನ ಮೇಲುಸ್ತರದಲ್ಲಿನ ಜನ ವರ್ಗದ) ಎಲೀಟ್)ಆರ್ಥಿಕ ಸ್ಥಿತಿಗತಿಯು ತೀವ್ರಗತಿಯಲ್ಲಿ ಉತ್ತಮವಾಗುತ್ತಿದ್ದರೆ ಆರ್ಥಿಕ ಪಿರಮಿಡ್‌ನ ಕೆಳಸ್ತರಲ್ಲಿನ ಬಹುಭಾಗ ಜನರ ಆರ್ಥಿಕ ಸ್ಥಿತಿಗತಿ ಹಾಗೂ ಯಾವುದನ್ನು ನಾವು ಒಖಒಇ (ಮೈಕ್ರೋ–ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು) ಎನ್ನುತ್ತೇವೆಯೋ ಆ ಉದ್ಯಮ ವಲಯವು ತೀವ್ರಗತಿಯಲ್ಲಿ ಕುಸಿತವನ್ನು ಅನುಭವಿಸುತ್ತಿರುವುದನ್ನು, ವರಮಾನದಲ್ಲಿನ ಕೊರತೆಯನ್ನು ಈ 'ಕೆ' ರೂಪದ ಆರ್ಥಿಕ ಪುನಶ್ಚೇತನ ಸೂಚಿಸುತ್ತದೆ ಎನ್ನುತ್ತಾರೆ ತಜ್ಞರು. ಇದು ನಿಜ. ಉದಾ: ಒಖಒಇ ವಲಯವನ್ನು ಅವಲಂಬಿಸಿರುವ 11 ಕೋಟಿ ಕಾರ್ಮಿಕ ವರ್ಗ ಉದ್ಯೋಗ ಅಭದ್ರತೆಯಿಂದ, ವರಮಾನ



ಕುಸಿತದಿಂದ ದುಸ್ಥಿತಿಯನ್ನು ಅನುಭವಿಸುತ್ತಿದೆ. ಇದೇ ಸಮಯದಲ್ಲಿ ಇದೇ ಆರ್ಥಿಕತೆಯ ಬೃಹತ್ ಉದ್ದಿಮೆ ರಂಗವು ತೀವ್ರಗತಿಯಲ್ಲಿ ಲಾಭ ಗಳಿಸುತ್ತಿದೆ. ಬೃಹತ್ ಸಂಖ್ಯೆಯ ಬಡವರ, ಕಾರ್ಮಿಕರ, ಮಹಿಳೆಯರ, ರೈತರ ಆರ್ಥಿಕ ಕುಸಿತದ ಲಾಭವನ್ನು ಬೃಹತ್ ಉದ್ಯಮ ವಲಯ ಮತ್ತು ಅಲ್ಲಿನ ಎಲೈಟ್ ವರ್ಗವು ಅನುಭವಿಸುತ್ತಿದೆ. ಇದೊಂದು ಆತಂಕಕಾರಿ ಮತ್ತು ಅಪಾಯಕಾರಿ ಬೆಳವಣಿಗೆಯಾಗಿದೆ. ಈ ಆತಂಕಕಾರಿ ಬೆಳವಣಿಗೆಯನ್ನು 2022–23ರ ಬಜೆಟ್ಟಿನಲ್ಲಿ ಹೇಗೆ ಎದುರಿಸಲಾಗುತ್ತದೆ ಎಂಬುದು ಕುತೂಹಲಕಾರಿ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ 2022–23ನೆಯ ಸಾಲಿನ ಬಜೆಟ್ಟಿನ ಚರ್ಚೆ ನಡೆಯಬೇಕಾಗಿದೆ.

2. ತೆರಿಗೆಗಳಲ್ಲಿನ ವಿನಾಯಿತಿ–ರಿಯಾಯಿತಿಗಳೇ ಬಜೆಟ್ ಚರ್ಚೆಯಲ್ಲ!!

ಬಜೆಟ್ ಎಂದ ತಕ್ಷಣ ನಮ್ಮ ಉಳ್ಳವರ ವಾರ್ತಾ ಮಾಧ್ಯಮಗಳು, ಟಿ.ವಿ. ಮಾಧ್ಯಮಗಳು, ಅಂತರ್ ಜಾಲಗಳಲ್ಲಿ ನಡೆಯುವ ಚರ್ಚೆಗಳು ಸಾಮಾನ್ಯವಾಗಿ ವರಮಾನ ತೆರಿಗೆಯಲ್ಲಿ ಏನೆಲ್ಲ ರಿಯಾಯತಿಯಿರುತ್ತದೆ, ಕಾರ್ಪೋರೇಟ್ ವರಮಾನ ತೆರಿಗೆಯಲ್ಲಿ ಯಾವೆಲ್ಲ ವಿನಾಯಿತಿಯಿರುತ್ತದೆ, ವೈಯುಕ್ತಿಕ ವರಮಾನ ತೆರಿಗೆಯಲ್ಲಿ ತೆರಿಗೆ–ಮುಕ್ತ ವರಮಾನ ಮಿತಿಯಲ್ಲಿ ಎಷ್ಟು ಹೆಚ್ಚಿಸಲಾಗುತ್ತದೆ ಎಂಬುದರ ಸುತ್ತಲೇ ನಡೆಯುತ್ತವೆ. ಅಂದರೆ ಈ ಚರ್ಚೆಯು ಯಾವುದನ್ನು 'ಕೆ' ಅಕ್ಷರ ವಿನ್ಯಾಸದ ಪುನಶ್ಚೇತನ ಎನ್ನಲಾಗಿದೆಯೋ ಅದರ ಮೇಲ್ಮುಖಿ ಕೈ ಬಗ್ಗೆ ಇರುತ್ತದೆ ವಿನಾ ಅದರ ಕೆಳಮುಖಿ ಕೈ ಬಗ್ಗೆ ಇಲ್ಲಿ ಚರ್ಚೆಗಳು ನಡೆಯುವುದಿಲ್ಲ. ನಮಗೆ ಮುಖ್ಯವಾಗಬೇಕಾದುದು ಆರ್ಥಿಕತೆಯ ಬಹುಪಾಲು ದುಡಿಯುವ ವರ್ಗವನ್ನು, ರೈತಾಪಿಗಳನ್ನು, ಕರಕುಶಲ ಕೆಲಸಗಾರರನ್ನು, ಮಹಿಳೆಯರನ್ನು, ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ 'ಕೆ' ಅಕ್ಷರದ ಕೆಳಮುಖಿ ಕೈಯೇ ವಿನಾ ಅದರ ಮೇಲ್ಮುಖಿಕೈಯಲ್ಲ. ಬಜೆಟ್ಟಿ ಕುರಿತ ಚರ್ಚೆಯಲ್ಲಿ ಅದರ ಸಾರ್ವಜನಿಕ ವೆಚ್ಚದ ಭಾಗ ಮುಖ್ಯವಾಗಬೇಕು. ಏಕೆಂದರೆ ಸಾರ್ವಜನಿಕ ಹಣಕಾಸಿನಲ್ಲಿ ವೆಚ್ಚವು ರೆವಿನ್ಯೂವನ್ನು ನಿರ್ಧರಿಸುತ್ತದೆ. ಆದರೆ ವೈಯುಕ್ತಿಕ ಹಣಕಾಸಿನಲ್ಲಿ ಆದಾಯವು ವೆಚ್ಚವನ್ನು ನಿರ್ಧರಿಸುತ್ತದೆ.

3. ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಬೇಕು

ಒಕ್ಕೂಟ ಸರ್ಕಾರದ 2019–20ರ ಸಾರ್ವಜನಿಕ ವೆಚ್ಚರೂ. 26.86 ಲಕ್ಷ ಕೋಟಿ. ಇದು 2020–21ರಲ್ಲಿ ರೂ. 34.50 ಲಕ್ಷ ಕೋಟಿಗೇರಿತು. ಇಲ್ಲಿನ ವಾರ್ಷಿಕ ಏರಿಕೆ ಪ್ರಮಾಣ ಶೇ. 28.44. ಆದರೆ 2021–22ರಲ್ಲಿನ ಸಾರ್ವಜನಿಕ ವೆಚ್ಚ ರೂ. 34.83 ಲಕ್ಷ ಕೋಟಿ. ಇಲ್ಲಿನ ವಾರ್ಷಿಕ ಏರಿಕೆ ಶೇ. 0.96. ಮೇಲಾಗಿ 2020–21ರ ಸಾರ್ವಜನಿಕ ವೆಚ್ಚವು ಜಿಡಿಪಿಯ ಶೇ. 17.70 ರಷ್ಟಿದ್ದರೆ 2021–22ರಲ್ಲಿನ ಸಾರ್ವಜನಿಕ ವೆಚ್ಚವು ಜಿಡಿಪಿಯ ಶೇ. 15.63 ರಷ್ಟಾಗಿದೆ. ಅಂದರೆ ಕಳೆದ ಎರಡು–ಮೂರು ವರ್ಷಗಳಿಂದ ಒಕ್ಕೂಟ ಸರ್ಕಾರಕ್ಕೆ ಸಾರ್ವಜನಿಕ ವೆಚ್ಚವನ್ನು ತೀವ್ರ ಪ್ರಮಾಣದಲ್ಲಿ ಹೆಚ್ಚಿಸುವುದಕ್ಕೆ ಸಾಧ್ಯವಾಗಿಲ್ಲ. ಸಮಾಜದಲ್ಲಿ ಪಿರಮಿಡ್‌ನ ಕೆಳಸ್ತರದ ಬೃಹತ್ ಜನಸ್ತೋಮದ ಆರ್ಥಿಕ ಸ್ಥಿತಿಗತಿಯು ಏಕೆ ಮೂರಾಬಟ್ಟೆಯಾಗಿದೆ ಎನ್ನುವುದಕ್ಕೆ ಇಲ್ಲಿದೆ ಉತ್ತರ. ಪೆಂಡಮಿಕ್‌ನ ಪರಿಣಾಮ ಒಂದು ಕಡೆ: ಮತ್ತೊಂದು ಕಡೆ ಸರ್ಕಾರ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸದಿರುವುದು. ಆದ್ದರಿಂದ ಒಕ್ಕೂಟ ಸರ್ಕಾರವು 2022–23ರಲ್ಲಿ ಸಾರ್ವಜನಿಕ ವೆಚ್ಚವನ್ನು ರೂ. 40 ಲಕ್ಷಕೋಟಿ ಗೇರಿಸಬೇಕು. ಆಗ ಮಾತ್ರ ನಮಗೆ 'ಕೆ' ವಿನ್ಯಾಸದ ಆರ್ಥಿಕ ಪುನಶ್ಚೇತನದ ನಕಾರಾತ್ಮಕ ಪರಿಣಾಮಗಳನ್ನು ಎದುರಿಸುವುದು ಸಾಧ್ಯ. ಇಷ್ಟಾದರೂ 2021–22 ಮತ್ತು 2022–23ರ ನಡುವಿನ ಸಾರ್ವಜನಿಕ ವೆಚ್ಚದ ಬೆಳವಣಿಗೆ ಕೇವಲ ಶೇ. 14.84 ರಷ್ಟಾಗುತ್ತದೆ. ಇಷ್ಟನ್ನಾದರೂ ವಿತ್ತ ಮಂತ್ರಿ ನಿರ್ವಹಿಸಬೇಕು.

4. ನಮ್ಮ ತೆರಿಗೆ ನೀತಿ

ಸಾರ್ವಜನಿಕ ವೆಚ್ಚವನ್ನು ವಿತ್ತಮಂತ್ರಿಗೆ ಹೆಚ್ಚಿಸಲು ಏಕೆ ಸಾಧ್ಯವಾಗುತ್ತಿಲ್ಲ? ಇದಕ್ಕೆ ಉತ್ತರ ಅವರು ಅನುಸರಿಸುತ್ತಿರುವ ತೆರಿಗೆ ನೀತಿಯಲ್ಲಿದೆ. 2013–14 ರಿಂದ ನಾವು ಅನುಸರಿಸುತ್ತಿರುವ ತೆರಿಗೆ ನೀತಿ 'ಪ್ರತಿಗಾಮಿ'ಯಾದುದಾಗಿದೆ. ಉದಾ: 2020–21ರಲ್ಲಿ ನೇರ ತೆರಿಗೆಗಳ ಮೊತ್ತವು ಜಿಡಿಪಿಯ ಶೇ.4.79 ರಷ್ಟಿದ್ದರೆ ಪರೋಕ್ಷ ತೆರಿಗೆಗಳ ಮೊತ್ತಜಿಡಿಪಿಯ ಶೇ. 5.48 ರಷ್ಟಿದೆ. ಈ ಸರ್ಕಾರವು ತನ್ನ ರೆವಿನ್ಯೂಗೆ ನೇರ ತೆರಿಗೆಗಳಿಗೆ ಬದಲಾಗಿ ಪರೋಕ್ಷ ತೆರಿಗೆಗಳನ್ನು ಅವಲಂಬಿಸಿದೆ. ಸ್ವಾತಂತ್ರೋತ್ತರ ಕಾಲದ ಮಹತ್ವದ ತೆರಿಗೆ ಸುದಾರಣೆ ಎಂಬು ಕರೆಯಲಾಗುವ ಜಿಎಸ್‌ಟಿ ವ್ಯಸನದಲ್ಲಿ ಸರ್ಕಾರ ಮುಳುಗಿ ಹೋಗಿದೆ. ನೇರ ತೆರಿಗೆಗಳು ವರಮಾನದ ಮಟ್ಟಕ್ಕೆ ತಕ್ಕಂತೆ ಇದ್ದರೆ ಜಿಎಸ್‌ಟಿಯು ದೇಶದ 140 ಕೋಟಿ ಪ್ರಜೆಗಳಿಗೂ ಸಮನಾಗಿರುತ್ತದೆ. ಈ ಸರ್ಕಾರಕ್ಕೆ ಕಾರ್ಮಿಕರು, ರೈತರು, ಒಖಒಇ ಘಟಕಗಳನ್ನು ನಡೆಸುವವರ ಬಗ್ಗೆ ಪ್ರಚ್ಛನ್ನತಿರಸ್ಕಾರವಿದೆ. ಉಳ್ಳವರನ್ನು ಪೋಷಿಸುವುದು, ಬೃಹತ್ ಉದ್ಯಮಪತಿಗಳಿಗೆ ತೆರಿಗೆ ವಿನಾಯಿತಿ ನೀಡುವುದು, ಸಾರ್ವಜನಿಕ ಸಂಪನ್ಮೂಲಗಳಾದ ಭೂಮಿ, ನೀರು, ಇಂಧನ ಮುಂತಾದವುಗಳನ್ನು ಸೋವಿ ದರಕ್ಕೆ ನೀಡುವುದು ಇಂದಿನ ಸರ್ಕಾರದ ಪಾಲಿಸಿಯಾಗಿದೆ.

ಈ ಕಾರಣಕ್ಕೆ ಸರ್ಕಾರದರೆ ವಿನ್ಯೂನ ಮೂಲವಾದ ತೆರಿಗೆ ಮತ್ತು ತೆರಿಗೆಯೇತರ ಮೂಲಗಳನ್ನು ಬಿಟ್ಟು ಇದು ಸಾರ್ವಜನಿಕ ಆಸ್ತಿಗಳನ್ನು ಮಾರಾಟ ಮಾಡುವ (ರಾಷ್ಟ್ರೀಯ ಮಾನಿಟೈಸೇಶನ್ ಪೈಪ್‌ಲೈನ್), ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ (ಎಲ್‌ಐಸಿ, ಬಿಪಿಸಿಎಲ್, ಐಡಿಬಿಐ, ಏರ್ ಇಂಡಿಯಾ ಮುಂತಾದವು) ರೈಲು ಮಾರ್ಗಗಳು, ಟೆಲಿಸಂಪರ್ಕ ಮಾರ್ಗಗಳು, ಸರ್ಕಾರಿ ಭೂಮಿ ಗುತ್ತಿಗೆ ನೀಡುವುದು ಮುಂತಾದ ಮಾರ್ಗಗಳನ್ನು ಹಿಡಿದಿದೆ. ಇದು ಸಾರ್ವಜನಿಕ ಹಣಕಾಸು ನಿರ್ವಹಣೆ ಕ್ರಮವಲ್ಲ. ಇವೆಲ್ಲ ವಿತ್ತೀಯ ಅಶಿಸ್ತಿನ ಸೂಚಿಗಳು. ಈಗಲಾದರೂ ಸರ್ಕಾರ ಕಣ್ಣು ತೆರೆದು ತೆರಿಗೆಗಳ ಮೂಲಕ, ಅದರಲ್ಲೂ ನೇರ ತೆರಿಗೆಗಳ ಮೂಲಕ ಸಂಪನ್ಮೂಲ ಸಂಗ್ರಹ ಮಾಡಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವ ಕ್ರಮವನ್ನು 2022–23ನೆಯ ಬಜೆಟ್ಟಿನಲ್ಲಿ ತೆಗೆದುಕೊಳ್ಳಬೇಕು. ತೆರಿಗೆ ವಿನಾಯತಿ–ರಿಯಾಯತಿ ನೀಡಿದರೆ ಬಂಡವಾಳ ಹೂಡಿಕೆಯಲ್ಲಿ ಏರಿಕೆಯಾಗುತ್ತದೆ ಎಂಬ ಸರ್ಕಾರದ ನೀತಿ ವಿಫಲವಾಗಿದೆ. ಏಕೆಂದರೆ 2011–12ರಲ್ಲಿ ಜಿಡಿಪಿಯ ಶೇ. 40 ರಷ್ಟಿದ್ದ ಬಂಡವಾಳ ಹೂಡಿಕೆಯು ಈಗ ಜಿಡಿಪಿಯ ಶೇ. 32.5 ರಷ್ಟಾಗಿದೆ. ಇದರಿಂದ ಸರ್ಕಾರ ಪಾಠ ಕಲಿಯಬೇಕು.


5. ಖಾಸಗೀಕರಣದ ಹಿಂದಿನ ಹುನ್ನಾರವೇನು?

ಸಾರ್ವಜನಿಕ ಉದ್ದಿಮೆಗಳಲ್ಲಿನ ಸರ್ಕಾರಿ ಹೂಡಿಕೆಯನ್ನು ಖಾಸಗಿಯವರಿಗೆ ನೀಡುವ ಕ್ರಮದಲ್ಲಿ ಅವುಗಳ ಬಂಡವಾಳ ಸ್ಥಿತಿಯನ್ನು ಉತ್ತಮಪಡಿಸುವಉದ್ದೇಶವೇನಿಲ್ಲ. ಖಾಸಗೀಕರಣ ಮತ್ತು ಡಿಸ್‌ಇನ್‌ವೆಸ್ಟ್‌ಮೆಂಟ್ ಮೂಲಕ ಪ್ರಚ್ಛನ್ನವಾಗಿ ಸಂಪನ್ಮೂಲವನ್ನು ತಮ್ಮ ಹಣಕಾಸು ನಿರ್ವಹಣೆಯಿಂದ ಕೈಮೀರುತ್ತಿರುವ ವಿತ್ತೀಯ ಕೊರತೆಯನ್ನು ಸರಿದೂಗಿಸಲು ಬಳಸಿಕೊಳ್ಳುವುದು ಇದರ ಉದ್ದೇಶವಾಗಿದೆ. ವಿತ್ತೀಯ ಕೊರತೆಯ ಬಗ್ಗೆ ಸರ್ಕಾರ ನಿಲುವು ಸರಿಯಿಲ್ಲ. ವಿತ್ತೀಯ ಕೊರತೆಯು ಯಾವಾಗಲೂ ಅಪಾಯಕಾರಿ ಸಂಗತಿಯೇನಲ್ಲ. ವಿತ್ತೀಯ ಕೊರತೆಯನ್ನು ಉತ್ಪಾದಕ ಕ್ಷೇತ್ರಗಳಲ್ಲಿ ತೊಡಗಿಸುವ ಮೂಲಕ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಬಹುದು, ಉತ್ಪಾದನೆಯನ್ನು ಬಲಪಡಿಸಬಹುದು. ಆ ಮೂಲಕ ಸಮಗ್ರ ಬೇಡಿಕೆಯನ್ನು ಶಕ್ತಿಯುತವನ್ನಾಗಿ ಮಾಡಬಹುದು. ಭಾರತೀಯ ಮತ್ತು ಅಂತಾರಾಷ್ಟ್ರೀಯ ಅರ್ಥಶಾಸ್ತ್ರಜ್ಞರೆಲ್ಲ 2017–18 ರಿಂದಲೂ ಆರ್ಥಿಕತೆಯಲ್ಲಿನ ಸಮಗ್ರ ಬೇಡಿಕೆಯನ್ನು ಬಲಪಡಿಸುವ ಬಗ್ಗೆ, ಜನರ ಕೈಯಲ್ಲಿ ಹೆಚ್ಚು ಹೆಚ್ಚು ಹಣ ಸರಬರಾಜಾಗುವಂತೆ ಮಾಡುವ ಬಗ್ಗೆ ಸಲಹೆ, ಒತ್ತಾಯ ಮಾಡುತ್ತಾ ಬಂದಿದ್ದಾರೆ. ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ. 3 ರಷ್ಟು ಅಥವಾ ಶೇ. 4 ರಷ್ಟು ಇಲ್ಲವೇ ಶೇ. 5 ರಷ್ಟಿರಬೇಕು ಎಂಬುದು ನಮ್ಮಂತಹ ಅಭಿವೃದ್ಧಿಶೀಲ ಮತ್ತು ವಿಶಾಲ ಮಾರುಕಟ್ಟೆ ಹೊಂದಿರುವ ಆರ್ಥಿಕತೆಗೆ ಸಲ್ಲ. ಆದರೆ ಈ ಸರ್ಕಾರಕ್ಕೆ ಸಾರ್ವಜನಿಕ ಬಂಡವಾಳ ಹೂಡಿಕೆ ಬಗ್ಗೆ ನಂಬಿಕೆಯೇ ಇಲ್ಲವಲ್ಲ!!. 'ಸಾರ್ವಜನಿಕ ಹಣಕಾಸು ಅನಕ್ಷರತೆ'ಯಿಂದ ಸರ್ಕಾರ ನರಳುತ್ತಿದೆ. ನಮ್ಮ ಪ್ರಧಾನ ಮಂತ್ರಿ ಹೇಳುವ 'ವ್ಯಾಪಾರ ಮಾಡುವುದು ಸರ್ಕಾರದ ಕೆಲಸವಲ್ಲ' ಎಂಬ ಮಾತು ಇದನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ. ಇದು ತಪ್ಪು ಧೋರಣೆ. 'ಸರ್ಕಾರ'ವು ಒಂದು ಸಾರ್ವಜನಿಕ ಘಟಕ. ಇದನ್ನೂ ಸರ್ಕಾರ ಮಾರಾಟ ಅಥವಾ ಗುತ್ತಿಗೆ ನೀಡುತ್ತದೇನು?

6. ಒಕ್ಕೂಟ ತತ್ವದ ಉಲ್ಲಂಘನೆ

ಒಕ್ಕೂಟ ತತ್ವವು ನಮ್ಮ ಸಂವಿಧಾನದ ಮೂಲ ರಚನೆಯಾಗಿದೆ. ಇದನ್ನು ಬದಲಾಯಿಸಲು ಬರುವುದಿಲ್ಲ. ಆದರೆ 2013–14ರಿಂದಲೂ ಭಾರತ ಸರ್ಕಾರವು ಸಂವಿಧಾನದಲ್ಲಿನ ಒಕ್ಕೂಟ ಹಕ್ಕುಗಳನ್ನು ತೊಡೆದು ಹಾಕುತ್ತಿದೆ. ನೀಟ್ (ನ್ಯಾಶನಲ್‌ಎಲಿಜಿಬಿಲಿಟಿ ಕಂ ಎಂಟ್ರೆನ್ಸ್‌ಟೆಸ್ಟ್)

ಪುಟ 11 ನೋಡಿ



ಕೃಪೆ: ಅಲೋಕ್ ನಿರಂತರ್, ಸಕಾಳ ಮೀಡಿಯಾ ಗ್ರೂಪ್



ಎಲ್‌ಐಸಿಯನ್ನು ಬುಡಮೇಲು ಮಾಡುವ ಹಾನಿಕಾರಕ ಹೆಜ್ಜೆ

*ಪ್ರಕಾಶ್ ಕಾರಟ್

'ಎಲ್‌ಐಸಿಯ ಲಿಸ್ಟಿಂಗ್ ಮತ್ತು ಅದರ ಬಂಡವಾಳ ವಾಪಸ್ ಪಡೆಯುವುದುರಿಂದ ದುರ್ಬಲ ಜನವಿಭಾಗಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ಸಂಸ್ಥೆಯಾಗಿ ಅದರ ಪಾತ್ರವನ್ನು ಆಮೂಲಾಗ್ರವಾಗಿ ಬದಲಾಗುತ್ತದೆ. ಕೋಟ್ಯಂತರ ಸಂಖ್ಯೆಯ ಸಣ್ಣ ಪಾಲಿಸಿದಾರರ ಪ್ರಮುಖ ಪಾತ್ರವನ್ನು ನಗಣ್ಯಗೊಳಿಸುತ್ತದೆ. ಲಾಭ ಬಡುಕ ಶ್ರೀಮಂತ ಹೂಡಿಕೆದಾರರ ಪರವಾಗಿ ಪಾತ್ರ ನಿರ್ವಹಿಸಲಿದೆ. ಪರೋಕ್ಷವಾಗಿ, ಕುಟುಂಬಗಳ ಉಳಿತಾಯದ ಬೃಹತ್ ಮೊತ್ತದ ನಿಯಂತ್ರಣವನ್ನು ವಿದೇಶಿ ಹೂಡಿಕೆದಾರರ ಸಹಿತ ಖಾಸಗಿಯವರಿಗೆ ಹಸ್ತಾಂತರಿಸುವ ವಿವೇಚನಾರಹಿತ ಕ್ರಮವಾಗಲಿದೆ' ಎಂದು ಸಾರ್ವಜನಿಕ ವಲಯದ ಉದ್ದಿಮೆಗಳು ಹಾಗೂ ಸಾರ್ವಜನಿಕ ಸೇವೆಗಳ ಕುರಿತ ಜನತಾ ಆಯೋಗವು ಹೇಳಿದೆ.
ಎಲ್‌ಐಸಿ ಮತ್ತು ಸಾರ್ವಜನಿಕ ವಲಯವನ್ನು ಬುಡಮೇಲು ಮಾಡುವ ಪ್ರಕ್ರಿಯೆ ನಿಲ್ಲಬೇಕು. ಈ ಆಕ್ರಮಣವನ್ನು ತಡೆಯ ಬೇಕಾದರೆ ಎಲ್ಲ ಜನತಾಂತ್ರಿಕ ಮತ್ತು ದೇಶಪ್ರೇಮಿ ಶಕ್ತಿಗಳು ದೊಡ್ಡ ಪ್ರಮಾಣದಲ್ಲಿ ಒಂದಾಗಿ ನಿಲ್ಲುವುದು ಅಗತ್ಯ. ವಿಶಾಲ ಹೋರಾಟವಾಗಿ ಅದು ಬೆಳೆದು ಬರಬೇಕು. ಹಾಗೂ ದುಡಿಯುವ ವರ್ಗದ ಸಂಘಟಿತ ಸಂಘರ್ಷದ ಭಾಗವಾಗಬೇಕು. ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಕರೆ ನೀಡಿರುವ ಫೆಬ್ರವರಿ 23–24ರ ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ಈ ಹೋರಾಟದಲ್ಲಿ ಒಂದು ಪ್ರಮುಖ ಹಂತವಾಗಲಿದೆ.

ಮೋದಿ ಸರ್ಕಾರದ ಖಾಸಗೀಕರಣ ಅಭಿಯಾನದ ಅತಿ ಕೆಟ್ಟ ಮುಖ ಈಗ ಬಯಲಿಗೆ ಬರುತ್ತಿದೆ. ಹಣಕಾಸು ಕ್ಷೇತ್ರದ ಮುಕುಟಮಣಿಯಾದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳನ್ನು ಸಾರ್ವಜನಿಕವಾಗಿ ಮಾರಾಟ ಮಾಡುವ ಸಂಬಂಧದ (ಇನಿಷಿಯಲ್ ಪಬ್ಲಿಕ್ ಆಫರಿಂಗ್–ಐಪಿಒ) ವಿವರಗಳನ್ನು ಫೆಬ್ರವರಿಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಭಾರತದಲ್ಲಿ ಜೀವ ವಿಮಾ ಸಂಸ್ಕೃತಿಯನ್ನು ಹರಡುವಲ್ಲಿ ಮುಂಚೂಣಿ ಪಾತ್ರ ವಹಿಸಿರುವ ಎಲ್‌ಐಸಿ ಒಂದು ವಿಶಿಷ್ಟ ನಿಗಮವಾಗಿದೆ. ಎಲ್‌ಐಸಿ ಮೂಲಕ ಸಾಧಿಸಲಾದ ಜೀವ ವಿಮೆಯ ವ್ಯಾಪಕ ಕವರೇಜ್, ಸರ್ಕಾರಿ ಬೆಂಬಲಿತ ಯಾವುದೇ ಸಾಮಾಜಿಕ ಭದ್ರತಾ ಯೋಜನೆ ಇಲ್ಲದ ಹಿನ್ನೆಲೆಯಲ್ಲಿ ಒಂದು ಮಹತ್ವದ ಅಂಶವಾಗಿದೆ. ಅದು ಜನರಿಗೆ, ಅದರಲ್ಲೂ ಮುಖ್ಯವಾಗಿ ಬಡವರಿಗೆ ಹಾಗೂ ಇತರ ದುರ್ಬಲ ವರ್ಗಗಳಿಗೆ ರಕ್ಷಣೆಯನ್ನು ಒದಗಿಸುತ್ತದೆ.

ವಿಶಿಷ್ಟ ಸಂರಚನೆ ಹೊಂದಿರುವ ಎಲ್‌ಐಸಿಗೆ ಜನ ಸಾಮಾನ್ಯರಿಗೆ ವಿಮೆ ಒದಗಿಸಲು ಸಾಧ್ಯವಾಗಿದೆ. ನಿಗಮದ ಪ್ರಮುಖ ಹೂಡಿಕೆದಾರನಾದ ಭಾರತ ಸರ್ಕಾರಕ್ಕೆ ನಿಗಮದ ಲಾಭದಲ್ಲಿ ಸಿಗುವ ಪಾಲು ಶೇಕಡ ಐದು ಮಾತ್ರವಾಗಿದೆ. ಶೇಕಡ 95 ಲಾಭಾಂಶವು ಪಾಲಿಸಿದಾರರಿಗೆ ನೀಡುವುದು ಕಡ್ಡಾಯವಾಗಿದೆ. ಈಗ ಬಂಡವಾಳ ವಾಪಸಾತಿ ಹಿನ್ನೆಲೆಯಲ್ಲಿ ಅದನ್ನು ಶೇಕಡ 90ಕ್ಕೆ ಇಳಿಸಲಾಗಿದೆ. ಈ ರೀತಿಯಾಗಿ, ಇತರ ಕಂಪೆನಿಗಳಂತಲ್ಲದೆ, ಹೆಚ್ಚಿನ ಲಾಭಾಂಶವನ್ನು ಷೇರುದಾರರ ಬದಲು ಪಾಲಿಸಿದಾರರಿಗೇ ನೀಡಲಾಗುತ್ತದೆ.

1956ರಲ್ಲಿ ಎಲ್‌ಐಸಿ ಸ್ಥಾಪನೆಯಾಯಿತು. ವ್ಯಾಪಕವಾಗಿ ವಿಮಾ ಕವರೇಜ್ ನೀಡುವ ತನ್ನ ಘೋಷಿತ ಉದ್ದೇಶವನ್ನು ಅದು ಉಳಿಸಿಕೊಂಡಿದೆ. ಅದರಲ್ಲೂ 'ವಿಶೇಷವಾಗಿ ಗ್ರಾಮೀಣ ಪ್ರದೇಶಗಳು ಮತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕವರೇಜ್ ನೀಡುವ ಗುರಿಯನ್ನು ಈಡೇರಿಸಿದೆ'.

ವಿಮಾ ಕ್ಷೇತ್ರಕ್ಕೆ ಖಾಸಗಿಯವರ ಪ್ರವೇಶಕ್ಕೆ ಅವಕಾಶ ನೀಡಿದ ನಂತರವೂ ಜೀವ ವಿಮೆ ವ್ಯವಹಾರ ವಲಯದಲ್ಲಿ ಮೇಲುಗೈ ಉಳಿಸಿಕೊಳ್ಳಲು ಎಲ್‌ಐಸಿ ಯಶಸ್ವಿಯಾಗಿದೆ. ಜೀವ ವಿಮೆ ಪಾಲಿಸಿ ನೀಡಿಕೆ ವಿಚಾರದಲ್ಲಿ ಈ ಕ್ಷೇತ್ರದ ಒಟ್ಟು ಪಾಲಿಸಿಗಳಲ್ಲಿ ಮುಕ್ಕಾಲು ಪಾಲು ಎಲ್‌ಐಸಿಯದ್ದೇ ಆಗಿದೆ. 2020–21ರಲ್ಲಿ ಎಲ್‌ಐಸಿ 3.03 ಲಕ್ಷ ಕೋಟಿ ರೂಪಾಯಿ ಪ್ರೀಮಿಯಂ ಆದಾಯ ಗಳಿಸಿತ್ತು. ಸುಮಾರು 40 ಕೋಟಿ ಪಾಲಿಸಿದಾರರು ಅದರ ಆಧಾರವಾಗಿದ್ದಾರೆ. ಸ್ಥಾಪನೆಯಾದಾಗಿನಂದ ಸರ್ಕಾರಕ್ಕೆ ಎಲ್‌ಐಸಿ 28,695 ಕೋಟಿ ರೂಪಾಯಿ ಡಿವಿಡೆಂಡ್ ಪಾವತಿಸಿದೆ. ಬ್ಯಾಂಕ್‌ಗಳು ಮತ್ತು ಇತರ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಗಣನೀಯ ಬಂಡವಾಳ ಹೂಡಿಕೆ ಮಾಡಿದೆ. ಮೂಲಸೌಕರ್ಯ ಮತ್ತು ರಾಜ್ಯಗಳಲ್ಲಿ ಸಾಮಾಜಿಕ ವಲಯದ ಯೋಜನೆಗಳಲ್ಲಿ ನಿಗಮದ ಪಾಲು ಗಣನೀಯವಾಗಿದೆ. 2020–21ರಲ್ಲಿ ಇದರ ಕೊಡುಗೆ 26,322 ಕೋಟಿ ರೂಪಾಯಿ ಆಗಿದೆ.

ಎಲ್‌ಐಸಿ ಸ್ವರೂಪದಲ್ಲಿ ಪ್ರತಿಗಾಮಿ ಬದಲಾವಣೆ

ಇಂಥ ಒಂದು ಅಭೂತಪೂರ್ವವಾದ ಸಾರ್ವಜನಿಕ ವಲಯದ ನಿಗಮವನ್ನು ಈಗ ಖಾಸಗಿ ಹೂಡಿಕೆದಾರರಿಗೆ ಮುಕ್ತಗೊಳಿಸಲಾಗಿದೆ. ಭಾರತೀಯ ಹಾಗೂ ವಿದೇಶಿ ಕಂಪೆನಿಗಳಿಗೆ ಅದನ್ನು ತೆರೆದಿಡಲಾಗಿದೆ. ಷೇರು ಮಾರಾಟಕ್ಕೆ ಅನುಕೂಲವಾಗುವಂತೆ ಎಲ್‌ಐಸಿಯನ್ನು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಪಟ್ಟಿ ಮಾಡಲು (ಲಿಸ್ಟಿಂಗ್) 2021–22ರ ಹಣಕಾಸು ಮಸೂದೆ ಮೂಲಕ ಎಲ್‌ಐಸಿ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಮುಂದಿನ ದಶಕದಲ್ಲಿ ಖಾಸಗಿಗೆ ಅನುಕೂಲವಾಗುವಂತೆ ತನ್ನ ಪಾಲನ್ನು ದುರ್ಬಲಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ. ಮೊದಲ ಐಪಿಒದಿಂದ ಮುಂದಿನ ಐದು ವರ್ಷದಲ್ಲಿ ಸರ್ಕಾರದ ಪಾಲನ್ನು ಶೇಕಡ 75ಕ್ಕೆ ಇಳಿಸಲಾಗುತ್ತದೆ. ಅದರ ನಂತರ, ಸರ್ಕಾರ ಶೇಕಡ 51 ಪಾಲನ್ನು ಮಾತ್ರ ಉಳಿಸಿಕೊಳ್ಳುವುದಾಗಿ ಪ್ರಕಟಿಸಿದೆ.

ಇದರಿಂದಾಗಿ ಎಲ್‌ಐಸಿಯ ಸ್ವರೂಪ ಗಣನೀಯವಾಗಿ ಬದಲಾಗಲಿದೆ; ಎಲ್‌ಐಸಿಯನ್ನು ಸಾಮಾಜಿಕ ಕಲ್ಯಾಣದ ಗುರಿಗಳಿಂದ ವಿಮುಖವಾಗುವಂತೆ ಭಾರತೀಯ ಹಾಗೂ ವಿದೇಶಿ ಕಂಪೆನಿಗಳು ಒತ್ತಡ ಹೇರಲಿವೆ. ಸಂವಿಧಾನದ ನಿರ್ದೇಶಕ ತತ್ವಗಳಿಗೆ ಅನುಗುಣವಾಗಿ ಎಲ್‌ಐಸಿ ಈ ಸಮಾಜ ಕಲ್ಯಾಣ ನಿಯಮಗಳನ್ನು ಅನುಸರಿಸುತ್ತಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳು ಹಾಗೂ ಸಾರ್ವಜನಿಕ ಸೇವೆಗಳ ಕುರಿತ ಜನತಾ ಆಯೋಗವು ಎಲ್‌ಐಸಿ ಐಪಿಒ ಬಗ್ಗೆ ಹೀಗೆ ಹೇಳಿದೆ: 'ಎಲ್‌ಐಸಿಯ ಲಿಸ್ಟಿಂಗ್ ಮತ್ತು ಅದರ ಬಂಡವಾಳ ವಾಪಸ್ ಪಡೆಯುವುದುರಿಂದ ದುರ್ಬಲ ಜನವಿಭಾಗಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ಸಂಸ್ಥೆಯಾಗಿ ಅದರ ಪಾತ್ರವನ್ನು ಆಮೂಲಾಗ್ರವಾಗಿ ಬದಲಾಯಿಸುತ್ತದೆ. ಕೋಟ್ಯಂತರ ಸಂಖ್ಯೆಯ ಸಣ್ಣ ಪಾಲಿಸಿದಾರರ ಪ್ರಮುಖ ಪಾತ್ರವನ್ನು ನಗಣ್ಯಗೊಳಿಸುತ್ತದೆ. ಲಾಭ ಬಡುಕ ಶ್ರೀಮಂತ ಹೂಡಿಕೆದಾರರ ಪರವಾಗಿ ಪಾತ್ರ ನಿರ್ವಹಿಸಲಿದೆ. ಪರೋಕ್ಷವಾಗಿ, ಕುಟುಂಬಗಳ ಉಳಿತಾಯದ ಬೃಹತ್ ಮೊತ್ತದ ನಿಯಂತ್ರಣವನ್ನು ವಿದೇಶಿ ಹೂಡಿಕೆದಾರರ ಸಹಿತ ಖಾಸಗಿಯವರಿಗೆ ಹಸ್ತಾಂತರಿಸುವ ವಿವೇಚನಾರಹಿತ ಕ್ರಮವಾಗಲಿದೆ'.

ಅಪಾರದರ್ಶಕ ಮೌಲ್ಯಮಾಪನ ಕ್ರಿಯೆ

ಎಲ್‌ಐಸಿ ಐಪಿಒಗೆ ಅದರ ಮೌಲ್ಯವನ್ನು ನಿರ್ಧರಿಸುವ ಪ್ರಕ್ರಿಯೆ ಅಪಾರದರ್ಶಕವಾಗಿದೆ. ಅದನ್ನು ಸಾರ್ವಜನಿಕಗೊಳಿಸಿಲ್ಲ ಕೂಡ. ನಿಗಮದ ಮೌಲ್ಯ 15 ಲಕ್ಷ ಕೋಟಿ ರೂಪಾಯಿ ಹಾಗೂ ಅಂತರ್ಗತ(ಎಂಬೆಡೆಡ್) ಮೌಲ್ಯ ನಾಲ್ಕು ಲಕ್ಷ ಕೋಟಿ ರೂಪಾಯಿ ಎಂದು ಮೌಲ್ಯಮಾಪನ ಮಾಡಲಾಗಿದೆ ಎನ್ನಲಾಗಿದ್ದು ಇದು ತೀರಾ ಅಪಮೌಲ್ಯೀಕರಣವಾಗಿದೆ(ಅಂಡರ್‌ವ್ಯಾಲ್ಯುಯೇಶನ್). ಈ ರೀತಿಯಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಆಸ್ತಿಪಾಸ್ತಿ ಮೌಲ್ಯವನ್ನು ಅಪಮೌಲ್ಯಗೊಳಿಸಿ ಅಗ್ಗದ ಬೆಲೆಗೆ ಖಾಸಗಿಯವರಿಗೆ ಮಾರುವುದು ಮೋದಿ ಸರ್ಕಾರದ ಖಯಾಲಿಯಾಗಿ ಬಿಟ್ಟಿದೆ. ಈ ಪ್ರಕ್ರಿಯೆಯ ಮುಂದುವರಿಕೆ ಭಾಗವಾದ ಎಲ್‌ಐಸಿ ಖಾಸಗೀಕರಣದಿಂದ ಖಾಸಗಿ ಕ್ಷೇತ್ರದವರಿಗೆ ಬಂಪರ್ ಲಾಟರಿ ಹೊಡೆದಂತಾಗಿದೆ.

ಬಂಡವಾಳ ವಾಪಸಾತಿಯ ಹಗರಣ ಮತ್ತು ಕೇಂದ್ರೀಯ ಪಿಎಸ್‌ಯುಗಳ ಖಾಸಗೀಕರಣಕ್ಕೆ ಕೇಂದ್ರೀಯ ಇಲೆಕ್ಟ್ರಾನಿಕ್ಸ್ ಸಂಸ್ಥೆಯ (ಸಿಇಎಲ್) ಈಚಿನ ಮಾರಾಟವು ಮತ್ತೊಮ್ಮೆ ಕಣ್ಣಿಗೆ ರಾಚುವಂಥ ಉದಾಹರಣೆಯಾಗಿದೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯ ಅಧೀನದ ಈ ಸಂಸ್ಥೆಯನ್ನು ಕೇವಲ 210 ಕೋಟಿ ರೂಪಾಯಿಗೆ ನಂದಲಾಲ್ ಫೈನಾನ್ಸ್ ಅಂಡ್ ಲೀಸಿಂಗ್ ಪ್ರೈವೇಟ್ ಲಿಮಿಟೆಡ್‌ಗೆ ಮಾರಲಾಗಿದೆ. ಸಿಇಎಲ್ ಭಾರತದಲ್ಲಿ ಸೌರ ಸೆಲ್‌ಗಳು, ಸೌರ ವಿದ್ಯುತ್ ಸ್ಥಾವರಗಳು, ರೈಲ್ವೆ ಸಿಗ್ನಲಿಂಗ್ ವ್ಯವಸ್ಥೆ ಮತ್ತು ಡಿಫೆನ್ಸ್ ಅಪ್ಲಿಕೇಶನ್‌ಗಳಲ್ಲಿ ಮೂಲಭೂತ ಉತ್ಪಾದನೆಗಳ ಅಭಿವೃದ್ಧಿಯ ಆದ್ಯ ಪ್ರವರ್ತಕವಾಗಿದೆ ಎನ್ನುವುದನ್ನು ನಾವಿಲ್ಲಿ ಗಮನಿಸಬೇಕು.

ಸಿಇಎಲ್ ಉದಾಹರಣೆ

ಅನುಮಾನಾಸ್ಪದ ಇತಿಹಾಸವುಳ್ಳ ಒಂದು ಟ್ರೇಡಿಂಗ್ ಕಂಪೆನಿಗೆ ಇಂಥ ಒಂದು ಮಹತ್ವದ ಕೇಂದ್ರೀಯ ಸಾರ್ವಜನಿಕ ವಲಯದ (ಸಿಪಿಎಸ್‌ಯು) ಉದ್ದಿಮೆಯನ್ನು ಮಾರಾಟ ಮಾಡಲಾಗಿದೆ. ಈ ಕಂಪೆನಿಗೆ ಗಟ್ಟಿಯಾದ ಆಸ್ತಿಪಾಸ್ತಿಯೂ ಇಲ್ಲ. ತಂತ್ರಜ್ಞಾನ ಮತ್ತು ತಾಂತ್ರಿಕ ಸಂಸ್ಥೆಯನ್ನು ನಡೆಸುವ ಅರ್ಹತೆಯೂ ಇಲ್ಲ ಎನ್ನುವುದು ಗಮನಾರ್ಹ. ಸಿಇಎಲ್ ಹೊಂದಿರುವ ಸುಮಾರು 50 ಎಕರೆ ಜಮೀನಿನ ಪ್ರಸಕ್ತ ಮಾರುಕಟ್ಟೆ ಮೌಲ್ಯವೇ 440 ಕೋಟಿ ರೂಪಾಯಿ ಆಗುತ್ತದೆ. 2021ರ ಹಣಕಾಸು ವರ್ಷದಲ್ಲಿ ಅದು ಗಳಿಸಿದ ಒಟ್ಟು ಲಾಭ 124 ಕೋಟಿ ರೂಪಾಯಿ. ಒಂದು ಕಂಪೆನಿಯನ್ನು ಈ ರೀತಿಯಲ್ಲಿ ಅಗ್ಗದ ಬೆಲೆಗೆ ಮಾರಿದ ಹಗರಣದ ವಿರುದ್ಧ ಕೇಳಿ ಬಂದ ಸಾರ್ವಜನಿಕ ಆಕ್ರೋಶದ ಹಿನ್ನೆಲೆಯಲ್ಲಿ ಕಂಪೆನಿಯನ್ನು ಖಾಸಗಿಗೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ.

ಸಿಪಿಎಸ್‌ಯುಗಳನ್ನು ಮಾರಾಟ ಮಾಡುವುದು ಹಾಗೂ ರಾಷ್ಟ್ರೀಯ ಆಸ್ತಿಗಳನ್ನು ಭಾರತೀಯ ಹಾಗೂ ವಿದೇಶಿ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವುದು ದೇಶದ ಆರ್ಥಿಕ ಸಾರ್ವಭೌಮತ್ವವನ್ನು ನಾಶ ಮಾಡುವ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಕುರಿತ ಸಂವಿಧಾನದ ನಿರ್ದೇಶಕ ತತ್ವಗಳನ್ನು ಬುಡಮೇಲು ಮಾಡುವ ಮೋದಿ ಸರ್ಕಾರದ ವಿನಾಶಕಾರಿ ಯೋಜನೆಯ ಭಾಗವಾಗಿದೆ. ಹಲವು ದಶಕಗಳಿಂದ ಕಷ್ಟಪಟ್ಟು ಕಟ್ಟಿ ಬೆಳೆಸಿದ ಜನರ ಸಂಪನ್ಮೂಲಗಳನ್ನು ಲೂಟಿ ಮಾಡಲು ಅದು ಹಾದಿ ಮಾಡಿಕೊಡುತ್ತಿದೆ.

ಎಲ್‌ಐಸಿ ಮತ್ತು ಸಾರ್ವಜನಿಕ ವಲಯವನ್ನು ಬುಡಮೇಲು ಮಾಡುವ ಪ್ರಕ್ರಿಯೆ ನಿಲ್ಲಬೇಕು. ಈ ಆಕ್ರಮಣವನ್ನು ತಡೆಯ ಬೇಕಾದರೆ ಎಲ್ಲ ಜನತಾಂತ್ರಿಕ ಮತ್ತು ದೇಶಪ್ರೇಮಿ ಶಕ್ತಿಗಳು ದೊಡ್ಡ ಪ್ರಮಾಣದಲ್ಲಿ ಒಂದಾಗಿ ನಿಲ್ಲುವುದು ಅಗತ್ಯ. ಎಲ್‌ಐಸಿ, ಸಾಮಾನ್ಯ ವಿಮೆ(ಜನರಲ್ ಇನ್ಶೂರೆನ್ಸ್) ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳ ನೌಕರರು ಖಾಸಗೀಕರಣದ ವಿರುದ್ಧ ಹೋರಾಟದ ಹಾದಿಯಲ್ಲಿದ್ದಾರೆ. ಕೇಂದ್ರೀಯ ಸರ್ಕಾರಿ ಸ್ವಾಮ್ಯದ ಕಂಪೆನಿಗಳ ಎಲ್ಲ ಕಾರ್ಮಿಕರು ಮತ್ತು ನೌಕರರನ್ನು ಒಳಗೊಂಡ ವಿಶಾಲ ಹೋರಾಟವಾಗಿ ಅದು ಬೆಳೆದು ಬರಬೇಕು. ಹಾಗೂ ದುಡಿಯುವ ವರ್ಗದ ಸಂಘಟಿತ ಸಂಘರ್ಷದ ಭಾಗವಾಗಬೇಕು. ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಕರೆ ನೀಡಿರುವ ಫೆಬ್ರವರಿ 23–24ರ ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವು ಈ ಹೋರಾಟದಲ್ಲಿ ಒಂದು ಪ್ರಮುಖ ಹಂತವಾಗಲಿದೆ.

ಅನು: ವಿಶ್ವ

ನೇತಾಜಿಯ ಮೂರ್ತಿಯನ್ನು ಸ್ಥಾಪಿಸಬಹುದು, ಅವರ ಜಾತ್ಯತೀತತೆಯನ್ನು ಬಚ್ಚಿಡಲಾರರು

"ಎಲ್ಲ ರೀತಿಯ ಕೋಮುವಾದಗಳಿಗೆ ಮತ್ತು ಧಾರ್ಮಿಕ ಮತಾಂಧತೆಗಳಿಗೂ ನೇತಾಜಿ ಅವರ ತೀವ್ರ ವಿರೋಧವಿತ್ತು ಎಂಬ ವಾಸ್ತವವನ್ನು, ಮೋದಿಯವರ ಈ ಹೋಲೋಗ್ರಾಂ ಮೂರ್ತಿಗೆ ಸಹ ಮರೆಮಾಚಲು ಆಗಲಿಕ್ಕಿಲ್ಲ. ಈ ಮೂರ್ತಿ, ಬಿಜೆಪಿ ಮತ್ತು ಮೋದಿ ಗಳಿಗೆ ಅವರು ಹತಾಶೆಯಿಂದ ನಿರೀಕ್ಷಿಸುತ್ತಿರುವ ದೇಶಭಕ್ತಿಯ ಸರ್ಟಿಫಿಕೇಟುಗಳನ್ನು ಸಹ ಯಾವುದೇ ರೀತಿಯಲ್ಲಿ ಕೊಡಲಿಕ್ಕಿಲ್ಲ. ಐ.ಎನ್.ಎ. ಯ ಹಲವು ಅಧಿಕಾರಿಗಳು ಮುಸ್ಲಿಮರಾಗಿದ್ದರು. ಅವರ ಮೇಲೆ ನೇತಾಜಿ ಪೂರ್ಣವಾಗಿ ಭರವಸೆಯಿಟ್ಟಿದ್ದರು. ಅವರೂ ತಮ್ಮ ಪ್ರಾಣವನ್ನು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಣವಾಗಿಟ್ಟು ಆ ಭರವಸೆಗೆ ಸ್ಪಂದಿಸಿದ್ದರು ಎಂಬ ವಾಸ್ತವವನ್ನು ಬಿಜೆಪಿ–ಮೋದಿ ಹೇಗೆ ಅರಗಿಸಿಕೊಳ್ಳಲು ಸಾಧ್ಯ? ಐ.ಎನ್.ಎ. ಯಲ್ಲಿ ಜಾತಿ–ವರ್ಗ–ಧರ್ಮ–ಲಿಂಗ ಬೇಧ ಮರೆತ ಅಮೋಘ ಐಕ್ಯತೆಯನ್ನು ಸುಭಾಸ್ ಐ.ಎನ್.ಎ ಯಲ್ಲಿ ಸಾಧಿಸಿದರು ಎಂಬ ವಾಸ್ತವವನ್ನು ಬಿಜೆಪಿ–ಮೋದಿ ಹೇಗೆ ತಮ್ಮ ಪರಂಪರೆಯೆಂದು ಹೇಳಿಕೊಳ್ಳುವುದು ಅಥವಾ ಬಚ್ಚಿಡುವುದು ಸಾಧ್ಯ?"



ಎನ್ನುತ್ತಾರೆ ನೇತಾಜಿ ಅವರ ಐ.ಎನ್.ಎ. ಯ ರಾಣಿ ಝಾನ್ಸಿ ರೆಜಿಮೆಂಟಿನ ಕಮಾಂಡರ್ ಆಗಿದ್ದ ಕ್ಯಾಪ್ಟನ್ ಲಕ್ಷ್ಮಿ ಮತ್ತು ಬ್ರಿಟಿಷರ ಕೆಂಪುಕೋಟೆ ವಿಚಾರಣೆಯನ್ನು ಎದುರಿಸಿದ ಮೂವರು ಹಿರಿಯ ಐಎನ್ಎ ಸೇನಾಧಿಕಾರಿಗಳಲ್ಲಿ ಒಬ್ಬರಾದ ಕ್ಯಾಪ್ಟನ್ ಪ್ರೇಮ್ ಸೆಹಗಲ್ ರವರ ಮಗಳು ಮತ್ತು ಸಿಪಿಐ(ಎಂ) ಪಿಬಿ ಸದಸ್ಯರಾದ **ಸುಭಾಷಿಣಿ ಅಲಿ**



ಇಂಡಿಯಾ ಗೇಟ್‌ನಲ್ಲಿ ಮೋದಿ ಸರಕಾರದ ಹೋಲೋಗ್ರಾಂ

ನವೆದಹಲಿಯಲ್ಲಿರುವ ಇಂಡಿಯಾ ಗೇಟ್ ಬ್ರಿಟಿಷ್ ಸರಕಾರ ಕಟ್ಟಿದ ಸಾಮ್ರಾಜ್ಯದ ಪ್ರಮುಖ ಸ್ಮಾರಕಗಳಲ್ಲೊಂದು. ಮೊದಲ ಮಹಾಯುದ್ಧದಲ್ಲಿ (1914–18) ಮಾತೃಭೂಮಿಯಿಂದ ದೂರದ ಫ್ಲಾಂಡರ್ಸ್, ಗಲ್ಲಿಪೊಲಿ, ಇರಾನ್ ಮತ್ತು ಇತರೆಡೆ ಮಡಿದ ಬ್ರಿಟಿಷ್‌ಇಂಡಿಯಾದ ಸೈನ್ಯದ ಭಾರತೀಯ ಸೈನಿಕರ ನೆನಪಿನ ಸ್ಮಾರಕವಿದು. ಬ್ರಿಟಿಷರು ನಡೆಸಿದ ಅಫ್ಘಾನ್ ಯುದ್ಧಗಳಲ್ಲಿ ಮಡಿದ ಭಾರತೀಯ ಸೈನಿಕರ ಹೆಸರುಗಳನ್ನೂ ಅಲ್ಲಿ ದಾಖಲಿಸಲಾಗಿದೆ. ಈ ಯುದ್ಧ ಸ್ಮಾರಕದ ಮಧ್ಯಭಾಗದಲ್ಲಿರುವ ಛಾವಣಿಯ ಕೆಳಗೆ ಐದನೆಯ ಜಾರ್ಜ್ ರಾಜನ ಮೂರ್ತಿಯನ್ನು ಆ ಮೇಲೆ ಸ್ಥಾಪಿಸಲಾಯಿತು. ಸ್ವಾತಂತ್ರ್ಯದ ಕೆಲವು ವರ್ಷಗಳ ನಂತರ ಯಾವುದೇ ಸದ್ದುಗದ್ದಲವಿಲ್ಲದೆ ರಾಜನ ಮೂರ್ತಿಯನ್ನು ತೆಗೆಯಲಾಯಿತು. ಅಲ್ಲಿ ಯಾರ ಮೂರ್ತಿಯನ್ನು ಸ್ಥಾಪಿಸಬೇಕು ಎಂಬುದರ ಬಗೆಗೆ ಹಲವು ಸಲಹೆಗಳು ಬಂದಿದ್ದರಿಂದ, ಯಾವುದೇ ಮೂರ್ತಿಯನ್ನು ಸ್ಥಾಪಿಸಲಾಗಲಿಲ್ಲ.


ಕೆಲವು ದಿನಗಳ ಹಿಂದೆ, ಕೇಂದ್ರ ಸರಕಾರ ನೇತಾಜಿ ಸುಭಾಸ ಚಂದ್ರ ಬೋಸ್ ಅವರ ಮೂರ್ತಿಯನ್ನು ಸ್ಥಾಪಿಸಲಾಗುವುದು ಎಂದು ಥಟ್ಟನೆ ಘೋಷಿಸಿತು. ಆ ಮೂರ್ತಿಯನ್ನು ಸ್ಥಾಪಿಸುವವರೆಗೆ, ಈ ವರ್ಷದ ನೇತಾಜಿ ಅವರ 125 ನೆ ಜನ್ಮದಿನ ಜನವರಿ 23ರಂದು ಅಲ್ಲಿ ಅವರ ಹೊಲೊಗ್ರಾಂ ಎಲ್ಲರಿಗೂ ಕಾಣಿಸುವಂತೆ ವ್ಯವಸ್ಥೆ ಮಾಡಲಾಗುವುದು ಎಂದೂ ಘೋಷಿಸಲಾಯಿತು.



ನೇತಾಜಿ ಅವರ ಮೂರ್ತಿ ಸ್ಥಾಪಿಸಬೇಕೆಂಬ ಈ ನಿರ್ಧಾರ ಥಟ್ಟನೆ ಮಾಡಿದ್ದೆಂಬುದು ಮೊದಲ ನೋಟಕ್ಕೆ ಕಾಣಿಸುತ್ತದೆ. ಪೂರ್ವನಿರ್ಧಾರಿತವಾದರೆ ಮೂರ್ತಿ ರಚನೆಯ ಕೆಲಸವಾದರೂ ಪ್ರಾರಂಭಿಸಿದ ಸೂಚನೆಗಳಿರುತ್ತಿದ್ದವು. ಬಿಜೆಪಿ ಸರಕಾರ ಮತ್ತು ಪ್ರಧಾನಿ ಮೋದಿ, ನೇತಾಜಿ ಅವರ ಸ್ಮರಣೆ ಮಾಡುವಾಗಲೆಲ್ಲ, ಅವರ ಮನಸ್ಸಿನಲ್ಲಿರುವ ಗೊಂದಲ ಸ್ಪಷ್ಟವಾಗಿ ಕಾಣಿಸುತ್ತದೆ. ನೇತಾಜಿ ಅವರ ಪರಂಪರೆಯ ಬಗೆಗೆನೇ, ಅವರ ಪರಂಪರೆಯ ಹಲವು ಆಯಾಮಗಳ ಕುರಿತು ತಮ್ಮ ಧೋರಣೆ ಏನಿರಬೇಕು, ಯಾವ ಆಯಾಮವನ್ನು ಎತ್ತಿ ಹೇಳಬೇಕು ಎಂಬುದರ ಬಗ್ಗೆ ಅನಿಶ್ಚಿತತೆ, ಅವರ ಪರಂಪರೆಯನ್ನು ತಾವು ಗೌರವಿಸುವುದರಲ್ಲಿ ಅಡಕವಾಗಿರುವ ವೈರುಧ್ಯಗಳು–ಹೀಗೆ ಹಲವು ಗೊಂದಲಗಳು ಬಿಜೆಪಿ–ಮೋದಿ ಯನ್ನು ಕಾಡುತ್ತಿರುತ್ತವೆ.

ನೇತಾಜಿ ಅವರ ವಿಚಾರಗಳ, ಕೆಲಸಗಳ ಅಭಿಮಾನಿಗಳು ಎಂದು ತೋರಿಸಿಕೊಳ್ಳುವುದು, ಬಿಜೆಪಿ–ಮೋದಿ ಯ ತಕ್ಷಣದ ಕ್ಷುಲ್ಲಕ ರಾಜಕೀಯ ಕಾರಣಗಳಿಂದ ಪ್ರೇರಿತವಾದವುಗಳು. ಒಂದು ಕಡೆ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನೇತಾಜಿ ಅವರ ಕೊಡುಗೆಗಳನ್ನು ಕಡೆಗಣಿಸಲು ನೆಹರೂ ಸರ್ವಪ್ರಯತ್ನಗಳನ್ನು ಮಾಡಿದರು ಎಂದು ಅವರಿಗೆ ತೋರಿಸಬೇಕಾಗಿದೆ. ನೆಹರೂ ಕೆಂಪು ಕೋಟೆಯಿಂದ ಮಾಡಿದ ತಮ್ಮ ಮೊದಲ ಭಾಷಣದಲ್ಲಿ ನೇತಾಜಿ ಈ ಸಂದರ್ಭದಲ್ಲಿ ಇಲ್ಲಿರಬೇಕಾಗಿತ್ತು ಎಂದು ಭಾವಪೂರ್ಣವಾಗಿ ನೆನಪಿಸಿಕೊಂಡರು ಎಂಬ ಮತ್ತು ಇತರ ವಾಸ್ತವಗಳನ್ನು ಮರೆಸುವುದು ಅವರಿಗೆ ಬೇಕಾಗಿದೆ.

ಐಎನ್ಎ ಯ ಮೂವರು ಹಿರಿಯ ಸೇನಾಧಿಕಾರಿಗಳು
–ಶಾಹ ನವಾಜ್ ಖಾನ್, ಗುರುಬಕ್ಷಸಿಂಗ್ ಢಿಲ್ಲೋಂ ಮತ್ತು ಪ್ರೇಮ್ ಸೆಹಗಲ್



ಇನ್ನೊಂದು ಕಡೆ, ಬಿಜೆಪಿ ಮತ್ತು ಪ್ರಧಾನಿ, ತಾವು ನೇತಾಜಿ ಅವರ ನಿಜವಾದ ಅಭಿಮಾನಿಗಳು, ಎಂದು ತೋರಿಸಿಕೊಳ್ಳಲು ಹತಾಶರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಯಾವುದೇ ಒಬ್ಬ ವ್ಯಕ್ತಿಯೂ, ತಮ್ಮ ಆರೆಸ್ಸೆಸ್ ಮತ್ತು ಪೂರ್ವಜ ಸಂಸ್ಥೆ ಹಿಂದೂ ಮಹಾಸಭಾ ಗಳಲ್ಲಿ, ಇಲ್ಲವೆಂಬುದೇ ಅವರ ಹತಾಶೆಗೆ ಕಾರಣ. ("ವೀರ ಸಾವರ್ಕರ್' ರನ್ನು ಮಹಾನ್ ಸ್ವಾತಂತ್ರ್ಯ ಹೋರಾಟಗಾರನೆಂದು ತೋರಿಸುವ ಪ್ರಯತ್ನಗಳು, ಅವರು ತಮ್ಮ ಬಿಡುಗಡೆಗೆ ಸಲ್ಲಿಸಿದ ತಪ್ಪೊಪ್ಪಿಗೆ ಪತ್ರದಿಂದಾಗಿ, ಅವರು ಸ್ವಾತಂತ್ರ್ಯ ಹೋರಾಟದಿಂದ ಓಡಿ ಹೋದ 'ಹೇಡಿ' ಎಂದು ಬಯಲಾಗಿ ವಿಫಲವಾಗಿವೆ) ಅವರ ಹತಾಶೆಗಳು ಹಲವೊಮ್ಮೆ ಹಾಸ್ಯಾಸ್ಪದವಾಗುತ್ತವೆ. ನೇತಾಜಿ ಆಜಾದ್ ಹಿಂದ್ ತಾತ್ಕಾಲಿಕ ಸರಕಾರ ಸ್ಥಾಪನೆಯ ದಿನಾಚರಣೆಯ (ಅಕ್ಟೋಬರ್ 22, 2020) ಸಂದರ್ಭದಲ್ಲಿ ನೇತಾಜಿ ಮತ್ತು ಐಎನ್.ಎ ಸೈನಿಕರು ಹಾಕುತ್ತಿದ್ದ ಮಿಲಿಟರಿ ಟೋಪಿಯನ್ನು ಹಾಕಿಕೊಂಡು ಪ್ರಧಾನಿಗಳು ಮಾತನಾಡಿದರು!

ಚುನಾವಣೆಗಾಗಿ ವರ್ಷಪೂರ್ತಿ ಆಚರಣೆ ಘೋಷಣೆ

ಪರಾಭವದ ನಂತರ ಕಸದ ಬುಟ್ಟಿಗೆ

ತಾವು ನೇತಾಜಿಯ ನಿಜವಾದ ಅನುಯಾಯಿಯೆಂದು ಸಿದ್ಧ ಪಡಿಸುವ ಮತ್ತೊಂದು ಪ್ರಯತ್ನವಾಗಿ, ಜನವರಿ 23, 2021ರಂದು, ನೇತಾಜಿ ಅವರ 125ನೆಯ ಹುಟ್ಟು ಹಬ್ಬದ ವರ್ಷಪೂರ್ತಿ ಆಚರಣೆಗೆ, ಸರಕಾರ ಒಂದು ಸಮಿತಿಯನ್ನು ರಚಿಸುವ ಘೋಷಣೆಯನ್ನು ಮಾಡಿತು. ಈ ವರ್ಷಪೂರ್ತಿಯ ವಿವಿಧ ಆಚರಣೆಗಳು ಈ ವರ್ಷ ಅಂದರೆ ಜನವರಿ 23, 2022ರಂದು ಕೊನೆಗೊಳ್ಳುವುದಿತ್ತು. ಆದರೆ ಸಮಿತಿಯ ಒಂದು ಸಭೆಯೂ ನಡೆಯಲಿಲ್ಲ, ವರ್ಷದುದ್ದಕ್ಕೂ ಯಾವ ಆಚರಣೆಯೂ ನಡೆಯಲಿಲ್ಲ. ಇದು ಆಶ್ಚರ್ಯದ ಸಂಗತಿಯೇನಲ್ಲ. ಯಾಕೆಂದರೆ ನೇತಾಜಿ ಅವರ ಜೀವನ, ವಿಚಾರಗಳಿಗೆ ಅಥವಾ ಕಾರ್ಯಾಚರಣೆಗಳಿಗೆ ಸಂಬಂಧಿಸಿರುವ ಯಾವುದನ್ನೂ ಬಿಜೆಪಿ–ಮೋದಿ ಸಂಭ್ರಮಿಸುವುದು ಸಾಧ್ಯವಿಲ್ಲ.

ಸಮಿತಿಯ ಘೋಷಣೆಯಾದಾಗ, ಬಿಜೆಪಿ ಮತ್ತು ಮೋದಿ ಈ ಘೋಷಣೆ ತಮಗೆ ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಗಳನ್ನು

ಪುಟ 14 ನೋಡಿ



ಕೊಲ್ಕತಾದಲ್ಲಿ ಈ ಮೊದಲೇ ಸ್ಥಾಪಿಸಲಾಗಿದ್ದ ಆಝಾದ್‌ಹಿಂದ್ ಸೇನೆಯ ಈ ಸ್ಮಾರಕದಲ್ಲಿ ಅದರ ಧ್ಯೇಯವಾಕ್ಯವಾದ 'ಇತ್ತಿಹಾದ್ (ಐಕ್ಯತೆ), ಎಐತ್ಮಾದ್(ವಿಶ್ವಾಸ) ಮತ್ತು ಕುರ್ಬಾನಿ(ಬಲಿದಾನ)ವನ್ನು ಕೆತ್ತಲಾಗಿದೆ. ಇಂಡಿಯಾಗೇಟಿನ ಹೋಲೋಗ್ರಾಂನಲ್ಲಿ ಇದು ಇಲ್ಲ–ಇರಲು ಸಾಧ್ಯವೂ ಇಲ್ಲ, ಇದನ್ನು ಜಶ್ನ್–ಎ–ಆಝಾದಿ(ಸ್ವಾತಂತ್ರ್ಯದ ಉತ್ಸವ) ಎಂದಂತೂ ಅವರು ಹೇಳುವುದು ಸಾಧ್ಯವೇ ಇಲ್ಲ



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಎಲ್‌ಐಸಿ ಯ ಮಹಾ ಐಪಿಒದ ಬೆದರಿಕೆ ದಟ್ಟಗೊಳ್ಳುತ್ತಿದೆ......



ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲಿಕ್ಕಾಗಿ ಎಲ್‌ಐಸಿಯ ಐಪಿಒ ಎಂದು ಸರ್ಕಾರ ಹೇಳುತ್ತಿದೆ. ಆದರೆ ಎಲ್‌ಐಸಿ ಯಾವಾಗಲೂ ಪಾಲಿಸಿದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಕಳಂಕರಹಿತ ದಾಖಲೆಯೊಂದಿಗೆ ಸಂಸತ್ತಿನ ಮೂಲಕ ರಾಷ್ಟ್ರಕ್ಕೆ ಜವಾಬ್ದಾರಿಕೆ ನಿಭಾಯಿಸುತ್ತಿರುವ ಸಂಸ್ಥೆ ಯಾಗಿದೆ. ಇದು ಪ್ರತಿ ವರ್ಷವೂ ಅಗಾಧವಾದ ಹೂಡಿಕೆ ಮಾಡಬಹುದಾದ ಹೆಚ್ಚುವರಿ ಬಂಡವಾಳ ಉತ್ಪಾದಿಸುವುದರಿಂದ, ಶೇರು ಮಾರುಕಟ್ಟೆಗೆ ಇದನ್ನು ಒಯ್ಯುವುದು ಬಂಡವಾಳದ ಸೃಷ್ಟಿಗೆ ಸಹಾಯ ಮಾಡುತ್ತದೆ ಎಂಬ ವಾದವೂ ಯಾವುದೇ ಅರ್ಥವನ್ನು ಹೊಂದಿಲ್ಲ. ಎಲ್‌ಐಸಿಯ ಮೌಲ್ಯದ ಬೀಗವನ್ನು ತೆರೆಯುವುದರಿಂದ ಭಾರತೀಯ ಸಾರ್ವಜನಿಕರಿಗೆ ಲಾಭವಾಗುತ್ತದೆ ಎಂಬ ವಾದವು ಹಾಸ್ಯಾಸ್ಪದ. ಏಕೆಂದರೆ ಷೇರು ಮಾರುಕಟ್ಟೆಯಲ್ಲಿ ಚಿಲ್ಲರೆ ಹೂಡಿಕೆದಾರರು ಜನಸಂಖ್ಯೆಯ ಕೇವಲ ಸುಮಾರು 3% ನಿಜವಾಗಿಯೂ ಹೀಗೆ ಮೌಲ್ಯದ 'ಬೀಗ ತೆಗೆಯುವುದರಿಂದ' ಶ್ರೀಮಂತ, ಕಾರ್ಪೊರೇಟ್ ಮತ್ತು ವಿದೇಶಿ ಬಂಡವಾಳಕ್ಕೆ ಮಾತ್ರ ಪ್ರಯೋಜನವಾಗುತ್ತದೆ, ಅವರುಗಳು ಸಾರ್ವಜನಿಕ ಸ್ವತ್ತುಗಳನ್ನು ಅಗ್ಗದ ಬೆಲೆಗೆ ಪಡೆಯಲು ದಾರಿ ಮಾಡಿಕೊಡುತ್ತದೆ.



ಅಮಾನುಲ್ಲ ಖಾನ್

ಮಾಜಿ ಅಧ್ಯಕ್ಷರು, ಅಖಿಲ ಭಾರತ ವಿಮಾ ನೌಕರರ ಸಂಘ ಅನು: ರಾಮು ಎಸ್.ಕೆ.

ಭಾರತ ಸರ್ಕಾರವು ಭಾರತೀಯ ಜೀವ ವಿಮಾ ನಿಗಮವನ್ನು (ಎಲ್‌ಐಸಿ) ಷೇರು ಮಾರುಕಟ್ಟೆಗೆ ಒಯ್ಯಲು(ಐಪಿಒ) ಭರದ ಸಿದ್ಧತೆಗಳನ್ನು ನಡೆಸುತ್ತಿದೆ.

ಶೇರುಮಾರು ಕಟ್ಟೆಯಲ್ಲಿ ಸೇರಿಸಲು ಅನುಕೂಲವಾಗಲೆಂದು ಸುಲಭಗೊಳಿಸಲು ಹಣಕಾಸು ಮಸೂದೆ 2021-22 ರ ಭಾಗವಾಗಿ ಎಲ್‌ಐಸಿ ಕಾಯಿದೆಗೆ ಅಗತ್ಯ ಶಾಸನಾತ್ಮಕ ಬದಲಾವಣೆಗಳನ್ನು ಗುಟ್ಟಾಗಿಯೇ ತರಲಾಗಿದೆ. ಐಪಿಒದಲ್ಲಿ ವಿದೇಶಿ ಬಂಡವಾಳ ಭಾಗವಹಿಸಲು ಅವಕಾಶ ಕಲ್ಪಿಸಲು ಇನ್ನೂ ಕೆಲವು ಬದಲಾವಣೆಗಳನ್ನು ತರಲು ಸರ್ಕಾರ ಚಿಂತನೆ ನಡೆಸಿದೆ. ಸುಮಾರು 1 ಲಕ್ಷ ಕೋಟಿ ರೂ.ಗಳನ್ನು ಒಟ್ಟುಗೂಡಿಸಲು ಆರಂಭದಲ್ಲಿ ಶೇ.10 ರಷ್ಟು ಷೇರು ನೀಡಲಾಗುವುದು ಎಂಬ ಸೂಚನೆಗಳಿವೆ. ಇದು ಎಲ್‌ಐಸಿ ಐಪಿಒವನ್ನು ಭಾರತದ ಅತಿದೊಡ್ಡ ಸಾರ್ವಜನಿಕ ಶೇರು ಮಾರಾಟವನ್ನಾಗಿ ಮಾಡುತ್ತದೆ. ಖಾಸಗೀಕರಣದ ಮೊದಲ ಹೆಜ್ಜೆ ಮತ್ತು ಮೂಲ ಉದ್ದೇಶಗಳಿಗೆ ಅಪಾಯ ಎಂದು ಎಲ್‌ಐಸಿಯಲ್ಲಿನ ಕಾರ್ಮಿಕ ಸಂಘಟನೆಗಳು ಇದನ್ನು ವಿರೋಧಿಸುತ್ತಿವೆ.

ಎಲ್‌ಐಸಿ ಸೆಪ್ಟೆಂಬರ್ 1, 1956 ರಂದು ಸಂಸತ್ತಿನ ಕಾಯಿದೆಯ ಮೂಲಕ ಸ್ಥಾಪಿತವಾಯಿತು. ಪಾಲಿಸಿದಾರರ ಹಣಕ್ಕೆ ಭದ್ರತೆಯನ್ನು ಒದಗಿಸುವುದು ಮತ್ತು ದೇಶದ ಕೈಗಾರಿಕೀಕರಣಕ್ಕೆ ಅಗತ್ಯವಾದ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಉಳಿತಾಯವನ್ನು ಸಜ್ಜುಗೊಳಿಸುವುದು ಉದ್ದೇಶಗಳಾಗಿದ್ದವು. ಕಳೆದ 64 ವರ್ಷಗಳಲ್ಲಿ, ಈ ಮೂಲಭೂತ ಉದ್ದೇಶಗಳನ್ನು ಸಾಧಿಸಲು ಎಲ್‌ಐಸಿ ತನ್ನನ್ನು ಸಮರ್ಪಿಸಿಕೊಂಡು ಅತ್ಯಂತ ಯಶಸ್ವಿ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಯಾಗಿ ಹೊರಹೊಮ್ಮಿದೆ. ಇದು ಆರ್ಥಿಕತೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಈ ಮಹಾನ್ ಸಂಸ್ಥೆಯ ಹೆಜ್ಜೆಗುರುತುಗಳು ಕಂಡುಬರದ ಆರ್ಥಿಕತೆಯ ಯಾವುದೇ ವಲಯವನ್ನು ಕಾಣುವುದು ಕಷ್ಟ. ಇದು ದೇಶದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದೆ. ಆರ್ಥಿಕ ವ್ಯವಸ್ಥೆಯಲ್ಲಿ ಸುಮಾರು 36 ಲಕ್ಷ ಕೋಟಿ ಹೂಡಿಕೆ ಮಾಡಿದೆ. 82% ಕ್ಕಿಂತ ಹೆಚ್ಚು ಎಲ್‌ಐಸಿ ಹೂಡಿಕೆಗಳು ಸರ್ಕಾರಿ ಎಕ್ಯುರಿಟಿಗಳು ಮತ್ತು ಮೂಲಸೌಕರ್ಯ ವಲಯಗಳಲ್ಲಿವೆ.

ಒಂದು ಟ್ರಸ್ಟ್ ಅಥವಾ ಪರಸ್ಪರ ಹಿತ ಸಂಸ್ಥೆ

ಎಲ್‌ಐಸಿಯನ್ನು 1956 ರಲ್ಲಿ ರೂ 5 ಕೋಟಿಗಳ ಈಕ್ವಿಟಿ ಬಂಡವಾಳದೊಂದಿಗೆ ಸ್ಥಾಪಿಸಲಾಯಿತು. 2011 ರಲ್ಲಿ ನಿಯಂತ್ರಕ ಮಾನದಂಡಗಳನ್ನು ಪೂರೈಸಲು ಬಂಡವಾಳವನ್ನು ರೂ 100 ಕೋಟಿಗೆ ಹೆಚ್ಚಿಸಲಾಯಿತು. ಈ ಹೆಚ್ಚುವರಿ ಬಂಡವಾಳವನ್ನು ಸಹ ಆಂತರಿಕವಾಗಿ ಉತ್ಪಾದಿಸಲಾಯಿತು. ಎಲ್‌ಐಸಿ ಒಂದು ವಿಶಿಷ್ಟ ಸಂಸ್ಥೆಯಾಗಿದ್ದು, ವಾರ್ಷಿಕ ಮೌಲ್ಯಮಾಪನದ ಮೂಲಕ ಉತ್ಪತ್ತಿಯಾಗುವ ಲಾಭಾಂಶವನ್ನು ಸರ್ಕಾರ ಮತ್ತು ಪಾಲಿಸಿದಾರರಿಗೆ 5:95 ಅನುಪಾತದಲ್ಲಿ ವಿತರಿಸಲಾಗುತ್ತದೆ. ಎಲ್‌ಐಸಿ ಕಾಯಿದೆಗೆ ತಿದ್ದುಪಡಿ ಮಾಡುವ ಮೂಲಕ ಇದನ್ನು ಈಗ 10:90 ಗೆ ಬದಲಾಯಿಸಲಾಗಿದೆ. ಆರಂಭಿಕ ಹೂಡಿಕೆಯ ನಂತರ ವ್ಯವಹಾರದ ವಿಸ್ತರಣೆಗೆ ಮಾಲೀಕನಾಗಿ ಸರ್ಕಾರವು ಯಾವುದೇ ಹೆಚ್ಚುವರಿ ಬಂಡವಾಳವನ್ನು ನೀಡಿಲ್ಲ. ಸಂಪೂರ್ಣ ಬೆಳವಣಿಗೆ ಮತ್ತು ವಿಸ್ತರಣೆಯನ್ನು ಪಾಲಿಸಿದಾರರ ಹಣದ ಮೂಲಕ ಮಾಡಲಾಗಿದೆ. ನಿಯಮಾವಳಿಗಳ ಪ್ರಕಾರ ಅಗತ್ಯವಿರುವ ಸಾಲ್ವೆನ್ಸಿ ಮಾರ್ಜಿನ್ ಅನ್ನು ಸಹ ಪಾಲಿಸಿದಾರರ ನಿಧಿಗಳ ಮೂಲಕ ಒದಗಿಸಲಾಗಿದೆ. ಎಲ್‌ಐಸಿ ಯ ಈ ವಿಶಿಷ್ಟ ಗುಣಲಕ್ಷಣವು ಅದನ್ನು ಟ್ರಸ್ಟ್ ಅಥವಾ ಮ್ಯೂಚುಯಲ್ ಬೆನಿಫಿಟ್ ಸೊಸೈಟಿ(ಪರಸ್ಪರ ಹಿತ ಸಂಸ್ಥೆ)ಯಂತೆ ಕಾಣುವಂತೆ ಮಾಡುತ್ತದೆ. ಹೀಗಿರುವಾಗ ಸರ್ಕಾರವು ತನ್ನ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಎಲ್‌ಐಸಿ ಯ ಷೇರುಗಳನ್ನು ಮಾರಾಟ ಮಾಡುವುದು ಅನೈತಿಕವಾಗಿದೆ.


ಎಲ್‌ಐಸಿ ಕಳೆದ 64 ವರ್ಷಗಳಲ್ಲಿ ತನ್ನ ಅದ್ಭುತ ಕಾರ್ಯನಿರ್ವಹಣೆಯ ಮೂಲಕ ರಾಷ್ಟ್ರೀಕರಣದ ಉದ್ದೇಶಗಳನ್ನು ಪೂರೈಸಿದೆ. ಇದು ದೇಶದ ಮೂಲೆ-ಮೂಲೆಗಳಿಗೆ ಜೀವ ವಿಮೆಯ ಸಂದೇಶವನ್ನು ಹರಡಿದೆ. ಇದು ದೇಶದಾದ್ಯಂತ್ಯೆಲ್ಲರೂ ಗುರುತಿಸುವ ಬ್ರ್ಯಾಂಡ್ ಆಗಿ ಮಾರ್ಪಟ್ಟಿದೆ. 40 ಕೋಟಿಗೂ ಹೆಚ್ಚು ಪಾಲಿಸಿದಾರರ ನೆಲೆಯೊಂದಿಗೆ, ಇದು ಲಕ್ಷಾಂತರ ಭಾರತೀಯ ಕುಟುಂಬಗಳ ಜೀವನವನ್ನು ಮುಟ್ಟಿದೆ. ಎಲ್‌ಐಸಿ ನಿರ್ವಹಣೆಯಲ್ಲಿರುವ ಆಸ್ತಿಗಳು ರೂ.38 ಲಕ್ಷ ಕೋಟಿ. ಇದು ವಾರ್ಷಿಕವಾಗಿ 4-5 ಲಕ್ಷ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಬಹುದಾದ ನಿಧಿಯನ್ನು ಉತ್ಪಾದಿಸುತ್ತದೆ. ಸ್ಥಾಪನೆಯಿಂದ ಇಲ್ಲಿಯವರೆಗೆ ರೂ.28,695 ಕೋಟಿ ಗೂ ಅಧಿಕ ಮೊತ್ತದ ಸಂಚಿತ ಲಾಭಾಂಶವನ್ನು ಸರ್ಕಾರಕ್ಕೆ ಪಾವತಿಸಿದೆ.

ಎಲ್‌ಐಸಿ ಇಂದು 23 ಖಾಸಗಿ ವಿಮಾದಾರರೊಂದಿಗೆ ಸ್ಪರ್ಧಿಸುತ್ತಿದೆ. 20 ವರ್ಷಗಳ ಸ್ಪರ್ಧೆಯ ನಂತರವೂ, ಪ್ರೀಮಿಯಂ ಆದಾಯದಲ್ಲಿ ಸುಮಾರು 66% ಮತ್ತು ಪಾಲಿಸಿಗಳ ಸಂಖ್ಯೆಯಲ್ಲಿ 75% ರಷ್ಟು ಮಾರುಕಟ್ಟೆ ಪಾಲನ್ನು ಹೊಂದಿ ಮಾರುಕಟ್ಟೆಯಲ್ಲಿ ಪ್ರಾಬಲ್ಯವನ್ನು ಮುಂದುವರೆಸಿದೆ. 2020-21 ರ ಹಣಕಾಸು ವರ್ಷದಲ್ಲಿ, ಎಲ್‌ಐಸಿ ರೂ.4.02 ಲಕ್ಷ ಕೋಟಿ ಒಟ್ಟು ಪ್ರೀಮಿಯಂ ಆದಾಯವನ್ನು ಗಳಿಸಿದೆ (ಹೊಸ ವ್ಯವಹಾರ ಮತ್ತು ನವೀಕರಣ ಎರಡೂ ಸೇರಿ). ರೂ.2.72 ಲಕ್ಷ ಕೋಟಿ ಹೂಡಿಕೆ ಆದಾಯ ಗಳಿಸಿದೆ. 2020-21ನೇ ಸಾಲಿನಲ್ಲಿ ಈ ದೈತ್ಯ ಸಂಸ್ಥೆಯ ಒಟ್ಟು ನಿವ್ವಳ ಆದಾಯ ರೂ.6.82 ಲಕ್ಷ ಕೋಟಿ ಯಾಗಿದೆ. ಈ ವರ್ಷದಲ್ಲಿ ರೂ.2.1 ಲಕ್ಷ ಕೋಟಿ ಗಳ ಕ್ಲೇಮ್‌ಗಳನ್ನು ಇತ್ಯರ್ಥಗೊಳಿಸಿದೆ. ಇದು ಎಲ್‌ಐಸಿಯನ್ನು ಸರ್ವಿಸ್ ನೀಡುತ್ತಿರುವ ಪಾಲಿಸಿಗಳ ಸಂಖ್ಯೆ ಮತ್ತು ಇತ್ಯರ್ಥಪಡಿಸಿದ ಕ್ಲೈಮ್‌ಗಳ ವಿಷಯದಲ್ಲಿ ವಿಶ್ವದ ಅತಿದೊಡ್ಡ ಜೀವ ವಿಮಾದಾರನನ್ನಾಗಿ ಮಾಡಿದೆ. ವಾಸ್ತವವಾಗಿ ಬಹಳ ವರ್ಷಗಳಿಂದ ಇದು ವಿಶ್ವದ ಅತ್ಯುತ್ತಮ ಕ್ಲೈಮ್ ಇತ್ಯರ್ಥ ದಾಖಲೆಯನ್ನು ಹೊಂದಿದೆ.

ಬಂಡವಾಳ ಹಿಂತೆಗೆತ ಏಕೆ?

ಈ ಸಮಸ್ಯೆಯ ಬೇರುಗಳು 1991 ರಲ್ಲಿ ಭಾರತೀಯ ಆಳುವ ವರ್ಗಗಳು ಅಪ್ಪಿಕೊಂಡ್ಡ ನವ-ಉದಾರವಾದದ ನೀತಿಗಳಲ್ಲಿವೆ. ನವ-ಉದಾರವಾದದ ಮೂಲ ಉದ್ದೇಶಗಳು ಸಾರ್ವಜನಿಕ ವಲಯದ ಖಾಸಗೀಕರಣ; ಖಾಸಗಿ ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಒದಗಿಸುವುದು; ನಿಯಂತ್ರಣಗಳನ್ನು ಸಡಿಲಿಸುವುದು; ಹಣಕಾಸು ಬಂಡವಾಳದ ಮುಕ್ತ ಹರಿವು ಮತ್ತು ಬಡವರಿಗೆ ಕೊಡುವಸಬ್ಸಿಡಿಗಳಲ್ಲಿ ಕಡಿತ ಸೇರಿದಂತೆ 'ಮಿತವ್ಯಯ' ಕ್ರಮಗಳು.

ಈ ಪ್ರಮುಖ ಉದ್ದೇಶಗಳು ಅಂದಿನಿಂದ ಬಂದಿರುವ ಎಲ್ಲ ಸರ್ಕಾರಗಳ ನೀತಿಗಳ ಮೇಲೆ ಪ್ರಭಾವ ಬೀರುತ್ತಿವೆ. ಈ ಪ್ರತಿಗಾಮಿ ನೀತಿಗಳ ಪ್ರಭಾವದಿಂದ ಯಶಸ್ವಿ ವಿಮಾ ಕ್ಷೇತ್ರವೂ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.



"ಈ ಮೂಲಕ ಮೋದಿ 2.0 ಗೆ ಸಾಮಾನ್ಯ ಭಾರತೀಯರ ವೆಚ್ಚದಲ್ಲಿ ಕೆಲವು ಸಾವಿರ ಕೋಟಿ ರೂ. ಗಳಿಗೆ ಜೀವಮಾನದ ವಿಮೆ ಮಾಡಲಾಗಿದೆ ಎಂದು ಪ್ರಮಾಣೀಕರಿಸುತ್ತೇವೆ"

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ವಿಮಾ ಕ್ಷೇತ್ರದ ಸುಧಾರಣೆಗಳ ಕುರಿತಾದ ಮಲ್ಹೋತ್ರಾ ಸಮಿತಿಯ ಶಿಫಾರಸುಗಳು ನವ ಉದಾರವಾದಿ ಕಾರ್ಯಸೂಚಿಗೆ ಸರಿಹೊಂದುವಂತೆ ಮಾಡಲ್ಪಟ್ಟವು. ಈ ಸಮಿತಿಯು ಭಾರತೀಯ ಮತ್ತು ವಿದೇಶಿ ಬಂಡವಾಳದ ಭಾಗವಹಿಸುವಿಕೆಗಾಗಿ ವಿಮಾ ಕ್ಷೇತ್ರವನ್ನು ತೆರೆಯಲು ಶಿಫಾರಸು ಮಾಡಿತು. ಎಲ್‌ಐಸಿಯ ಬಂಡವಾಳವನ್ನು ರೂ. 5 ಕೋಟಿ ಗಳಿಂದ ರೂ. 100 ಕೋಟಿಗೆ ಹೆಚ್ಚಿಸಿ ಶೇ.50 ರಷ್ಟು ಷೇರುಗಳನ್ನು ಹಿಂತೆಗೆದುಕೊಳ್ಳುವಂತೆ ಸರಕಾರಕ್ಕೆ ಸಲಹೆ ನೀಡಿತು. ಈ ಶಿಫಾರಸುಗಳನ್ನು ಜಾರಿಗೊಳಿಸಲು ಈ ಎಲ್ಲ ಸರ್ಕಾರಗಳ ಪ್ರಯತ್ನಗಳು ನೌಕರರು ಮತ್ತು ಸಾರ್ವಜನಿಕರಿಂದ ತೀವ್ರ ಪ್ರತಿರೋಧಕ್ಕೆ ಒಳಗಾದವು.

ರಾಷ್ಟ್ರೀಕರಣ ವಿರುದ್ಧದ ಬೃಹತ್ ಸಾರ್ವಜನಿಕ ಅಭಿಪ್ರಾಯವನ್ನು ನಿರ್ಲಕ್ಷಿಸಿ, ವಾಜಪೇಯಿ ಸರ್ಕಾರವು 1999 ರಲ್ಲಿ ಖಾಸಗಿ ಸಹಭಾಗಿತ್ವಕ್ಕೆ ವಿಮಾ ಕ್ಷೇತ್ರವನ್ನು ತೆರೆಯಿತು ಆದರೆ ಸಾರ್ವಜನಿಕ ವಲಯದ ವಿಮಾ ಉದ್ಯಮದ ಖಾಸಗೀಕರಣ ಮಾಡುವಲ್ಲಿ ಯಶಸ್ವಿಯಾಗಲಿಲ್ಲ. ಅಖಿಲ ಭಾರತ ವಿಮಾನೌಕರರ ಸಂಘ(ಎಐಐಇಎ)ದ ನೇತೃತ್ವದ ಪ್ರತಿರೋಧ ಮತ್ತು ಅಭಿಯಾನವು 25 ವರ್ಷಗಳ ಕಾಲ ಈ ಮಾರ್ಗದಲ್ಲಿ ಮುಂದುವರೆಯದಂತೆ ಈ ಎಲ್ಲ ಸರ್ಕಾರಗಳನ್ನು ತಡೆಯಿತು. ಆದಾಗ್ಯೂ, ಬಿಜೆಪಿ ಸರ್ಕಾರವು ಈಗ ಅನುಭವಿಸುತ್ತಿರುವ ಪಾಶವೀ ಸಂಸದೀಯ ಬಹುಮತದೊಂದಿಗೆ, ತನ್ನ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಎಲ್‌ಐಸಿಯಲ್ಲಿ ಬಂಡವಾಳ ಹಿಂತೆಗೆದುಕೊಳ್ಳಲು ಮುಂದಾಗಿದೆ.

ಸರ್ಕಾರವು ಎಲ್‌ಐಸಿ ಐಪಿಒ ಪರವಾಗಿ ಮಂಡಿಸಿದ ವಾದಗಳೆಂದರೆ ಇದರಿಂದ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಬಹುದು ಎಂಬುದು. ಆದರೆ ಎಲ್‌ಐಸಿ ಯಾವಾಗಲೂ ಪಾಲಿಸಿದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಕಳಂಕರಹಿತ ದಾಖಲೆಯೊಂದಿಗೆ ಸಂಸತ್ತಿನ ಮೂಲಕ ರಾಷ್ಟ್ರಕ್ಕೆ ಜವಾಬ್ದಾರಿಕೆ ನಿಭಾಯಿಸುತ್ತಿರುವ ಸಂಸ್ಥೆ ಯಾಗಿದೆ. ಇದು ಪ್ರತಿ ವರ್ಷವೂ ಅಗಾಧವಾದ ಹೂಡಿಕೆ ಮಾಡಬಹುದಾದ ಹೆಚ್ಚುವರಿ ಬಂಡವಾಳ ಉತ್ಪಾದಿಸುವುದರಿಂದ, ಶೇರು ಮಾರುಕಟ್ಟೆಗೆ ಇದನ್ನು ಒಯ್ಯುವುದು ಬಂಡವಾಳದ ಸೃಷ್ಟಿಗೆ ಸಹಾಯ ಮಾಡುತ್ತದೆ ಎಂಬ ವಾದವೂ ಯಾವುದೇ ಅರ್ಥವನ್ನು ಹೊಂದಿಲ್ಲ. ಎಲ್‌ಐಸಿಯ ಮೌಲ್ಯದ ಬೀಗವನ್ನು ತೆರೆಯುವುದರಿಂದ ಭಾರತೀಯ ಸಾರ್ವಜನಿಕರಿಗೆ ಲಾಭವಾಗುತ್ತದೆ ಎಂಬ ವಾದವು ಹಾಸ್ಯಾಸ್ಪದ. ಏಕೆಂದರೆ ಷೇರು ಮಾರುಕಟ್ಟೆಯಲ್ಲಿ

ಪುಟ 14 ನೋಡಿ

ಗಂಗಾವತಿಯಲ್ಲಿ ಜನವರಿ 2 ರಿಂದ 4 ರ ವರೆಗೆ ನಡೆದ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳನ್ನು ಪಾಟಗಳು ಕಳೆದ ಮೂರು ಸಂಚಿಕೆಗಳಲ್ಲಿ ನೋಡಿದ್ದೀರಿ. ಈ ಸಂಚಿಕೆಯಲ್ಲಿ ಇನ್ನೂ ಕೆಲವು ನಿರ್ಣಯಗಳು ಮುಂದಿನ ಪುಟಗಳಲ್ಲಿ....

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದು ಮಾಡಿಸಲು ಪ್ರಬಲ ಹೋರಾಟ

ದೇಶದ ಮೊದಲ ಶಿಕ್ಷಕಿ ಹಾಗೂ ಮಹಿಳಾ ಶಿಕ್ಷಣಕ್ಕಾಗಿ ಅವಿರತ ಶ್ರಮಿಸಿದ ಸಾವಿತ್ರಿ ಬಾಯಿ ಪುಲೆ ಜನ್ಮದಿನದಂದೇ ದಲಿತ ಮತ್ತು ಮಹಿಳೆಯರನ್ನು ಶಿಕ್ಷಣದ ಕಕ್ಷೆಯಿಂದ ಹೊರ ತಳ್ಳುವ ಹೊಸ ಶಿಕ್ಷಣ ನೀತಿಯನ್ನು ವಿರೋಧಿಸುವ ಈ ಕೆಳಗಿನ ನಿರ್ಣಯವನ್ನು ಕೈಗೊಳ್ಳಲಾಯಿತು.

ದೇಶದಲ್ಲೇ ಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಕರ್ನಾಟಕ ಎಂದು ಸರಕಾರ ಹೆಮ್ಮೆ ಪಟ್ಟುಕೊಳ್ಳುತ್ತಿದೆ. ಆದರೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಅದು ಹೆಮ್ಮೆಯ ವಿಚಾರವಲ್ಲ, ಹಾಗಾದರೆ ಹೆಮ್ಮೆಯ ವಿಚಾರವಾಗಿರುವುದು ಶಿಕ್ಷಣದ ವಾಣಿಜ್ಯೀಕರಣ ಬಯಸುವ ಉಳ್ಳವರ ಮನಸ್ಸುಗಳಿಗೆ. ವಿದ್ಯಾರ್ಥಿ, ಪೋಷಕ, ಶಿಕ್ಷಕ, ಉಪನ್ಯಾಸಕ, ಶಿಕ್ಷಣ ತಜ್ಞರ ಜೊತೆ ಒಂದಕ್ಷರವನ್ನೂ ಚರ್ಚಿಸಿದೆ ಇದನ್ನು ರಾಜ್ಯದಲ್ಲಿ ಹೇರಲಾಗಿದೆ.

ಹೊಸ ಶಿಕ್ಷಣ ನೀತಿಯು ಪರ ಮತ್ತು ವಿರುದ್ಧ ಹೋರಾಟಗಳು ನಡೆಯುತ್ತಿವೆ. ಶಿಕ್ಷಣ ಕ್ಷೇತ್ರ ವರ್ತಮಾನದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಇವನ್ನು ಪರಿಹರಿಸಲು ಹೊಸ ಶಿಕ್ಷಣ ನೀತಿ ಬಂದಿದೆ ಎಂದು ಸರಕಾರ ಸಮರ್ಥನೆ ಮಾಡಿಕೊಳ್ಳುತ್ತಿದೆ. ಶಿಕ್ಷಣ ಕ್ಷೇತ್ರದ ವರ್ತಮಾನದ ಸಮಸ್ಯೆಗಳನ್ನು ಅರ್ಥಮಾಡಿಕೊಂಡರೆ ಹೊಸ ಶಿಕ್ಷಣ ನೀತಿಯಲ್ಲಿ ವರ್ತಮಾನದ ಸಮಸ್ಯೆಗಳಿಗೆ ಪರಿಹಾರ ಇದೆಯೇ ಎಂದು ತೀರ್ಮಾನಿಸಬಹುದು. ಒಂದು ವೇಳೆ ಪರಿಹಾರ ಇಲ್ಲದಿದ್ದರೆ ವರ್ತಮಾನದ ಸಮಸ್ಯೆಗಳು ಮುಂದುವರಿಸುವ ಸಾಧ್ಯತೆಗಳು ಹೆಚ್ಚಿವೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ-2020 ರ ಕುರಿತು ಭ್ರಮೆ ಹುಟ್ಟಿಸಲಾಗುತ್ತಿದೆ. ಅದು ವರ್ತಮಾನದ ಶೈಕ್ಷಣಿಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವಹಿಸುವುದಿಲ್ಲ. ಹೊಸ ಶಿಕ್ಷಣ ನೀತಿ ಶಿಕ್ಷಣದ ವ್ಯಾಪಾರೀಕರಣ ಹಾಗೂ ಕೇಂದ್ರೀಕರಣಕ್ಕೆ ಹೆಚ್ಚು ಒತ್ತು ನೀಡುತ್ತದೆ. ಮುಖ್ಯವಾಗಿ ಹೊಸ ಶಿಕ್ಷಣ ನೀತಿ ಸೃಷ್ಟಿಸಬಹುದಾದ ಸಮಸ್ಯೆಗಳತ್ತ ನೋಡುವುದಾದರೆ, ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ಹಣಕಾಸಿನ ಯಾವ ಮಾರ್ಗದರ್ಶನವೂ ಇದರಲ್ಲಿ ಇಲ್ಲ ಎಂಬುದು ಮುಖ್ಯವಾಗಿದೆ.

ಹೊಸ ಶಿಕ್ಷಣ ನೀತಿಯು ಹಣ ವಿನಿಯೋಜನೆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಹಣ ವಿನಿಯೋಜನೆ ಮಾಡದ ಕಾರಣ ಶಿಕ್ಷಣ ಈಗ ದಿವಾಳಿ ಅಂಚಿನಲ್ಲಿದೆ. ಪರಿಣಾಮ ಖಾಸಗಿ ಶಿಕ್ಷಣ ಸಂಸ್ಥೆಗಳು ಬಲಗೊಂಡು ಸಾರ್ವಜನಿಕ ಶಿಕ್ಷಣ ಮುಚ್ಚುವ ಸ್ಥಿತಿ ಬಂದಿದೆ. ಶಿಕ್ಷಣಕ್ಕೆ ಬಜೆಟ್ ನಲ್ಲಿ ಹೆಚ್ಚುವರಿ ಹಣ ತೆಗೆದಿರಿಸಿದರೆ ಮಾತ್ರ ಗುಣ ಮಟ್ಟದ ಶಿಕ್ಷಣ ನೀಡಲು ಸಾಧ್ಯ. ಆದರೆ ಹೊಸ ಶಿಕ್ಷಣ ನೀತಿಯಿಂದ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಯಾಕೆಂದರೆ ಈಗ ದೇಶದ ಆರ್ಥಿಕ ಸಮಸ್ಯೆ ಋಣಾತ್ಮಕ ಸ್ಥಿತಿಗೆ ತಲುಪಿದೆ. ಶಿಕ್ಷಣದ ಮೇಲೆ ಜಿಡಿಪಿಯ ಶೇ.6 ರಷ್ಟು ವಿಇಯೋಜಿಸಬೇಕೆಂದು 1968ರಲ್ಲಿ ಬಂದ ಮೊದಲನೇ ಶಿಕ್ಷಣ ನೀತಿ ಹೇಳಿದೆ. ನಂತರ 1986ರಲ್ಲಿ ಬಂದ ಎರಡನೇ ಶಿಕ್ಷಣ ನೀತಿ ಕೂಡ ಶೇ.6ರಷ್ಟು ವಿನಿಯೋಜಿಸಬೇಕೆಂದು ಹೇಳಿದೆ. ಆದರೆ ಇಲ್ಲಿವರೆಗೆ ಯಾವ ಸರಕಾರವೂ ಶಿಕ್ಷಣದ ಮೇಲೆ ಜಿಡಿಪಿಯ ಶೇ.6 ರಷ್ಟು ವಿನಿಯೋಜಿಸಿಲ್ಲ. ಯುಪಿಎ-2 ಸರಕಾರದ (2009-2014)ರ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಶಿಕ್ಷಣದ ಮೇಲೆ ದೇಶದ ಜಿಡಿಪಿಯ ಶೇ.3.2 ರಷ್ಟು ಮಾತ್ರ ವಿನಿಯೋಜಿಸಿವೆ. ಎನ್.ಡಿ.ಎ-2 ಸರಕಾರ ಅವಧಿಯಲ್ಲಿ (2014-19) ಅದು ಇನ್ನಷ್ಟು ಕಡಿಮೆಯಾಗಿ ಜಿಡಿಪಿಯ ಶೇ.2.9 ರಷ್ಟು ಮಾತ್ರ ವಿನಿಯೋಜಿಸಲಾಗಿದೆ ಎಂದು ಸರಕಾರದ ಅಂಕಿ ಅಂಶಗಳೆ ಹೇಳುತ್ತಿವೆ. ಶಿಕ್ಷಣ ಕ್ಷೇತ್ರದಲ್ಲಿನ ಹಣಕಾಸಿನ ಸಮಸ್ಯೆಯನ್ನು ನಿವಾರಿಸುವ ಯಾವ ದಾರಿಯೂ ಹೊಸ ಶಿಕ್ಷಣ ನೀತಿಯಲ್ಲಿ ಇಲ್ಲ.

ಮೀಸಲಾತಿಯನ್ನು ಸರಕಾರಗಳು ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಬಳಸಿದಷ್ಟು ಸಾಮಾಜಿಕ ನ್ಯಾಯ ಒದಗಿಸಲು ಬಳಸದೇ ಖಾಸಗೀ ಸಂಸ್ಥೆಗಳಿಗೆ ಶಿಕ್ಷಣ ನೀಡಲು ಅವಕಾಶ ಕಲ್ಪಿಸಿದೆ. ಅಷ್ಟು ಮಾತ್ರವಲ್ಲ ಮೆಡಿಕಲ್, ಇಂಜಿನೀಯರಿಂಗ್ ಮುಂತಾದ ಪ್ರೊಫೆಶನಲ್ ಶಿಕ್ಷಣದ ಪೂರೈಕೆಯನ್ನು ಹತೋಟಿಯಲ್ಲಿಟ್ಟುಕೊಂಡು ಖಾಸಗಿ ಸಂಸ್ಥೆಗಳು ಶಿಕ್ಷಣದ ಹೆಸರಲ್ಲಿ ದರೋಡೆ ಮಾಡಲು ಅವಕಾಶ ಕಲ್ಪಿಸಲಾಯಿತು. ಪೂರೈಕೆ ಕಡಿಮೆ ಮಾಡಿ ಇರುವ ಅಲ್ಪ ಸ್ವಲ್ಪ ಸೀಟುಗಳನ್ನು ಮೀಸಲಾತಿ ಮೂಲಕ ಹಂಚಲಾಯಿತು. ಇದರಿಂದ ಮೇಲ್ಜಾತಿ ಮತ್ತು ತಳಜಾತಿಗಳ ನಡುವೆ ಜೀವನ ಪರ್ಯಂತ ಕೊನೆಗೊಳ್ಳದ ವೈಮನಸ್ಸು ಸೃಷ್ಟಿಯಾಯಿತು. ಈ ವೈಮನಸ್ಸನ್ನು ರಾಜಕೀಯ ಪಕ್ಷಗಳು ಜನರನ್ನು ಒಡೆದು ಆಳಲು ಬಳಸಿವೆ. ಮಂಡಲ್ ವರ್ಸಸ್ ಕಮಂಡಲ್ ಅಥವಾ ಅದ್ವಾನಿ ರಥಯಾತ್ರೆ ಇದಕ್ಕೆ ಉತ್ತಮ ಉದಾಹರಣೆ. ಸಮಾಜದಲ್ಲಿರುವ ವಿವಿಧ ಗುಂಪುಗಳು ಜಾತಿ, ಧರ್ಮದ ಹೆಸರಲ್ಲಿ ಪರಸ್ಪರ ಕಚ್ಚಾಡಿದರೆ ಇವರೆಲ್ಲ ಒಟ್ಟು ಸೇರಿ ತಮಗೆ ಶಿಕ್ಷಣ ಕೊಡಿ, ಆರೋಗ್ಯ ಕೊಡಿಯೆಂದು ಕೇಳುವ ಸಂದರ್ಭವೇ ಸೃಷ್ಟಿಯಾಗುವುದಿಲ್ಲ. ಜೊತೆಗೆ ಖಾಸಗಿ ಬಂಡವಾಳ ಶಿಕ್ಷಣದ ವ್ಯಾಪಾರ ಮೂಲಕ ತಮ್ಮ ಲಾಭ ಹೆಚ್ಚಿಸಿಕೊಳ್ಳುವುದು ಸುಲಭವಾಯಿತು. ಶಿಕ್ಷಣದ ಪೂರೈಕೆಯನ್ನು ಹೆಚ್ಚಿಸುವುದು ಈ ಸಮಸ್ಯೆ ದೂರಗಾಮಿ ಪರಿಹಾರ. ಆದರೆ ಆ ದಿಶೆಯಲ್ಲಿ ಸರಕಾರಗಳು ಮಾಡಿದ ಪ್ರಯತ್ನ ಅತ್ಯಂತ ಕಡಿಮೆ. ಹೊಸ ಶಿಕ್ಷಣ ನೀತಿ ಮೀಸಲಾತಿಯನ್ನು ಇಲ್ಲವಾಗಿಸುವ ಸಾಧ್ಯತೆಗಳು ಹೆಚ್ಚಾಗಿ ಕಾಣುತ್ತಿವೆ. ಸಾಮಾಜಿಕ ನ್ಯಾಯ ಒದಗಿಸುವುದು ಸರಕಾರದ ಉದ್ದೇಶವಾಗಿದ್ದರೆ ಎಲ್ಲರಿಗೂ ಸರಕಾರವೇ ಶಿಕ್ಷಣ ನೀಡಬೇಕಿತ್ತು. ಆದರೆ ಸರಕಾರವೇ ಎಲ್ಲರಿಗೂ ಶಿಕ್ಷಣ ನೀಡುವ ಬದಲು ಖಾಸಗಿಯವರಿಗೆ ಎಲ್ಲವನ್ನೂ ಧಾರೆ ಎರೆದು ಕೊಡಲು ಹೊರಟಿದೆ.

ಈ ನೀತಿಯ ಮತ್ತೊಂದು ಅಪಾಯ ಏನೆಂದರೆ 4 ವರ್ಷಗಳ ಪದವಿ ತರಗತಿಗಳ ಸ್ವರೂಪ, ಸಿ.ಬಿ.ಸಿ.ಎಸ್. (Choice Based Credit System- ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆ) ಪಠ್ಯಕ್ರಮದ ಕುರಿತು ವಿವರಿಸಲಾಗಿದೆ. ಕಾರ್ಯಪಡೆಯ ನಾಲ್ಕು ಜನ ಏಕಪಕ್ಷೀಯವಾಗಿ ಕರ್ನಾಟಕದ ಉನ್ನತ ಶಿಕ್ಷಣದ ಭವಿಷ್ಯವನ್ನು ನಿರ್ಧರಿಸುತ್ತಿರುವುದು ಇಲ್ಲಿನ ದುರಂತ. ಈ ನಾಲ್ಕು ವರ್ಷಗಳ ಬಹುಶಿಸ್ತೀಯ ಪದವಿ ಶಿಕ್ಷಣ ಮತ್ತು ಸಿ.ಬಿ.ಸಿ.ಎಸ್ ಪಠ್ಯಕ್ರಮದ ವಿವರಗಳನ್ನು ಅದರ ಸಾಧಕ-ಬಾಧಕಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದು ಈಗಿರುವ ಇದ್ದ ಬದ್ದ ಸಾಮಾಜಿಕ ನ್ಯಾಯವನ್ನೂ, ಕೆಳ ವರ್ಗಗಳ ಜನರಿಗೆ ಉನ್ನತ ಶಿಕ್ಷಣಕ್ಕೆ ಅವಕಾಶವಿರುವ ಅರೆಬರೆ ಸಮಾನ ವ್ಯವಸ್ಥೆಯನ್ನೂ ನಾಶ

ಪುಟ 12 ನೋಡಿ

ಇ-ಸಾಕ್ಷರತಾ ಅಭಿಯಾನ: ತಂತ್ರಜ್ಞಾನ ಲಭ್ಯತೆಯಲ್ಲಿ ಅಸಮಾನತೆಯನ್ನು ಗಮನಿಸಬೇಕು

ಇಡೀ ಆಳ್ವಿಕೆ ಡಿಜಿಟಲೀಕರಣದತ್ತ ಸಾಗುತ್ತಿದೆ. ವಿವಿಧ ಸರ್ಕಾರಿ ಸೇವೆಗಳು ಮತ್ತು ಯೋಜನೆಗಳು ಲಭ್ಯವಾಗಬೇಕಾದರೆ ನಾಗರಿಕರು ಮೊಬೈಲ್ಗಳು, ಟ್ಯಾಬ್ಗಳು, ಕಂಪ್ಯೂಟರ್ಗಳನ್ನು ಬಳಸುವುದು ಕಡ್ಡಾಯವಾಗಿದೆ. ಬ್ಯಾಂಕಿಂಗ್, ಆರೋಗ್ಯ, ಸಾರಿಗೆ, ಇ-ಕ್ರಾಪ್, ಇ-ಶ್ರಮ್, ವಿವಿಧ ಸಾರ್ವಜನಿಕ ವಿತರಣಾ ಯೋಜನೆಗಳು, ಎಲ್ಲಾ ರೀತಿಯ ನೇರ ಹಣವರ್ಗಾವಣೆ ಯೋಜನೆಗಳು ಮುಂತಾದ ನಾಗರಿಕರ 44 ಅಗತ್ಯ ಸೇವೆಗಳ ತ್ವರಿತ ಡಿಜಿಟಲೀಕರಣದತ್ತ ಸರ್ಕಾರಗಳು ಸಾಗುತ್ತಿವೆ.

ಈ ಸೇವೆಗಳ ಬಳಕೆಯು ಸಂಪೂರ್ಣವಾಗಿ ಡಿಜಿಟಲ್ ಲಭ್ಯತೆಯ ಮೇಲೆ ಅವಲಂಬಿತವಾಗಿರುವುದರಿಂದ, ಈ ಸೇವೆಗಳನ್ನು ಪಡೆಯುವುದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ದೀನದಲಿತರಿಗೆ ತುಂಬಾ ಕಷ್ಟಕರವಾಗಿದೆ. ಡಿಜಿಟಲೀಕರಣವು ಭರದಿಂದ ಸಾಗಿರುವಾಗ, ವೈಯಕ್ತಿಕ ದತ್ತಾಂಶದ ರಕ್ಷಣೆಗೆ ಯಾವುದೇ ಖಾತ್ರಿ ಇಲ್ಲ. ಜನ ಸಮೂಹಗಳಲ್ಲಿ ದತ್ತಾಂಶ ರಕ್ಷಣೆ ಮತ್ತು ಗೌಪ್ಯತೆಯ ಪ್ರಾಮುಖ್ಯತೆಯ ಬಗ್ಗೆ ಯಾವುದೇ ಕನಿಷ್ಟ ಮಾಹಿತಿ ಇಲ್ಲ. ಈಗಾಗಲೇ, ರಾಜ್ಯದಲ್ಲಿ ಸಾಕ್ಷರತೆ ದರವು ದೇಶದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಒಂದು. ಪುರುಷ/ಮಹಿಳೆ, ನಗರ/ಗ್ರಾಮೀಣ ಸಾಕ್ಷರತೆ ದರಗಳ ನಡುವೆ ಅಗಾಧ ಅಂತರವಿದೆ. ಇವುಗಳೆಲ್ಲವೂ ವಾಸ್ತವವಾಗಿ ಅನುವು ಮಾಡಿ ಕೊಡುವವರು ಎಂದು ಹೇಳಿಕೊಳ್ಳುವ ಮಧ್ಯವರ್ತಿಗಳ ಹೊಸದೊಂದು ಗುಂಪನ್ನು ಹುಟ್ಟುಹಾಕುತ್ತವೆ. ಈ ಸಂದರ್ಭದಲ್ಲಿ, ಸಾರ್ವಜನಿಕರಿಗೆ, ವಿಶೇಷವಾಗಿ ಶ್ರಮಜೀವಿಗಳು, ಗ್ರಾಮೀಣ ಜನಸಾಮಾನ್ಯರು ಮತ್ತು ಅಸಂಘಟಿತ ವಲಯಗಳಿಗೆ ಇ-ಸಾಕ್ಷರತೆಯನ್ನು ಒದಗಿಸುವ ಆಧಾರ ಭೂತ ಮೂಲಸೌಕರ್ಯ, ಶಿಕ್ಷಣ ಮತ್ತು ಪರಿಣತಿಯನ್ನು ಒದಗಿಸಲು ಮಾಡುವ ಎಲ್ಲಾ ಪ್ರಯತ್ನಗಳು ಸರ್ಕಾರದ ಸಂಪೂರ್ಣ ಸ್ವಾಮ್ಯದಲ್ಲಿರಬೇಕು. ಇಲ್ಲದಿದ್ದರೆ ಜನ ಸಂಖ್ಯೆಯ ಬಹುಪಾಲು ಆಳ್ವಿಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಲಭ್ಯತೆಯಿಂದ ವಂಚಿತವಾಗುತ್ತದೆ.

ತಂತ್ರಜ್ಞಾನ ಲಭ್ಯವಾಗುವಲ್ಲಿ ಅಸಮಾನತೆ ಈ ಕೆಳಗಿನ ದೀರ್ಘಾವಧಿ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ:

ಅ) ಅಭಿವೃದ್ಧಿ ಕಾರ್ಯಕ್ರಮಗಳ ಲಭ್ಯತೆಯಲ್ಲಿ ದೊಡ್ಡ ಕಂದರ ಸೃಷ್ಟಿಯಾಗುತ್ತದೆ, ಹೀಗಾಗಿ ದೇಶದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಭಜನೆಯಲ್ಲಿ ಇದೂ ಸೇರಿಕೊಳ್ಳುತ್ತದೆ.

ಆ) ಡಿಜಿಟಲ್ ಸೌಲಭ್ಯಗಳು ಮತ್ತು ಉಪಕರಣಗಳ ಬಗ್ಗೆ ಸರಿಯಾದ ಜ್ಞಾನವಿಲ್ಲದೆ ಜನರು ಸುಲಭವಾಗಿ ಮೋಸ ಹೋಗುತ್ತಾರೆ.

ಇ) ಜನರಿಗೆ ಈಗಾಗಲೇ ಆಳ್ವಿಕೆ ಲಭ್ಯವಾಗಿರುವುದೇ ಬಹಳ ಕಡಿಮೆ, ಇದರೊಂದಿಗೇ ಅವರಿಗೆ ಅಭಿವೃದ್ಧಿ ಕಾರ್ಯಕ್ರಮಗಳೂ ಲಭ್ಯವಾಗದಂತಾಗುತ್ತದೆ.

ಈ) ಡಿಜಿಟಲ್ ತಂತ್ರಜ್ಞಾನ ಮತ್ತು ಸಾಧನಗಳು ಮತ್ತು ಆಪ್‌ಗಳು ಸೇರಿದಂತೆ ಪರಿಕರಗಳ ಕುರಿತು ಸರಿಯಾದ ಜ್ಞಾನವಿಲ್ಲದೆ ಜನರು ತಮ್ಮ ವೈಯಕ್ತಿಕ ದತ್ತಾಂಶದ ಖಾಸಗಿತ್ವದ ಮೂಲಭೂತ ಹಕ್ಕಿನ ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ.

ಸರ್ಕಾರಗಳು ತೆಗೆದು ಕೊಳ್ಳಬೇಕಾದ ಕ್ರಮಗಳು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:

ಅ) ಸರ್ಕಾರವು ಇ-ಸಾಕ್ಷರತಾ ಮಿಷನನ್ನು ಕೈಗೆತ್ತಿಕೊಳ್ಳಲು ಒಂದು ನೀತಿಯನ್ನು ಪ್ರಕಟಿಸಬೇಕು, ಈ ಮೂಲಕ ಎಲ್ಲರಿಗೂ ಲಭ್ಯತೆಯ ಸಮಾನ ಹಕ್ಕುಗಳನ್ನು ಒದಗಿಸಬೇಕು, ಇದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಮಿಷನರಿಗಳನ್ನು ಸ್ಥಾಪಿಸಬೇಕು.

ಆ) ಡಿಜಿಟಲ್ ಸೇವೆಗಳನ್ನು ಪಡೆಯಲು ಅನುಕೂಲವಾಗುವಂತೆ ಸರ್ಕಾರವು ಮೂಲಸೌಕರ್ಯಗಳನ್ನು ಒದಗಿಸಬೇಕು.


ಇ) ಎಲ್ಲಾ ಡಿಜಿಟಲ್ ಸೇವೆಗಳು ಸ್ಥಳೀಯ ಭಾಷೆಗಳಲ್ಲಿ ಮತ್ತು ಬಳಸಲು ಅನುಕೂಲವಾಗುವ ರೀತಿಯಲ್ಲಿರಬೇಕು.

ಈ) ಎಲ್ಲಾ ಡಿಜಿಟಲ್ ಸೇವೆಗಳನ್ನು ಮುಕ್ತ ತಂತ್ರಾಂಶ ಬಳಸಿಯೇ ಅಭಿವೃದ್ಧಿ ಪಡಿಸಬೇಕು ಮತ್ತು ಸೋರ್ಸ್‌ಕೋಡನ್ನು ಸಾರ್ವಜನಿಕಗೊಳಿಸಬೇಕು.

ಉ) ಎಲ್ಲಾ ಡಿಜಿಟಲ್ ಸೇವೆಗಳನ್ನು ಸಾರ್ವಜನಿಕ ವಲಯದ ಘಟಕಗಳು ಮಾತ್ರವೇ ಅಭಿವೃದ್ಧಿ ಪಡಿಸಬೇಕು.

ಊ) ಇ-ಸೇವೆಗಳ ಸ್ವರೂಪವನ್ನು ಪ್ರಮಾಣೀಕರಿಸಲು ಒಂದು ನೀತಿಯನ್ನು ತರಬೇಕು, ಪ್ರಾಥಮಿಕವಾಗಿ ಸ್ಥಳೀಯಕರಣಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲದೆ ದೈಹಿಕ ಅಸಮರ್ಥತೆಗಳನ್ನು ಸಹ ಪರಿಗಣಿಸುವುದು ಸೇರಿದಂತೆ ಲಭ್ಯತೆಗೆ ಸಂಬಂಧಿಸಿದ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುವ ಒಂದು ನೀತಿಯನ್ನು ತರಬೇಕು.

ಎ) ವೈಯಕ್ತಿಕ ದತ್ತಾಂಶ ಮತ್ತು ಖಾಸಗಿತ್ವವನ್ನು ಒದಗಿಸುವುದು ಮತ್ತು ಪ್ರತಿಯೊಬ್ಬ ನಾಗರಿಕರು ಅದರ ಬಗ್ಗೆ ಅರಿವು ಹೊಂದಿರುವಂತೆ ಮಾಡುವುದು ಎಲ್ಲಕ್ಕಿಂತ ಮುಖ್ಯ.



ಸಿಓಪಿ-26 ಮತ್ತು ಕರ್ನಾಟಕಕ್ಕೆ ಜಾಗತಿಕ ತಾಪಮಾನದ ಪರಿಣಾಮ

'ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ಚೌಕಟ್ಟು ಸಮಾವೇಶ' (ಯುನೈಟೆಡ್ ನೇಷನ್ಸ್ ಫ್ರೇಮ್‌ವರ್ಕ್ ಕನ್ವೆನ್ಷನ್ ಆನ್ ಕ್ಲೈಮೇಟ್ ಚೇಂಜ್ -UNFCC), ಅಂದರೆ, ಮಾನವ ನಿರ್ಮಿತ ಜಾಗತಿಕ ತಾಪಮಾನ ಏರಿಕೆಯ ಬಿಕ್ಕಟ್ಟು ಮತ್ತು ಪರಿಣಾಮವಾಗಿ ಹವಾಮಾನ ಬದಲಾವಣೆಯನ್ನು ಪರಿಹರಿಸುವಲ್ಲಿ ಬಹುಪಕ್ಷೀಯ ಮಾತುಕತೆಗಳಿಗೆ ಜವಾಬ್ದಾರರಾಗಿರುವ ವಿಶ್ವಸಂಸ್ಥೆಯ ಅಂಗ ಸಂಸ್ಥೆ ಗ್ಲಾಸ್ಗೋದಲ್ಲಿ ತನ್ನ 26 ನೇ ಪಕ್ಷಗಳ ಸಮ್ಮೇಳನ (COP-26) ವನ್ನು ನವೆಂಬರ್ 1 ರಿಂದ 12, 2021 ರವರೆಗೆ ನಡೆಸಿತು. ಉತ್ತರದ ಶ್ರೀಮಂತ ರಾಷ್ಟ್ರಗಳು ಈ ಸಮ್ಮೇಳನದಲ್ಲಿ ಸಹ ಹವಾಮಾನ ಬದಲಾವಣೆಯನ್ನು ಎದುರಿಸುವ ವಿಧಾನಗಳನ್ನು ನಿರ್ಧರಿಸುವಲ್ಲಿ ಸಮತ್ವ ಮತ್ತು ನ್ಯಾಯದ ತತ್ವಗಳನ್ನು ದುರ್ಬಲಗೊಳಿಸುವಲ್ಲಿ ತಮ್ಮ ಪ್ರಯತ್ನಗಳನ್ನು ಮುಂದುವರೆಸಿದವು. ಇದು ಇನ್ನಷ್ಟು ದುರದೃಷ್ಟಕರವಾಗಿದೆ. ಏಕೆಂದರೆ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಸಮತ್ವ ಮತ್ತು ಭಿನ್ನೀಕೃತ ಪರಿಗಣನೆಯ ತತ್ವಗಳು ಅಭಿವೃದ್ಧಿಶೀಲ ರಾಷ್ಟ್ರಗಳು ಅನೇಕ ಅಭಿವೃದ್ಧಿ ಸವಾಲುಗಳನ್ನು ಎದುರಿಸುತ್ತವೆ ಎಂಬುದನ್ನು ಗುರುತಿಸುವ ಆಧಾರದ ಮೇಲೆ UNFCC ಯಲ್ಲಿಯೇ ಪ್ರತಿಷ್ಠಾಪಿಸಲ್ಪಟ್ಟವೆ.

COP-26 ನಲ್ಲಿ, ಭಾರತದ ಪ್ರಧಾನ ಮಂತ್ರಿ ಭಾರತದಲ್ಲಿ ನವೀಕರಿಸಬಹುದಾದ ಇಂಧನ ನಿಯೋಜನೆಗಾಗಿ ಮಹತ್ವಾಕಾಂಕ್ಷೆಯ ಗುರಿಗಳನ್ನು ಘೋಷಿಸಿದರು. ಅನೇಕ ವಿಶ್ವ ನಾಯಕರು COP-26ಗೆ ಹಾಜರಾಗದಿರಲು ನಿರ್ಧರಿಸಿರುವಾಗ 26 ರ ಆರಂಭದಲ್ಲಿ ಭಾರತೀಯ ಪ್ರಧಾನ ಮಂತ್ರಿಯವರ ವೈಯಕ್ತಿಕ ಉಪಸ್ಥಿತಿ ಮತ್ತು ಘೋಷಣೆಯು COP-26ನ ಮೊದಲು ಮತ್ತು COPನಲ್ಲಿನ ಪ್ರದರ್ಶನಕ್ಕೆ ನೇತೃತ್ವ ನೀಡುತ್ತಿರುವ ಯು.ಕೆ. ಮತ್ತು ಯು.ಎಸ್. ಜೊತೆಗೆ ಸೌಹಾರ್ದವನ್ನು ತೋರಿಸುವ ಒಂದು ಪ್ರಕಟ ಪ್ರದರ್ಶನವಾಗಿದೆ. ಇದರ ಹೊರತಾಗಿಯೂ, COP-26 ರ ಅಂತಿಮ ಗಂಟೆಗಳಲ್ಲಿ ಅದೇ ಯು.ಕೆ.(ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದವರು) ದೇಶೀಯವಾಗಿ ಲಭ್ಯವಿರುವ ಏಕೈಕ ಪಳೆಯುಳಿಕೆ ಇಂಧನ, ಅಂದರೆ ಕಲ್ಲಿದ್ದಲನ್ನು ಬಳಸುವ ತನ್ನ ಹಕ್ಕನ್ನು ರಕ್ಷಿಸಲು ಪ್ರಯತ್ನಿಸಿದ್ದಕ್ಕಾಗಿ ಭಾರತವನ್ನು ಪ್ರತ್ಯೇಕವಾಗಿ ಹೆಸರಿಸಿ ಛೀಮಾರಿ ಹಾಕಿತು.

ಜಾಗತಿಕ ತಾಪಮಾನವನ್ನು ತಗ್ಗಿಸುವ ಸಮಸ್ಯೆಯ ಸಾರಸತ್ವ ಅಂಶವೆಂದರೆ ಎಲ್ಲಾ ಪಳೆಯುಳಿಕೆ ಇಂಧನಗಳ ಬಳಕೆಯನ್ನು ನಿಲ್ಲಿಸುವುದು. ಆದರೆ ಇದನ್ನು ಮಾಡುವುದು ಸುಲಭವಲ್ಲ ಮತ್ತು ಇದಕ್ಕೆ ಸಂಬಂಧಿಸಿದ ಗಮನಾರ್ಹ ವೆಚ್ಚದ ಪ್ರಶ್ನೆಯಿದೆ. ಶ್ರೀಮಂತ ರಾಷ್ಟ್ರಗಳಿಗಿಂತ ಭಿನ್ನವಾಗಿ, ಭಾರತವು ತನ್ನ ಬಹುಪಾಲು ಜನರಿಗೆ ವಸತಿ, ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯ, ಉದ್ಯೋಗ, ಮತ್ತು ನೀರು, ನೈರ್ಮಲ್ಯ ಮತ್ತು ಇಂಧನದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಗತ್ಯವಿದೆ. ಇಂಧನದ ಸ್ಥಾಪಿತ ರೂಪಗಳು, ಅಂದರೆ ಪಳೆಯುಳಿಕೆ ಇಂಧನಗಳು ಇಲ್ಲದೆ ಇದನ್ನು ಮಾಡುವುದು, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಸವಾಲಿನದಾಗಿದೆ, ಇದಕ್ಕೆ ಶ್ರೀಮಂತ ರಾಷ್ಟ್ರಗಳಿಂದ ಬಡವರಿಗೆ ಹಣಕಾಸಿನ ಬೆಂಬಲ ಮತ್ತು ತಂತ್ರಜ್ಞಾನ ವರ್ಗಾವಣೆಯ ಅಗತ್ಯವಿರುತ್ತದೆ.

ಶ್ರೀಮಂತ ರಾಷ್ಟ್ರಗಳು ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಹಗುರಗೊಳಿಸಲು ರಿಯಾಯಿತಿಯಿಲ್ಲದ ಸಾಲಗಳು ಮತ್ತು ಅನುದಾನಗಳ ಬದಲಿಗೆ ಖಾಸಗಿ ಇಕ್ವಿಟಿಯ ರೂಪದಲ್ಲಿ ಮಾಡಬೇಕೆಂದೇ ಹೆಚ್ಚೆಚ್ಚಾಗಿ ಒತ್ತಾಯಿಸುತ್ತಿವೆ. ಆದ್ದರಿಂದ ಶ್ರೀಮಂತ ರಾಷ್ಟ್ರಗಳು ದಕ್ಷಿಣದ ದೇಶಗಳ ಮೇಲೆ ಹಸಿರು ಸಾಲವನ್ನು ಹೇರುವ ಹಸಿರು ಸಾಮ್ರಾಜ್ಯಶಾಹಿಯ ಹೊಸ ಯುಗವನ್ನು ನಾವು ನೋಡುತ್ತಿದ್ದೇವೆ. ತಮ್ಮ ಪ್ರಾದೇಶಿಕ ಹವಾಮಾನ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಎದುರಿಸುತ್ತಿರುವ ಮತ್ತು ಹವಾಮಾನ ಬದಲಾವಣೆಯ ಪ್ರೇರಿತವಾದ ನೈಸರ್ಗಿಕ ವಿಕೋಪಗಳಿಂದ ಉಂಟಾದ ನಷ್ಟದಿಂದ ಚೇತರಿಸಿಕೊಳ್ಳುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳ ಹೊಂದಾಣಿಕೆಯ ಪ್ರಯತ್ನಗಳಿಗೆ ಧನಸಹಾಯ ನೀಡಲು ಕೂಡ, ಅಭಿವೃದ್ಧಿ ಹೊಂದಿದ ದೇಶಗಳು, ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಗಳಿಗೆ ಪ್ರಾಥಮಿಕವಾಗಿ ತಾವೇ ಕಾರಣವಾಗಿದ್ದರೂ, ಸಿದ್ಧರಿಲ್ಲ.

ಈ ಅಂತರಾಷ್ಟ್ರೀಯ ಪರಿಸ್ಥಿತಿಯು ಹವಾಮಾನ ಬದಲಾವಣೆಯ ಸಮಸ್ಯೆಗಳನ್ನು ತಗ್ಗಿಸುವ ಮತ್ತು ಹೊಂದಾಣಿಕೆಯ ವಿಷಯದಲ್ಲಿ ಭಾರತದೊಳಗಿನ ರಾಜ್ಯಗಳು ಮತ್ತು ಪ್ರದೇಶಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಅಂತಾರಾಷ್ಟ್ರೀಯವಾಗಿ ಸಂವಹನ ಮಾಡಿರುವ ಗುರಿಗಳನ್ನು ಪೂರೈಸಲು ಕೇಂದ್ರ ಸರ್ಕಾರವು ನವೀಕರಿಸಬಹುದಾದ ಇಂಧನ (ಆರ್.ಇ) ಆಧಾರಿತ ವಿದ್ಯುತ್ ಪೂರೈಕೆಗಾಗಿ ದೇಶೀಯ ಗುರಿಗಳನ್ನು ನಿಗದಿಪಡಿಸಿದೆ. ಅದು (ಆರ್.ಇ)–ಆಧಾರಿತ ವಿದ್ಯುತ್ ಸ್ಥಾವರಗಳ ನಿಯೋಜನೆಯನ್ನು ಪ್ರೋತ್ಸಾಹಿಸುವ ಸಬ್ಸಿಡಿ ಮತ್ತು ಪ್ರೋತ್ಸಾಹಕ ನೀತಿಗಳ ಸರಣಿಯನ್ನು ಸಹ ಜಾರಿಗೊಳಿಸಿದೆ. ಇದರ ಪರಿಣಾಮವಾಗಿ, ದೇಶದಲ್ಲಿ ಆರ್.ಇ ನಿಯೋಜನೆಯು ವೇಗವಾಗಿ ಹೆಚ್ಚಿದೆ ಮತ್ತು ಅದರಲ್ಲಿ ಕರ್ನಾಟಕವು ಅದೇ ಅತಿ ಹೆಚ್ಚು ಸ್ಥಾಪಿತ ಸಾಮರ್ಥ್ಯವನ್ನು

ಪುಟ 12 ನೋಡಿ

ಕಡಿಮೆ ಆದಾಯಗಳಿಂದ ಸಂತ್ರಸ್ತ ರೈತರಿಗೆ ಬೆಂಬಲ ಬೆಲೆ

ಕಳೆದ ಮೂರು ದಶಕಗಳ ನವ ಉದಾರವಾದಿ ನೀತಿಯ ಆಳ್ವಿಕೆಯಲ್ಲಿ ಭಾರತದಲ್ಲಿ ಕೃಷಿ ಕ್ಷೇತ್ರವು ತೀವ್ರ ಸಂಕಷ್ಟವನ್ನು ಕಂಡಿದೆ. ಕೃಷಿಯಲ್ಲಿ ಹೆಚ್ಚುತ್ತಿರುವ ವೆಚ್ಚ ಮತ್ತು ಕಡಿಮೆ ಪ್ರತಿಫಲವೇ ಈ ಸಂಕಟವನ್ನು ಉಂಟುಮಾಡುತ್ತಿರುವ ಸಂಗತಿ.. ಕರ್ನಾಟಕದಲ್ಲಿಯೂ ಇದೇ ರೀತಿಯ ಪರಿಸ್ಥಿತಿಯನ್ನು ನೋಡಬಹುದು.

2019 ರಲ್ಲಿ 'ಗ್ರಾಮೀಣ ಭಾರತದಲ್ಲಿನ ಕೃಷಿ ಕುಟುಂಬಗಳು ಮತ್ತು ಭೂಮಿ ಮತ್ತು ಜಾನುವಾರು ಹಿಡುವಳಿಗಳ ಪರಿಸ್ಥಿತಿಯ ಮಾಪನ' ಸಮೀಕ್ಷೆಯ ಇತ್ತೀಚೆಗೆ ಬಿಡುಗಡೆಯಾದ ಫಲಿತಾಂಶಗಳು, ಕಡಿಮೆ ಆದಾಯ ಉತ್ಪಾದನೆಯ ಬಿಕ್ಕಟ್ಟು ವಿಶೇಷವಾಗಿ ಕರ್ನಾಟಕದ ಅಂಚಿನಲ್ಲಿರುವ ಮತ್ತು ಸಣ್ಣ ರೈತರಿಗೆ ಆತಂಕಕಾರಿಯಾಗಿದೆ ಎಂದು ತೋರಿಸುತ್ತದೆ.

2018–19ರಲ್ಲಿ ಕರ್ನಾಟಕದಲ್ಲಿ ಕೃಷಿ ಕುಟುಂಬಗಳ ಸಂಖ್ಯೆ 42.5 ಲಕ್ಷ ಎಂದು ಸಮೀಕ್ಷೆ ಅಂದಾಜಿಸಿದೆ. ನಿಜ ಬೆಲೆಗಳಲ್ಲಿ (2012–13 ಬೆಲೆಗಳು), ಬೆಳೆಗಳ ಸಾಗುವಳಿಯಿಂದ ಮಾಸಿಕ ಸರಾಸರಿ ಆದಾಯವು 2012–13 ರಲ್ಲಿ ರೂ 4930 ಮತ್ತು 2018–19 ರಲ್ಲಿ ರೂ 4968 ಆಗಿತ್ತು. ಬೇರೆ ರೀತಿಯಲ್ಲಿ ಹೇಳುವುದಾದರೆ, 2012–13 ಮತ್ತು 2018–19 ರ ನಡುವೆ ಬೆಳೆ ಆದಾಯದಲ್ಲಿ ಯಾವುದೇ ಗಣನೀಯ ಏರಿಕೆಯಾಗಿಲ್ಲ ಎಂದು ಸಮೀಕ್ಷೆ ತೋರಿಸಿದೆ.

ಬೆಳೆಗಳ ಆದಾಯದಲ್ಲಿನ ಸ್ಥಗಿತತೆಯು 33 ಲಕ್ಷ ಅಂಚಿನಲ್ಲಿರುವ ಮತ್ತು ಸಣ್ಣ ಕುಟುಂಬಗಳನ್ನು ಅಂದರೆ 2 ಹೆಕ್ಟೇರ್‌ಗಿಂತ ಕಡಿಮೆ ಕೃಷಿ ಮಾಡುವ ಕುಟುಂಬಗಳನ್ನು ತೀವ್ರವಾಗಿ ಬಾಧಿಸಿದೆ. ಇದು ಕೃಷಿ ಕುಟುಂಬಗಳ ಶೇಕಡಾ 78 ರಷ್ಟು ಆಗುತ್ತದೆ. ರಾಜ್ಯದ ಬಹುಪಾಲು ಸಣ್ಣ ಮತ್ತು ಅಂಚಿನಲ್ಲಿರುವ ಸಾಗುವಳಿದಾರರ ಆದಾಯ ಸಂಕಷ್ಟಕ್ಕೆ ಬೆಲೆ ಮತ್ತು ಆದಾಯ ಬೆಂಬಲ ಕ್ರಮಗಳು ಲಭ್ಯವಾಗದಿರುವುದು ಒಂದು ಪ್ರಮುಖ ಕಾರಣವಾಗಿದೆ.

ಕನಿಷ್ಠ ಬೆಂಬಲ ಬೆಲೆಗಳ ಬಗ್ಗೆ ರೈತರಲ್ಲಿ ತೀವ್ರ ಅರಿವಿನ ಕೊರತೆಯಿದೆ ಮತ್ತು ಅದರ ಪರಿಭಾಷೆಯಲ್ಲಿ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಅರಿತುಕೊಳ್ಳಲು ಕೆಲವೇ ವರ್ಗದ ರೈತರು ಸಮರ್ಥರಾಗಿದ್ದಾರೆ. 2018–19ರಲ್ಲಿ ಕರ್ನಾಟಕದಲ್ಲಿ ಭತ್ತವನ್ನು ಬೆಳೆದ ರೈತ ಕುಟುಂಬಗಳಲ್ಲಿ, ಮುಂಗಾರು ಋತುವಿನಲ್ಲಿ (ಜುಲೈ–ಡಿಸೆಂಬರ್ 2018) ಶೇಕಡಾ 9 ಮತ್ತು ಹಿಂಗಾರು ಋತುವಿನಲ್ಲಿ (ಜನವರಿಯಿಂದ ಜೂನ್ 2019) ಶೇಕಡಾ 13 ಕುಟುಂಬಗಳಿಗೆ ಮಾತ್ರ ಎಂಎಸ್‌ಪಿ ಬಗ್ಗೆ ತಿಳಿದಿತ್ತು. ಜೋಳ ಬೆಳೆಯುವವರಲ್ಲಿ ಇದು 23 ಮತ್ತು 10 ಪ್ರತಿಶತ; ಮೆಕ್ಕೆಜೋಳದಲ್ಲಿ ಶೇ.22 ಮತ್ತು 17; ರಾಗಿಯಲ್ಲಿ ಶೇಕಡಾ 2 (ಹಿಂಗಾರು ಋತುವಿನಲ್ಲಿ ಮಾತ್ರ); ಮತ್ತು ತೆಂಗಿನಕಾಯಿಯಲ್ಲಿ 3 ಶೇ. ಮಾತ್ರ.

ಧಾನ್ಯ ಸಂಗ್ರಹಣೆ ಖರೀದಿ ಏಜೆನ್ಸಿಗಳಿಗೆ ಮಾರಾಟ ಮಾಡಿದ ರೈತ ಕುಟುಂಬಗಳ ಸಂಖ್ಯೆ ಇನ್ನೂ ಕಡಿಮೆಯಾಗಿದೆ: ಭತ್ತವನ್ನು ಬೆಳೆದ ರೈತರಲ್ಲಿ ಕೇವಲ 1 ಪ್ರತಿಶತದಷ್ಟು ರೈತರು ಖರೀದಿ ಏಜೆನ್ಸಿಗಳಿಗೆ ಮಾರಾಟ ಮಾಡಿದರು. ಇದು ಜೋಳ ಬೆಳೆಯುವವರಲ್ಲಿ ಶೇಕಡಾ 6 ಆಗಿತ್ತು; ಮೆಕ್ಕೆಜೋಳದಲ್ಲಿ ಶೇ.6; ಹಾಗೂ ರಾಗಿಯಲ್ಲಿ ಸುಮಾರು ಶೇ.2.

ಬಹುಪಾಲು ರೈತರಿಗೆ ಎಂಎಸ್‌ಪಿ ಕಾರ್ಯಾಚರಣೆಗಳ ಬಗ್ಗೆ ತಿಳಿದಿಲ್ಲ ಎಂದು ಈ ಅಂಕಿಅಂಶಗಳು ತೋರಿಸುತ್ತವೆ. ಎಂಎಸ್‌ಪಿ ಮತ್ತು ಖರೀದಿ ಏಜೆನ್ಸಿಗಳ ಬಗ್ಗೆ ಅರಿವಿದ್ದ ರೈತರಲ್ಲಿಯೂ ಬೆರಳೆಣಿಕೆಯಷ್ಟು ಮಾತ್ರ ಈ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಹೆಚ್ಚಿನ ರೈತ ಕುಟುಂಬಗಳು ಖರೀದಿ ಏಜೆನ್ಸಿಗಳನ್ನು ತಲುಪಲು ಸಾಧ್ಯವಾಗದ ಕಾರಣ ಸ್ಥಳೀಯ ಮಾರುಕಟ್ಟೆಗಳನ್ನು ಅವಲಂಬಿಸಲೇ ಬೇಕಾಗುತ್ತದೆ. ಖರೀದಿ ಏಜೆನ್ಸಿಗಳನ್ನು ತಲುಪುವ ಅವಕಾಶ ಮತ್ತು ಮಾರಾಟದ ಕೊರತೆಯಿಂದಾಗಿ ಕರ್ನಾಟಕದ ರೈತರಿಗೆ ಉತ್ತಮ ಬೆಲೆಗಳನ್ನು ಪಡೆಯುವ ಸಾಧನವಾಗಿ ಎಂಎಸ್‌ಪಿಯನ್ನು ಜಾರಿಗೊಳಿಸಲು ಮತ್ತು ಖಚಿತಪಡಿಸಿಕೊಳ್ಳಲು ಆಡಳಿತ ಮಂಡಳಿಗಳು ಕಳೆದ ದಶಕದಲ್ಲಿ ವಿಫಲವಾಗಿವೆ ಎಂದು ಸೂಚಿಸುತ್ತದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನವು ಈ ಅಂಶಗಳನ್ನು ಜಾರಿ ಮಾಡಲು ಆಗ್ರಹಿಸುತ್ತದೆ:

1. ಪ್ರಸ್ತುತ ಕೃಷಿ ಸಂಕಷ್ಟವನ್ನು ಬಹುವಾಗಿ ಎದುರಿಸುತ್ತಿರುವ ರೈತರಿಗೆ ಸಾಕಷ್ಟು ಆದಾಯ ಬೆಂಬಲ ಕ್ರಮಗಳನ್ನು ತಕ್ಷಣವೇ ಒದಗಿಸಬೇಕು;
2. ಎಲ್ಲಾ ಪ್ರಮುಖ ಬೆಳೆಗಳಿಗೆ ಶಿಫಾರಸು ಮಾಡಲಾದ ಮಟ್ಟದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ರಾಜ್ಯದಲ್ಲಿ ರೈತರ ಹಕ್ಕಾಗಿ ಶಾಸನಬದ್ಧಗೊಳಿಸಬೇಕು; ಮತ್ತು
3. ಗರಿಷ್ಠ ಸಂಖ್ಯೆಯ ರೈತರನ್ನು ಒಳಗೊಳ್ಳಲು ಹೆಚ್ಚಿನ ಪ್ರದೇಶಗಳಲ್ಲಿ ಖರೀದಿ ಕೇಂದ್ರಗಳ ರಚನೆಯಾಗುವಂತೆ ಮತ್ತು ಈ ಕೇಂದ್ರಗಳು ಪ್ರಮುಖ ಖರೀದಿ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವಂತೆ ರಾಜ್ಯ ಸರ್ಕಾರ ಖಚಿತಪಡಿಸಬೇಕು.

ಬಜೆಟ್ ನಲ್ಲಿ ಆರ್ಥಿಕ ಪುನಶ್ಚೇತನಕ್ಕೆ ನಿರ್ಮಲಾ ಸೀತಾರಾಂ..........

ಪುಟ 6 ರಿಂದ

ಪರೀಕ್ಷಾ ಕ್ರಮದಿಂದ ರಾಜ್ಯಗಳಲ್ಲಿನ ದೇಶಿಯ ಭಾಷೆಗಳನ್ನು ಕಲಿಯುತ್ತಿರುವ ಮಕ್ಕಳಿಗೆ ಅನ್ಯಾಯ ಮಾಡಲಾಗುತ್ತಿದೆ. ನಮ್ಮ ಸಂವಿಧಾನದಲ್ಲಿ ಕೃಷಿ ರಾಜ್ಯ ಪಟ್ಟಿಯಲ್ಲಿರುವ ಒಂದು ಪ್ರಕಾರ್ಯವಾಗಿದೆ. ಆದರೆ 2020ರಲ್ಲಿ ಮೂರು ಕೃಷಿ ಕಾಯಿದೆ ತಂದು ಒಕ್ಕೂಟ ತತ್ವವನ್ನು ಉಲ್ಲಂಘನೆ ಮಾಡುತ್ತಿದೆ. (ಈ ಮೂರು ಕೃಷಿ ಕಾಯಿದೆಗಳು ಈಗ ರದ್ದಾಗಿವೆ ಎಂಬುದು ಬೇರೆ ವಿಷಯ). ಸಂವಿಧಾನಾತ್ಮಕ ಸಂಸ್ಥೆಯಾದ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಶಿಸ್ತಿನಿಂದ ಇದು ಪಾಲಿಸುತ್ತಿಲ್ಲ. ಉದಾ: ಆಯೋಗ ಹಮ್ಮಿಕೊಂಡ ಹೊಸ ಸೂತ್ರದ ಪ್ರಕಾರ ಕರ್ನಾಟಕಕ್ಕೆ ಹಣಕಾಸು ವರ್ಗಾವಣೆಯಲ್ಲಿ ಕಡಿತವಾಗಿರುವುದನ್ನು ಗಮನಿಸಿ ಆಯೋಗ 2020–21ನೆಯ ಸಾಲಿಗೆ ಕರ್ನಾಟಕಕ್ಕೆ ರೂ. 5495 ಕೋಟಿ ವಿಶೇಷ ಅನುದಾನವನ್ನು ಶಿಫಾರಸ್ಸು ಮಾಡಿತ್ತು. ಆದರೆ ಇದನ್ನು ರಾಜ್ಯವನ್ನು ಪ್ರತಿನಿಧಿಸುವ ವಿತ್ತಮಂತ್ರಿ ತಿರಸ್ಕರಿಸಿದ್ದಾರೆ. ಜಿಎಸ್‌ಟಿ ಪರಿಹಾರ ಮೊತ್ತವನ್ನು ನೀಡುವುದರಲ್ಲಿಯೂ ರಾಜ್ಯಗಳಿಗೆ ಒಕ್ಕೂಟ ಸರ್ಕಾರ ಅನ್ಯಾಯಮಾಡುತ್ತಿದೆ (ಈ ಜಿಎಸ್‌ಟಿ ಪರಿಹಾರ ನಿಯಮವು 2022ರ ಜೂನ್‌ನಲ್ಲಿ ಕೊನೆಗೊಳ್ಳುತ್ತದೆ. ಇದನ್ನು ಮತ್ತೆ ಐದು ವರ್ಷ ಮುಂದುವರಿಸಬೇಕೆಂದು ರಾಜ್ಯಗಳು ಒತ್ತಾಯಿಸುತ್ತವೆ. ಈ ಬಜೆಟ್ಟಿನಲ್ಲಿ ಇಂತಹ ಆಶ್ವಾಸನೆ ನೀಡಬೇಕಾದುದು ಒಕ್ಕೂಟ ಸರ್ಕಾರ ಜವಾಬ್ದಾರಿ.

ಅನೇಕ ದಶಕಗಳಿಂದ ದಕ್ಷಿಣ ಭಾರತದ ರಾಜ್ಯಗಳು ದೇಶದ ಜಿಡಿಪಿಗೆ ಅಪಾರ ಕಾಣಿಕೆ ನೀಡುತ್ತಿವೆ. ಆದರೆ ಈ ರಾಜ್ಯಗಳ ಬಗ್ಗೆ ಒಕ್ಕೂಟ ಸರ್ಕಾರವು ಮಲತಾಯಿ ಧೋರಣೆ ತಳೆದಿದೆ. ಉದಾ. ದಕ್ಷಿಣ ಭಾರತದ ಐದು ರಾಜ್ಯಗಳು ದೇಶದ ಜನಸಂಖ್ಯೆಯಲ್ಲಿ ಶೇ. 20.74 ಪಾಲು ಪಡೆದಿದ್ದರೆ ಜಿಡಿಪಿಗೆ ಅವು ನೀಡುತ್ತಿರುವ ಕಾಣಿಕೆ ಶೇ. 30.24. ಆದರೆ ಉತ್ತರ ಭಾರತದ ಬಿಹಾರ, ಜಾರ್ಖಂಡ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ ರಾಜ್ಯಗಳು ದೇಶದ ಜನಸಂಖ್ಯೆಯಲ್ಲಿ ಶೇ. 47.87 ಪಾಲು ಪಡೆದಿದ್ದರೆ ಜಿಡಿಪಿಗೆ ಅವುಗಳ ಕಾಣಿಕೆ ಕೇವಲ ಶೇ. 22.54. ಒಕ್ಕೂಟ ವ್ಯವಸ್ಥೆಯ ಮೂಲ ನಿಯಮಗಳನ್ನು ಉಲ್ಲಂಘಿಸಿ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಮಾಡಿದರೆ ಅದು ದೇಶದ ಜಿಡಿಪಿ ಬೆಳವಣಿಗೆಗೆ ಧಕ್ಕೆಯುಂಟು ಮಾಡುತ್ತದೆ. ಕಳೆದ ಆರೇಳು ವರ್ಷಗಳಿಂದ ನಡೆಸಿರುವ ರಾಜ್ಯಗಳ ಸಂವಿಧಾನಾತ್ಮಕ ಹಕ್ಕುಗಳ ಹರಣವನ್ನು ನಿಲ್ಲಿಸುವ ಬಗ್ಗೆ 2022–23ನೆಯ ಸಾಲಿನ ಬಜೆಟ್ಟಿನಲ್ಲಿ ಘೋಷಣೆ ಮಾಡಬೇಕು.

7. ಸೆಸ್ ಮತ್ತು ಸರ್ ಚಾರ್ಜ್‌ಗಳಲ್ಲಿ ರಾಜ್ಯಗಳಿಗೆ ಪಾಲು

ಒಕ್ಕೂಟ ಸರ್ಕಾರವು ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ವಿಧಿಸುವ ಮೂಲಕ ಅಪಾರ ರೆವಿನ್ಯೂ ಗಳಿಸಿಕೊಳ್ಳುತ್ತಿದೆ. ಆದರೆ ಸಂವಿಧಾನದ ಪರಿಚ್ಛೇದ 270ರ ಪ್ರಕಾರ ಇದನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಾಗಿಲ್ಲ. ಇದು ರಾಜ್ಯಗಳಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ಒಕ್ಕೂಟ ಸರ್ಕಾರವು 2011–12ರಲ್ಲಿ ಇವುಗಳ ಮೂಲಕ ಗಳಿಸಿದ ರೆವಿನ್ಯೂ ರೂ.49,628 ಕೋಟಿ. ಆದರೆ 2020–21ರಲ್ಲಿ ಇವುಗಳ ಮೂಲಕ ಗಳಿಸಿದ ರೆವಿನ್ಯೂ ರೂ. 3,74,471 ಕೋಟಿ. ಹಣಕಾಸು ಆಯೋಗದ ಸೂತ್ರದ ಪ್ರಕಾರ (ಶೇ.41) ರಾಜ್ಯಗಳಿಗೆ ಹಂಚಿದರೆ ಅವು ಒಟ್ಟು ರೂ. 1,53,533 ಕೋಟಿ ರೆವಿನ್ಯೂ ಪಡೆಯಬಹುದು. ಆದ್ದರಿಂದ 2022–23ನೆಯ ಸಾಲಿನ ಬಜೆಟ್ಟಿನಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳಿಂದ ಬರುವ ರೆವಿನ್ಯೂ ಹಂಚಬಹುದಾದ ತೆರಿಗೆ ರಾಶಿಯಲ್ಲಿ ವಿಲೀನಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಒಟ್ಟಾರೆ 2022–23ರ ಬಜೆಟ್ಟಿನಲ್ಲಿ ರಾಜ್ಯಗಳಿಗೆ ಉಂಟಾಗುತ್ತಿರುವ ಅನ್ಯಾಯವನ್ನು ಹಾಗೂ ಒಕ್ಕೂಟ ತತ್ವದ ಉಲ್ಲಂಘನೆಯನ್ನು ಸರಿಪಡಿಸುವ ಹಣಕಾಸು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕ ವೆಚ್ಚವನ್ನು ತೀವ್ರ ಪ್ರಮಾಣದಲ್ಲಿ ಹೆಚ್ಚಿಸಬೇಕು. ನೇರ ತೆರಿಗೆಗಳ ದರಗಳನ್ನು ಏರಿಕೆ ಮಾಡಬೇಕು ಮತ್ತು ಜಿಎಸ್‌ಟಿ ದರಗಳನ್ನು ಶೇ. 5 ಕ್ಕಿಂತ ಹೆಚ್ಚು ಮಾಡಬಾರದು. ಪೆಟ್ರೋಲ್ ಮತ್ತು ಡೀಸಲ್ ಮೇಲಿನ ತೆರಿಗೆಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ಸೇರಿಸಬೇಕು. ಸೆಸ್ ಮತ್ತು ಸರ್ ಚಾರ್ಜ್‌ಗಳನ್ನು ಹಂಚಿಕೊಳ್ಳುವ ತೆರಿಗೆ ರಾಶಿಯ ಭಾಗ ಮಾಡಬೇಕು. ನಮಗೆ ಇಂದು 'ಉಳ್ಳವರ ಬಜೆಟ್ಟ'ಗೆ ಪ್ರತಿಯಾಗಿ 'ಉಳಿದವರ ಬಜೆಟ್ಟು' ಬೇಕಾಗಿದೆ.

ವಿಜ್ಞಾನ ತಂತ್ರಜ್ಞಾನ ಮತ್ತು ಆವಿಷ್ಕಾರ ನೀತಿ 2020 ಕುರಿತ ನಿರ್ಣಯ

ವಿಜ್ಞಾನ ತಂತ್ರಜ್ಞಾನ ಮತ್ತು ಆವಿಷ್ಕಾರ ನೀತಿ (ಎಸ್.ಟಿ.ಐ.ಪಿ) 2020 ಕರಡನ್ನು ಕೇಂದ್ರ ಸರ್ಕಾರವು 2020 ರ ಅಂತ್ಯದ ವೇಳೆಗೆ ಪ್ರಕಟಿಸಿದೆ. ಇತರ ಅನೇಕ ಜನವಿರೋಧಿ ವಿಜ್ಞಾನ ವಿರೋಧಿ ನೀತಿಗಳಂತೆ, ಈ ನೀತಿಯನ್ನು ಮುಂದೊತ್ತಲು ಕೇಂದ್ರ ಸರ್ಕಾರವು ಸಾಂಕ್ರಾಮಿಕದ ಗಂಭೀರ ಸಮಯವನ್ನು ಬಳಸಿಕೊಂಡಿದೆ. ನಮ್ಮ ದೇಶದ ವಿಜ್ಞಾನ, ತಂತ್ರಜ್ಞಾನ ಮತ್ತು ನವೀನ ಶೋಧಗಳ ಭವಿಷ್ಯದ ಮೇಲೆ ದೀರ್ಘಾವಧಿಯ ಪ್ರಭಾವವನ್ನು ಉಂಟುಮಾಡುವ ಇಂತಹ ಪ್ರಮುಖ ನೀತಿಯನ್ನು ಪರಿಚಯಿಸುವ ಮೊದಲು ಸಾಕಷ್ಟು ಚರ್ಚೆಗಳು, ಅಧ್ಯಯನಗಳು ಅಥವಾ ಸಾರ್ವಜನಿಕ ಸಂವಾದಗಳನ್ನು ಮಾಡಲಾಗಿಲ್ಲ.

ಎಸ್.ಟಿ.ಐ.ಪಿ 2020 ಸಂಪೂರ್ಣವಾಗಿ ವಿಜ್ಞಾನ, ತಂತ್ರಜ್ಞಾನ ಮತ್ತು ನವೀನ ಶೋಧಗಳ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಹೂಡಿಕೆಯಿಂದ ಪ್ರತ್ಯೇಕವಾಗಿಸಲು ಉದ್ದೇಶಿಸಿದೆ ಮತ್ತು ಖಾಸಗಿ ವಲಯದ ಒಳಗೊಳ್ಳುವಿಕೆಗೆ ತೀವ್ರ ಪ್ರೋತ್ಸಾಹ ನೀಡುತ್ತದೆ. ಎಸ್.ಟಿ.ಐ.ಪಿ 2020 ಜೊತೆಗೆ, ಎಸ್.ಟಿ.ಐ.ಪಿ 2020 ಕಾರ್ಪೊರೇಟ್‌ಗಳು ತಮ್ಮ ಉದ್ಯಮದ ಅಗತ್ಯಕ್ಕೆ ಅನುಗುಣವಾಗಿ ಪಠ್ಯಕ್ರಮ ನಿರ್ವಚನೆಯನ್ನೂ ಒಳಗೊಂಡಂತೆ ಶಿಕ್ಷಣ ವಲಯದಲ್ಲಿ ತೊಡಗಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ ಇದು. ಅದಕ್ಕಿಂತ ಕಾರ್ಪೊರೇಟ್‌ಗಳು ಮತ್ತು ಉದ್ಯಮದ ಅವಶ್ಯಕತೆಗಳಿಗೆ ಸೂಕ್ತವಾದ ಹೆಚ್ಚು ಹೆಚ್ಚು ನುರಿತ ಕಾರ್ಮಿಕರನ್ನು ರೂಪಿಸುತ್ತದೆಯಷ್ಟೇ, ಅದೇ ವೇಳೆಗೆ ವಿಜ್ಞಾನ, ತಂತ್ರಜ್ಞಾನ ಮತ್ತು ನವೀನ ಶೋಧಗಳ ಬಗ್ಗೆ ವೈಜ್ಞಾನಿಕ ವಿಧಾನವನ್ನು ದುರ್ಬಲಗೊಳಿಸುವುದಕ್ಕೆ ಕಾರಣವಾಗುತ್ತದೆ. ಇದು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಈ ಸರ್ಕಾರದ ಮತ್ತೊಂದು ನೀತಿಯಾಗಿದೆ.

ಎಸ್.ಎಸ್.ಆರ್. (ವೈಜ್ಞಾನಿಕ ಸಾಮಾಜಿಕ ಜವಾಬ್ದಾರಿ) ಯ ಪರಿಚಯವು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ನಿರ್ಣಾಯಕವಾಗಿರುವ ಕ್ಷೇತ್ರಗಳಲ್ಲಿಯೂ ಸಂಶೋಧನಾ ಕಾರ್ಯಕ್ರಮಗಳಿಗೆ ರಾಷ್ಟ್ರೀಯ ನಿಧಿಯನ್ನು ಒದಗಿಸುವ ಪರಿಕಲ್ಪನೆಯನ್ನು ದುರ್ಬಲಗೊಳಿಸುತ್ತದೆ. ಈ ನೀತಿಯು ಸಂಶೋಧನೆಗೆ ಅಗತ್ಯವಿರುವ ಯಾವುದೇ ನಿರ್ದಿಷ್ಟ ಕ್ಷೇತ್ರಗಳನ್ನು ಸ್ಪಷ್ಟವಾಗಿ ಮುಂದಿಡುವುದಿಲ್ಲ. ಕೃಷಿ, ಆಹಾರ ಭದ್ರತೆ, ನೀರಿನ ಭದ್ರತೆಯಂತಹ ಕ್ಷೇತ್ರಗಳನ್ನು ಚರ್ಚಿಸಲಾಗಿಲ್ಲ ಅಥವಾ ವಿವರವಾಗಿ ಚರ್ಚಿಸಲಾಗಿಲ್ಲ. ಕೃಷಿ ಕ್ಷೇತ್ರಗಳಲ್ಲಿ ಸಂಶೋಧನೆಗೆ ಹೆಚ್ಚಿನ ಹೂಡಿಕೆ ಇಲ್ಲದೆ ಕರ್ಷಕ ರಾಷ್ಟ್ರದ ಭವಿಷ್ಯವೇನು?

ಸ್ವದೇಶಿಕರಣ ಮತ್ತು ಆತ್ಮನಿರ್ಭರ ಭಾರತ್ ಹೆಸರಿನಲ್ಲಿ ಇದು ಮನುಕುಲದ ವೈಜ್ಞಾನಿಕ ಪ್ರಗತಿಯನ್ನು ಸೀಮಿತಗೊಳಿಸುತ್ತಿದೆ. ಸ್ವದೇಶೀಕರಣ ಮತ್ತು ಆತ್ಮನಿರ್ಭರ ಭಾರತ ಎಂಬುದು ಉತ್ಪಾದನಾ ವ್ಯವಸ್ಥೆಗೆ ಹೆಚ್ಚು ಸಂಬಂಧಿಸಿರಬೇಕು, ಅದನ್ನು ಸಂಶೋಧನೆಗೆ ಜೋಡಿಸುವುದು ಭವಿಷ್ಯದ ಪೀಳಿಗೆಗೆ ವೈಜ್ಞಾನಿಕ ಪ್ರಗತಿಯನ್ನು ನಿರಾಕರಿಸಿದಂತಾಗುತ್ತದೆ.

ಆದ್ದರಿಂದ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ 23 ನೇ ಕರ್ನಾಟಕ ರಾಜ್ಯ ಸಮ್ಮೇಳನವು ಎಸ್.ಟಿ.ಐ.ಪಿ 2020 ಅನುಷ್ಠಾನವನ್ನು ತಕ್ಷಣವೇ ನಿಲ್ಲಿಸುವ ಅಗತ್ಯವಿದೆ ಎಂದು ನಿರ್ಣಯಿಸುತ್ತದೆ. ಈ ನೀತಿಯನ್ನು ಅಕೆಡೆಮಿಕ್ ತಜ್ಞರು, ವಿಜ್ಞಾನಿಗಳ ಸಮುದಾಯ ಮತ್ತು ಸಾರ್ವಜನಿಕರ ಹೆಚ್ಚಿನ ಭಾಗವಹಿಸುವಿಕೆಯೊಂದಿಗೆ ಪರಿಷ್ಕರಿಸಬೇಕು.



ಮೀನುಗಾರರು ಮತ್ತು ಮೀನು ಕಾರ್ಮಿಕರ ಸಮಸ್ಯೆಗಳ ಪರಿಶೀಲನೆ ಹಾಗೂ ಪರಿಹಾರಕ್ಕೆ ಒತ್ತಾಯ

ಮೀನುಗಾರರು ಕರಾವಳಿಯ 3 ಜಿಲ್ಲೆಗಳಲ್ಲಿ ಸುಮಾರು 3ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆ. ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ಮಂದಿ ಕಾರ್ಮಿಕರು ಮೀನು ಕೈಗಾರಿಕೆಯಲ್ಲಿ ಇದ್ದಾರೆ. ಸುಮಾರು 2 ವರ್ಷದಿಂದ ಸರಿಯಾಗಿ ಕೆಲಸವು ಇಲ್ಲ ಹಾಗೂ ಆದಾಯ ಇಲ್ಲದೇ ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಮೀನು ಕಾರ್ಮಿಕರಿಗೆ ಕೋವಿಡ್–19ರಿಂದಾಗಿ ಕೆಲಸವಿಲ್ಲದೆ ಹಾಗೂ ಆದಾಯವಿಲ್ಲದೆ ಜನರು ಕಂಗಾಲಾಗಿದ್ದಾರೆ. ಪರಿಹಾರಕ್ಕಾಗಿ ಸರಕಾರವನ್ನು ಒತ್ತಾಯಿಸಿದಾಗ 3ಸಾವಿರ ರೂಪಾಯಿ ಕೆಲವರಿಗೆ ಸಹಕಾರಿ ಸಂಘದ ಸದಸ್ಯರಾದವರಿಗೆ ಸಿಕ್ಕಿರುತ್ತದೆ. ಹೆಚ್ಚಿನವರಿಗೆ ಪರಿಹಾರ ಸಿಗದೇ ಸಂಕಷ್ಟಕ್ಕೆ ಒಳಗಾದರು.

ಮೀನುಗಾರರಿಗೆ ಸರಕಾರದಿಂದ ಬಲೆ, ನೂಲು ಹಾಗೂ ಇತರ ಸೌಲಭ್ಯಗಳು ಕಡಿಮೆ ಬೆಲೆಯಲ್ಲಿ ಸಿಗುವಂತಾಗಬೇಕು. ರೇಷನ್‌ನೀಡುವಾಗ ಹೆಚ್ಚು ಆಹಾರ ಹಾಗೂ ಇತರ ಜೀವನಾವಶ್ಯಕ ವಸ್ತುಗಳನ್ನು ಕೇರಳ ಸರಕಾರ ನೀಡಿದಂತೆ ಕೊಡಬೇಕು. ಮೀನು ಹಿಡಿದಾಗ ಅದರ ಶೇಖರಣೆ ಮತ್ತು ವಿತರಣೆಗೆ ಅನುಕೂಲವಾಗುವಂತೆ ವ್ಯಾಪಾರಸ್ಥರಿಗೆ ಅದರಲ್ಲೂ ಮಹಿಳೆಯರಿಗೆ ವಾಹನ ಹಾಗೂ ಇತರ ಸೌಲಭ್ಯಗಳನ್ನು ನೀಡಬೇಕು. ಮುಖ್ಯ ಕೇಂದ್ರಗಳಲ್ಲಿ ಮಾರ್ಕೇಟು ಹಾಗೂ ಮಾರಾಟದ ವ್ಯವಸ್ಥೆಗೆ ಶೆಡ್‌ಗಳನ್ನು ನಿರ್ಮಾಣ ಮಾಡಬೇಕು.

ಕರೋನಾ, ಮಳೆ ಮತ್ತು ಪ್ರವಾಹದಿಂದಾಗಿ ಮೀನುಗಾರರು, ಮೀನು ಕಾರ್ಮಿಕರು ಹಾಗೂ ಇತರ ದುಡಿಯುವ ವಿಭಾಗದವರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಹಕಾರಿ ವ್ಯವಸ್ಥೆ ಬಲಪಡಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳ ಬೇಕು ಹಾಗೂ ಸರಕಾರವನ್ನು ಒತ್ತಾಯಿಸುವುದು ತೀರಾ ಅವಶ್ಯವಿದೆ. ಸಂಘಟನೆ ಮತ್ತು ಜಂಟಿ ಪ್ರತಿಭಟನೆಗಳನ್ನು ರೂಪಿಸಲು ಮುಂದಾಗಬೇಕಾಗಿದೆ. ಪ್ರಚಾರ ಮತ್ತು ಸಂಪರ್ಕವನ್ನು ಹೆಚ್ಚೆಚ್ಚು ಮಾಡಬೇಕಾಗಿದೆ.

ಸಿಓಪಿ–26 ಮತ್ತು ಕರ್ನಾಟಕಕ್ಕೆ ಜಾಗತಿಕ ತಾಪಮಾನದ ಪರಿಣಾಮ

ಪುಟ 11 ರಿಂದ

ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದೆ.

ಆದರೆ ಇದರೊಂದಿಗೆ ಕರ್ನಾಟಕದ ಗ್ರಾಹಕರು ಪಾವತಿಸಬೇಕಾದ ವಿದ್ಯುತ್ ವೆಚ್ಚದಲ್ಲಿ ಹೆಚ್ಚಳವಾಗಿದೆ. ಸೌರ ಮತ್ತು ಪವನ ಶಕ್ತಿಯು ದಿನವಿಡೀ ಲಭ್ಯವಿರುವುದಿಲ್ಲ ಮತ್ತು ಇದರ ಪರಿಣಾಮವಾಗಿ, ಆರ್‌ಇ ಲಭ್ಯವಿಲ್ಲದಿದ್ದಾಗ ರಾಜ್ಯವು ಇತರ ಶಕ್ತಿ ಮೂಲಗಳು ಲಭ್ಯವಿರುವಂತೆ ಖಚಿತಪಡಿಸಿಕೊಳ್ಳಬೇಕು. ಆರ್.ಇ.ಯನ್ನು ಅಭಿವೃದ್ಧಿ ಪಡಿಸುವವರಿಗೆ ಉತ್ತೇಜನಾ ಕ್ರಮವಾಗಿ ಉತ್ಪಾದಿಸಿದ ಎಲ್ಲ ವಿದ್ಯುತ್ತನ್ನೂ ಖರೀದಿಸಲು ರಾಜ್ಯವು ಬದ್ಧವಾಗಿದೆ, ಹೀಗೆ ಅಭಿವೃದ್ಧಿ ಪಡಿಸುವವರು ಬಹುಪಾಲು ಖಾಸಗಿ ಕಂಪನಿಗಳು. ಇದು ಕಲ್ಲಿದ್ದಲು ಆಧಾರಿತ ತಾಪವಿದ್ಯುತ್ ಸ್ಥಾವರಗಳಂತಹ ಇತರ ಮೂಲಗಳ ಅದಕ್ಷ ಬಳಕೆಗೆ ಕಾರಣವಾಗುತ್ತದೆ, ಇದು ಹೆಚ್ಚಿನ ವೆಚ್ಚವನ್ನು ರಾಜ್ಯದ ಗ್ರಾಹಕರಿಗೆ ರವಾನಿಸುತ್ತದೆ. ಈ ವೆಚ್ಚವನ್ನು ರಾಜ್ಯದ ಎಲ್ಲಾ ವಲಯಗಳ ಮತ್ತು ಆದಾಯ ವರ್ಗಗಳ ಜನರು ಭರಿಸಬೇಕಾಗುತ್ತದೆ. ಆದಾಗ್ಯೂ, ಕಡಿಮೆ ಆದಾಯದ ಕಾರ್ಮಿಕ ವರ್ಗದ ಕುಟುಂಬಗಳು, ಬಡ ಮತ್ತು ಮಧ್ಯಮ ರೈತರು, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಇತರ ಪುಟ್ಟ ಉತ್ಪಾದಕರ ಮೇಲೆ ಇದರ ಪರಿಣಾಮವು ಅತ್ಯಧಿಕವಾಗಿದೆ.

ಮತ್ತೊಂದೆಡೆ, ಹವಾಮಾನ ಬದಲಾವಣೆಯ ದುಷ್ಪರಿಣಾಮಗಳು ಹೆಚ್ಚಾಗಿ ಬಾಧಿಸುವುದು ಕೂಡ ಇದೇ ವಿಭಾಗವನ್ನೇ. . ಜಾಗತಿಕ ತಾಪಮಾನ ಏರಿಕೆಯು ಈಗಾಗಲೇ ಹೆಚ್ಚು ತೀವ್ರಗೊಳ್ಳುತ್ತಿದೆ ಮತ್ತು ವಿಪರೀತ ಘಟನೆಗಳು ಪದೇ–ಪದೇ ಸಂಭವಿಸುತ್ತಿವೆ. ಮತ್ತು ಭವಿಷ್ಯದಲ್ಲಿ ಇದು ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಈ ವಿಪರೀತ ಘಟನೆಗಳನ್ನು ಎದುರಿಸಲು ಕುಟುಂಬಗಳ ಸಾಮರ್ಥ್ಯವನ್ನು ಹೆಚ್ಚಿಸಲೇ ಬೇಕಾಗಿದೆ. ಈ ದೆಸೆಯಲ್ಲಿ ಮೊದಲ ಹೆಜ್ಜೆಯೆಂದರೆ, ಒಂದು ವಿಶ್ವಾಸಾರ್ಹ ಆದಾಯ ಮತ್ತು ಮೂಲಭೂತ ಮೂಲಸೌಕರ್ಯ ಮತ್ತು ಎಲ್ಲರಿಗೂ ಸೇವೆಗಳನ್ನು ಖಚಿತಪಡಿಸುವುದು..

ಮತ್ತೊಂದೆಡೆ, ಬದಲಾಗುತ್ತಿರುವ ಹವಾಮಾನದ ಏರುಪೇರುಗಳನ್ನು ನಿಭಾಯಿಸಲು ಸುಧಾರಿತ ಜ್ಞಾನದ ಅಗತ್ಯವಿದೆ ಮತ್ತು ಕೈಗೆಟುಕುವ ವೆಚ್ಚದಲ್ಲಿ ಅಗತ್ಯ ಪರಿಕರಗಳನ್ನು ರೈತರ ಅತ್ಯಂತ ದುರ್ಬಲ ವಿಭಾಗಗಳಿಗೆ, ಅಂದರೆ, ಕೃಷಿ ಕಾರ್ಮಿಕರು ಮತ್ತು ಸಣ್ಣ ಮತ್ತು ಅಂಚಿನ ಸಾಗುವಳಿದಾರರಿಗೆ ಒದಗಿಸುವ ಅಗತ್ಯವಿದೆ.

ದುರದೃಷ್ಟವಶಾತ್, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಹವಾಮಾನ ಬದಲಾವಣೆಯ ಈ ಬಿಕ್ಕಟ್ಟನ್ನು ಪರಿಹರಿಸಲು ಅಗತ್ಯವಿರುವ ನೀತಿಗಳಿಗೆ ವಿರುದ್ಧವಾದ ನೀತಿಗಳನ್ನು ಅನುಸರಿಸುತ್ತಿವೆ. ಒಂದೆಡೆ ಅವರು ಇಂಧನ ಕ್ಷೇತ್ರದಲ್ಲಿ ಖಾಸಗೀಕರಣದ ನೀತಿಗಳನ್ನು ಆಕ್ರಮಣಕಾರಿಯಾಗಿ ಮುಂತಳ್ಳುತ್ತಿದ್ದಾರೆ, ಇದು ಖಾಸಗಿ ಕಂಪನಿಗಳಿಗೆ ಬಿಕ್ಕಟ್ಟಿನಿಂದ ಲಾಭ ಗಳಿಸಲು ಅನುವು ಮಾಡಿಕೊಡುತ್ತದೆ ಮತ್ತು ಹವಾಮಾನ ಬದಲಾವಣೆಯನ್ನು ತಗ್ಗಿಸುವ ಹೊರೆಯನ್ನು ಬಡ ವಿದ್ಯುತ್ ಗ್ರಾಹಕರ ಹೆಗಲ ಮೇಲೆ ಹಾಕುತ್ತದೆ. ಮತ್ತೊಂದೆಡೆ, ಅವರ ಕಾರ್ಮಿಕ ವಿರೋಧಿ ಮತ್ತು ರೈತ ವಿರೋಧಿ ನೀತಿಗಳು ಹವಾಮಾನ ಬದಲಾವಣೆಗೆ ಎದುರಾಗಿ ಈ ವಿಭಾಗಗಳ ದುರ್ಬಲತೆಯನ್ನು ಹೆಚ್ಚಿಸುತ್ತವೆ ಮತ್ತು ನೈಸರ್ಗಿಕ ಮತ್ತು ಆರ್ಥಿಕ ಆಘಾತಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಅವರ ಸಾಮರ್ಥ್ಯಕ್ಕೆ ಅಡ್ಡಿಯಾಗುತ್ತವೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸುತ್ತದೆ:

1. ಕೇಂದ್ರ ಸರ್ಕಾರವು ಉತ್ತರದ ದೇಶಗಳ ಸಾಮ್ರಾಜ್ಯಶಾಹಿ ತಂತ್ರಗಳನ್ನು ವಿರೋಧಿಸುವಲ್ಲಿ ಮತ್ತು ಹವಾಮಾನ ಬದಲಾವಣೆಯನ್ನು ನ್ಯಾಯಯುತ ಮತ್ತು ಸಮತ್ವದಿಂದ ಪರಿಹರಿಸುವಂತೆ ಖಚಿತಪಡಿಸಿಕೊಳ್ಳುವಲ್ಲಿ ಮೂರನೇ ಜಗತ್ತಿನ ದೇಶಗಳೊಂದಿಗೆ ಸೌಹಾರ್ದ ನೆಲೆಯಲ್ಲಿ ನಿಲ್ಲಬೇಕಾಗುತ್ತದೆ;
2. ಕೇಂದ್ರ ಸರ್ಕಾರವು ದೇಶದೊಳಗೆ ಖಾಸಗೀಕರಣದ ನೀತಿಗಳನ್ನು ಮುಂತಳ್ಳುವುದನ್ನು ನಿಲ್ಲಿಸಬೇಕು ಮತ್ತು ರಾಜ್ಯಗಳು ತಮ್ಮ ಪರಿಸ್ಥಿತಿಗಳಿಗೆ ಅನುಗುಣವಾಗಿ ತಮ್ಮ ನೀತಿಗಳನ್ನು ರೂಪಿಸಿಗೊಳಿಸಲು ಅವಕಾಶ ನೀಡುವ ಮೂಲಕ ಇಂಧನ ಕ್ಷೇತ್ರದ ಸಮವರ್ತಿ ಸ್ವರೂಪವನ್ನು ಗೌರವಿಸಬೇಕು;
3. ರಾಜ್ಯದ ಜನಸಂಖ್ಯೆಯ ಅತ್ಯಂತ ಬಾಧೆಗೊಳಗಾಗುವ ವಿಭಾಗಗಳಾದ ಕಾರ್ಮಿಕರು ಮತ್ತು ರೈತರ ಅಗತ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ಹವಾಮಾನ ಬದಲಾವಣೆಯ ಹೊಂದಾಣಿಕೆಗೆ ಒಂದು ಮೂರ್ತ ಯೋಜನೆಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸಬೇಕು;
4. ರಾಜ್ಯ ಸರ್ಕಾರವು ಕಲ್ಯಾಣ–ಕರ್ನಾಟಕ ಪ್ರದೇಶದಂತಹ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಗಮನವನ್ನು ನೀಡುತ್ತಾ, ರಾಜ್ಯದ ಅತ್ಯಂತ ವೈವಿಧ್ಯಮಯ ಕೃಷಿ ಹವಾಮಾನ ವಲಯಗಳಿಗೆ ವಿಪತ್ತು ತಗ್ಗಿಸುವಿಕೆ ಮತ್ತು ನಿರ್ವಹಣೆಗಾಗಿ ಯೋಜನೆಗಳನ್ನು ಸಿದ್ಧಪಡಿಸಬೇಕು, ಮತ್ತು
5. ರಾಜ್ಯ ಸರ್ಕಾರವು ಬಡ ಕುಟುಂಬಗಳು ಮತ್ತು ಸಣ್ಣ ಉತ್ಪಾದಕರಿಗೆ ಸಾಕಷ್ಟು ಸಬ್ಸಿಡಿಗಳನ್ನು ಒದಗಿಸುವ ಮೂಲಕ ರಾಜ್ಯದಲ್ಲಿ ಇಂಧನ ವೆಚ್ಚಗಳು ಕೈಗೆಟುಕುವಂತೆ ಖಚಿತಪಡಿಸಬೇಕು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದು ಮಾಡಿಸಲು ಪ್ರಬಲ ಹೋರಾಟ

ಪುಟ 10 ರಿಂದ


ಮಾಡಿ; ಪದವಿ ಶಿಕ್ಷಣವನ್ನು ಪೂರ್ಣವಾಗಿ ಖಾಸಗೀಕರಿಸಿ; ಕೆಲವೇ ದುಬಾರಿ, 'ಗುಣಮಟ್ಟದ' ಕಾಲೇಜು/ವಿ.ವಿಗಳಲ್ಲಿ ಕೇಂದ್ರೀಕರಿಸುತ್ತದೆ. ಇದರ ಫಲವಾಗಿ ಕಾಲೇಜು ಶಿಕ್ಷಣ ವ್ಯವಸ್ಥೆ ಉತ್ತಮಗೊಳ್ಳುವ ಬದಲು ಬಾಣಲೆಯಿಂದ ಬೆಂಕಿಗೆ ಬೀಳುವ ಸಾಧ್ಯತೆಯೇ ಹೆಚ್ಚಿದೆ. ಮುಂದಿನ ಎರಡು ತಲೆಮಾರುಗಳನ್ನು ಪ್ರಭಾವಿಸುವ ಈ ಶಿಕ್ಷಣ ನೀತಿಯು ಹೆಣ್ಣು ಮಕ್ಕಳು ಮತ್ತು ತಳ ಸಮುದಾಯದ ಮಕ್ಕಳನ್ನು ಬಹುತೇಕ ಶಿಕ್ಷಣದ ಕಕ್ಷೆಯಿಂದ ಹೊರತಳ್ಳುತ್ತದೆ.

ನೂತನ ಶಿಕ್ಷಣ ಪದ್ಧತಿಯ ಪ್ರಕಾರ 40% ಆನ್‌ಲೈನ್ ಮೂಲಕ ಪಡೆಯಬಹುದೆಂದಿದೆ. ಆ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಅಧಿಕೃತ ಆದೇಶವೂ ಹೊರಬಿದ್ದಿದೆ. ಇದು ಕಾಲಕ್ರಮೇಣ ಪಡೆಯಬಹುದು ಎಂಬುದರಿಂದ ಪಡೆಯಬೇಕು ಎಂದಾದರೆ ಒಂದೇ ಏಟಿಗೆ ಭಾರತದ ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣದ ಬದಲು ಕೃಷಿ ಕೂಲಿಕಾರರಾಗಿ ಮಾರ್ಪಡುತ್ತಾರೆ. ಅದರಲ್ಲಿ ಮೊದಲ ಸಾಲಿನಲ್ಲಿ ಹೆಣ್ಣು ಮಕ್ಕಳಿರುತ್ತಾರೆ. ನಗರಗಳಲ್ಲಿಯೇ ಇಂದಿಗೂ ಸಮರ್ಪಕ ವಿದ್ಯುತ್ ಪೂರೈಕೆ ಮತ್ತು ಮೊಬೈಲ್ ನೆಟ್‌ವರ್ಕ್‌ಗಳು ಸಿಗದ ಪರಿಸ್ಥಿತಿ ಇದೆ. ಇನ್ನು ಗ್ರಾಮೀಣ ಪ್ರದೇಶದಲ್ಲಿ ಎಲ್ಲಿ ಸಿಕ್ಕೀತು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಕಾರಣದಿಂದ ಪ್ರಾರಂಭವಾದ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳು ಯಾವುದೋ ಬೆಟ್ಟ ಗುಡ್ಡಗಳ ಮೇಲೆ ಹೋಗಿ ಕುಳಿತುಕೊಂಡು ನೆಟ್‌ವರ್ಕಿಗಾಗಿ ಪರದಾಡುವ ಸ್ಥಿತಿ ಇದೆ. ಹೆಣ್ಣು ಮಕ್ಕಳು ಮನೆಗಳಲ್ಲಿಯೇ ಸುರಕ್ಷಿತರಲ್ಲದ ಸ್ಥಿತಿ ಇರುವಾಗ ಬೆಡಟ್ಟಗುಡ್ಡಗಳಲ್ಲಿ ನೆಟ್ವರ್ಕ ಹುಡುಕಿ ಹೋಗುವ ಸಾಧ್ಯತೆಗಳು ಕಡಿಮೆಯೇ. ಇನ್ನು ಕೋವಿಡ್ ಲಾಕ್ ಡೌನ್ ತಂದಿತ್ತ ಆರ್ಥಿಕ ದಾರುಣತೆಯಿಂದಾಗಿ ಆದಾಯ ಕಳೆದುಕೊಂಡ ಜನರು ಮಕ್ಕಳಿಗೆ ಬೇಕಾದ ಆಂಡ್ರಾಯ್ಡ್ ಫೋನುಗಳನ್ನು ಎಲ್ಲಿಂದ ಒದಗಿಸಿಯಾರು. ಇಲ್ಲಿ ಕೂಡಾ ಮನೆಯಲ್ಲಿ ಮಗ ಮತ್ತು ಮಗಳು ಇದ್ದರೆ ಒಪ್ಪಿತ ಮೌಲ್ಯವೇ ಆಗಿ ಮಗನಿಗೆ ಪ್ರಾಶಸ್ತ್ಯ ಸಿಗುತ್ತದೆ. ಇಂಥಹ ಒಂದು ಕಾರಣವೇ ಸಾಕು ಸಾವಿರಾರು ಹೆಣ್ಣು ಮಕ್ಕಳು ಶಿಕ್ಷಣದ ಕಕ್ಷೆಯಿಂದ ಹೊರದಬ್ಬಲ್ಪಡುತ್ತಾರೆ. ಈಗಾಗಲೇ ಗ್ರಾಮೀಣ ಕ್ಷೇತ್ರದಲ್ಲಿ ಮಕ್ಕಳ ಆನ್‌ಲೈನ್ ತರಗತಿಗಳಿಗೆ ಅನುಕೂಲ ಕಲ್ಪಿಸಲು ತಾಳಿ ಮಾರಿ ಮೊಬೈಲ್ ಕೊಡಿಸಿದ ಸಂಗತಿಗಳು ನಮ್ಮ ರಾಜ್ಯದಲ್ಲಿಯೇ ನಡೆದ ಬೆಳಕಿಗೆ ಬಾರದ ಕಟು ಸತ್ಯ ಘಟನೆಗಳಿವೆ.

ನವ–ಉದಾರವಾದವನ್ನು ಅನುಸರಿಸುವ ದೇಶಗಳಲ್ಲಿ ಕಲಿಸುವ ವಿಷಯಗಳಿಗೆ ಅನುಗುಣವಾಗಿ ಭಾರತದಲ್ಲಿ ಬೋಧಿಸುವ ಪಠ್ಯಕ್ರಮವನ್ನು ಮತ್ತು ಕೋರ್ಸ್‌ಗಳ ಹುರುಳನ್ನು ಪರಿವರ್ತಿಸುವುದು ಮತ್ತು ಅದರ ಜೊತೆಗೆ ಭಾರತಕ್ಕೆ ನಿರ್ದಿಷ್ಟವಾದ ಹಿಂದುತ್ವ ಸಿದ್ಧಾಂತದ ಬೆರಕೆಯೊಂದಿಗೆ ಅದನ್ನು ಭಾರತದಲ್ಲಿ ಅಳವಡಿಸಿಕೊಳ್ಳುವುದು, ಮೋದಿ ಸರ್ಕಾರದ ಕಾರ್ಯಸೂಚಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ, ಪ್ರಸ್ತುತ ಭಾರತದ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿರುವ ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ಪ್ರತಿರೂಪವೇ ಹೊಸ ಶಿಕ್ಷಣ ನೀತಿಯಾಗಿದೆ. ಭಾರತದ ಶಿಕ್ಷಣ ವ್ಯವಸ್ಥೆಗೆ, ವಿದ್ಯಾರ್ಥಿಗಳ ಹಕ್ಕುಗಳನ್ನು ದಮನಿಸುವ ಹೊಸ ಶಿಕ್ಷಣ ನೀತಿಯನ್ನು ರದ್ದು ಮಾಡುವಂತೆ ರೈತ ಹೋರಾಟದ ಮಾದರಿಯಲ್ಲಿ ಪ್ರಬಲ ಹೋರಾಟ ರೂಪಗೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಸಿಪಿಐ(ಎಂ) 23 ನೇ ರಾಜ್ಯ ಸಮ್ಮೇಳನ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯ ವಿರುದ್ಧ ಪ್ರಬಲ ಹೋರಾಟ ರೂಪಿಸಬೇಕು ಎಂದು ನಿರ್ಣಯವನ್ನು ಮಂಡಿಸಲಾಗುತ್ತಿದೆ.

ಸಮಾಜ ವಿಜ್ಞಾನಗಳು ಮತ್ತು ವಸಾಹತೀಕರಣಗೊಂಡ ಮನಸ್ಸುಗಳು

ಇದೀಗ ರಾಷ್ಟ್ರೀಯ ಶಿಕ್ಷಣ ಆಯೋಗವು ಭಾರತದ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಕೋರ್ಸ್‌ಗಳ ಮತ್ತು ಪಠ್ಯಕ್ರಮಗಳ ನಡುವೆ ಸಮನ್ವಯವಿರಬೇಕು ಎಂದು ಹೇಳುವ ಮೂಲಕ ವಸಾಹತೀಕೃತ ಮಾನಸಿಕತೆಯನ್ನು ಸಂಪೂರ್ಣವಾಗಿ ಸಂಸ್ಥೀಕರಿಸಿದೆ. ವಸಾಹತೀಕರಣಗೊಂಡ ಮಾನಸಿಕತೆಯನ್ನು ಬದಲಿಸಿಕೊಳ್ಳಬೇಕು ಎಂದರೆ, ಅದರ ಸ್ಥಾನದಲ್ಲಿ ದುರಭಿಮಾನದ ಹಿಂದುತ್ವ ಮಾನಸಿಕತೆಯನ್ನು ಅಳವಡಿಸಿಕೊಳ್ಳಬೇಕು ಎಂದರ್ಥವಲ್ಲ. ಇವೆರಡರ ಪ್ರಪಂಚಗಳೇ ಬೇರೆ ಬೇರೆ. ಹಿಂದುತ್ವವು ವಸಾಹತುಶಾಹಿ ಮಾನಸಿಕತೆಯನ್ನು ಬಲಪಡಿಸುತ್ತದೆ. ಸತ್ಯವನ್ನು ಮಬ್ಬುಗವಿಸುವುದು ಮುಂದುವರೆದ ಪಾಶ್ಚಿಮಾತ್ಯ ದೇಶಗಳ ಸಮಾಜ ವಿಜ್ಞಾನಗಳ ಒಂದು ಹೆಗ್ಗುರುತಾಗಿದ್ದರೂ, ಈ ಬಗ್ಗೆ ಹಿಂದುತ್ವಕ್ಕೆ ಕಾಳಜಿಯೇ ಇಲ್ಲ. ಹಿಂದುತ್ವದ ಏಕೈಕ ಕಾಳಜಿ ಎಂದರೆ, ಆ ದೇಶಗಳ ಸಮಾಜ ವಿಜ್ಞಾನಗಳನ್ನು ರೂಪಿಸಿದ ಸಿದ್ಧಾಂತಗಳು ಪ್ರಾಚೀನ ಭಾರತದಲ್ಲೇ ಹುಟ್ಟಿದವು ಎನ್ನುವಂಥಹ ಎಂಥದ್ದೋ ಒಂದು ಪ್ರಮಾಣ ಪತ್ರವನ್ನು ಅವರಿಂದ ಪಡೆಯುವುದೇ ಆಗಿದೆ! ಯಾವುದನ್ನೋ ಸಮರ್ಥಿಸಿಕೊಳ್ಳುವ ಬದಲು ನೈಜ ಸಮಾಜ ವಿಜ್ಞಾನಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವುದು ವಸಾಹತೀಕರಣಕ್ಕೆ ಗುರಿಯಾದವರ ದೃಷ್ಟಿಕೋನದಿಂದ ಮಾತ್ರವೇ.



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಸಾಮ್ರಾಜ್ಯಶಾಹಿ ವ್ಯವಸ್ಥೆಯ ಒಂದು ಬಹಳ ಮುಖ್ಯವಾದ ಸಂಗತಿ ಎಂದರೆ, ತನ್ನ ಸಮರ್ಥನೆಗಾಗಿ ಅದು ಮೂರನೇ ಜಗತ್ತಿನ ಮಾನಸಿಕತೆಯನ್ನು ಪರಿವರ್ತಿಸುತ್ತದೆ. ಈ ರೀತಿಯ ವಸಾಹತುಶಾಹಿ ಮಾನಸಿಕತೆಯು ವ್ಯಾಪಕವಾಗಿ ಹರಡಿದೆ. ಅದೇನೇ ಇರಲಿ, ಸಮಾಜ ವಿಜ್ಞಾನಗಳ ವಲಯದ ಅಕೆಡೆಮಿಕ್ ವಸಾಹತುಶಾಹಿ ಮಾನಸಿಕತೆಯ ಬಗ್ಗೆ ಮಾತ್ರ ನಾವೀಗ ಚರ್ಚಿಸೋಣ.

ಸಮಾಜ ವಿಜ್ಞಾನಗಳು ಬಹಳ ಮುಖ್ಯವಾಗುತ್ತವೆ, ಏಕೆಂದರೆ, ಮೂರನೆಯ ಜಗತ್ತಿನ ಸಮಾಜಗಳನ್ನು ಬಾಧಿಸುವ ಸಮಸ್ಯೆಗಳು ಎಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ಸಮಸ್ಯೆಗಳೇ. ಆದರೆ, ಈ ವಸಾಹತುಶಾಹಿ ಮಾನಸಿಕತೆಯು ಸಾಮಾಜಿಕ ಸಮಸ್ಯೆಗಳಿಗೂ ಮತ್ತು ವಸಾಹತುಶಾಹಿ ಕಾಲದ ಸಾಮ್ರಾಜ್ಯಶಾಹಿಗೂ ಸಂಬಂಧವಿಲ್ಲ ಎಂಬ ನಂಬಿಕೆಯನ್ನು ಜನರಲ್ಲಿ ಪರಿಣಾಮಕಾರಿಯಾಗಿ ಬೆಳೆಸಿದೆ, ಮಾತ್ರವಲ್ಲ, ಈ ಸಮಸ್ಯೆಗಳನ್ನು ತಕ್ಕ ಮಟ್ಟಿಗೆ ಪರಿಹರಿಸಿದೆ ಎಂದೇ ನಂಬಿಸಿದೆ ಕೂಡ. ಮತ್ತು, ಸಾಮ್ರಾಜ್ಯಶಾಹಿಯು ಅಸ್ತಿತ್ವದಲ್ಲಿಲ್ಲದ ಪ್ರಸಕ್ತ ಕಾಲಮಾನದಲ್ಲಿ, ಈ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಚಿಂತಿಸದಂತೆ ಜನರನ್ನು ಮರುಳುಗೊಳಿಸಿದೆ.

ವಸಾಹತುಶಾಹಿ-ಪರವಾಗಿ ಜನ ಮನವನ್ನು ಪರಿವರ್ತಿಸುವ ನಿಟ್ಟಿನಲ್ಲಿ ಇಡುವ ಆರಂಭಿಕ ಹೆಜ್ಜೆ ಎಂದರೆ, ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಒಂದು ಕಥನವನ್ನು ಹೆಣೆಯಲಾಗುತ್ತದೆ. ಈ ಕಥನದ ಪ್ರಕಾರ, ಅಭಿವೃದ್ಧಿಗೂ ಮತ್ತು ವಸಾಹತುಶಾಹಿಗಾಗಲಿ ಅಥವಾ ಸಾಮ್ರಾಜ್ಯಶಾಹಿಗಾಗಲಿ ಸಂಬಂಧವೇ ಇಲ್ಲ. ಈ ಮಾತು ವಸಾಹತು ದೇಶಗಳಿಗೆ ಮಾತ್ರವಲ್ಲ, ಮೆಟ್ರೊಪಲಿಸ್(metropolis) ದೇಶಗಳಿಗೂ ಅನ್ವಯಿಸುತ್ತದೆ. ಅರ್ಥಶಾಸ್ತ್ರದ ಒಂದು ದೃಷ್ಟಾಂತವು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಎಂಐಟಿಯ (ಮ್ಯಾಸಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ರಾಬರ್ಟ್ ಸೋಲೋ ಎಂಬುವರು ಅಭಿವೃದ್ಧಿಪಡಿಸಿದ "ಮುಖ್ಯಧಾರೆ" ಅರ್ಥಶಾಸ್ತ್ರದ ಅತ್ಯಂತ ಪ್ರಭಾವಶಾಲಿ ಸಿದ್ಧಾಂತವು, ಬಂಡವಾಳಶಾಹಿಯಡಿಯಲ್ಲಿ ಬೆಳವಣಿಗೆಯು ಸ್ವತಂತ್ರವಾಗಿ ಬೆಳೆಯುವ ಆಂತರಿಕ ಶ್ರಮಶಕ್ತಿಯ ಬೆಳವಣಿಗೆ ದರದಿಂದ ನಿರ್ಬಂಧಿಸಲ್ಪಟ್ಟಿದೆ. ಮತ್ತು, ದೀರ್ಘಾವಧಿಯಲ್ಲಿ ಶ್ರಮಶಕ್ತಿಯ ಬೆಳವಣಿಗೆ ದರಕ್ಕೆ ಸಮಾನವಾಗಿರುತ್ತದೆ. ಈ ಸಿದ್ಧಾಂತದ ಸಿಂಧುತ್ವವು, ಬೆಳವಣಿಗೆಯ ಬಗ್ಗೆ ಕೆಲವು ಹೊಸ ವಿಧಾನಗಳ ಹೊರತಾಗಿಯೂ (ಸಾಮ್ರಾಜ್ಯಶಾಹಿಯ ಬಗ್ಗೆ ಇವುಗಳಲ್ಲಿ ಇನ್ನೂ ಉಲ್ಲೇಖವಿಲ್ಲ), ಪ್ರಬಲವಾಗಿಯೇ ಮುಂದುವರೆದಿದೆ. ಥಾಮಸ್ ಪಿಕೆಟ್ಟಿ ಅವರಂಥಹ ಅರ್ಥಶಾಸ್ತ್ರಜ್ಞರೂ ಸಹ, ವ್ಯಾಪಕ ಮೆಚ್ಚುಗೆ ಪಡೆದ ತಮ್ಮ ಇತ್ತೀಚಿನ ಪುಸ್ತಕ 'ಕ್ಯಾಪಿಟಲ್ ಇನ್ ದಿ ಟ್ವೆಂಟಿ-ಫಸ್ಟ್ ಸೆಂಚುರಿ'ಯಲ್ಲಿ ಈ ಸಿದ್ಧಾಂತವನ್ನೇ ಅಳವಡಿಸಿಕೊಂಡಿದ್ದಾರೆ.

ಬೆಳವಣಿಗೆಯ ಈ ಸಿದ್ಧಾಂತವು ಒಂದೇ ಏಟಿನಲ್ಲಿ 19ನೇ ಶತಮಾನದ ಮೊದಲಾರ್ಧದಲ್ಲಿ ಆಫ್ರಿಕಾದಿಂದ "ಹೊಸ ಜಗತ್ತಿಗೆ" ಕನಿಷ್ಠ ಎರಡು ಕೋಟಿ ಗುಲಾಮರ ಬೃಹತ್ ಚಲನೆಯನ್ನು ಅರ್ಥಮಾಡಿಕೊಳ್ಳಲಾರದಂತೆ ಮಾಡುತ್ತದೆ. "ಸುದೀರ್ಘ ಹತ್ತೊಂಬತ್ತನೇ ಶತಮಾನದ" ಉತ್ತರಾರ್ಧದಲ್ಲಿ (1850 ಮತ್ತು 1914 ರ ನಡುವೆ) ಚೀನಾದಿಂದ ಮತ್ತು ಭಾರತದಿಂದ ಕೂಲಿ ಮತ್ತು ಕರಾರು ಕೂಲಿ ಕಾರ್ಮಿಕರ ಬೃಹತ್ ಸ್ಥಳಾಂತರವನ್ನು ಇದು ಅಗ್ರಾಹ್ಯಗೊಳಿಸುತ್ತದೆ. ಭಾರತ, ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್‌ನಿಂದ ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಬ್ರಿಟನ್‌ಗೆ ನಡೆದ,ಅಲ್ಜೀರಿಯಾ ಮತ್ತು ಫ್ರಾನ್ಸಿನ-ಹಿಂದಿನ ಇತರ ವಸಾಹತುಗಳಿಂದ ಫ್ರಾನ್ಸ್‌ಗೆ ಮತ್ತು ಟರ್ಕಿಯಿಂದ ಜರ್ಮನಿಗೆ, ಮುಂತಾದ ನಡೆದ ಕಾರ್ಮಿಕರ ಬೃಹತ್ ಚಲನೆಯನ್ನು ಈ ಸಿದ್ಧಾಂತದಿಂದ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಐತಿಹಾಸಿಕವಾಗಿ ಬಂಡವಾಳವು ತನ್ನ ಶ್ರಮ-ಶಕ್ತಿಯ ಅಗತ್ಯವನ್ನು ಪೂರೈಸಿಕೊಳ್ಳಲು ಕೋಟ್ಯಂತರ ಜನರನ್ನು ಪ್ರಪಂಚದಾದ್ಯಂತ ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸುವಂತೆ ಪ್ರೇರೇಪಿಸಿದೆ. ತನ್ನ ಗಡಿಯೊಳಗೆ ಕಾರ್ಮಿಕರ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿ ಬಂಡವಾಳವು ತನ್ನ ಸಂಚಯವನ್ನು ಕೆಳಮುಖವಾಗಿ ಸರಿಹೊಂದಿಸುತ್ತಾ ಮನೆಯಲ್ಲಿ ಸುಮ್ಮನೆ ಕೂರುವುದಿಲ್ಲ. ಆದರೂ "ಮುಖ್ಯವಾಹಿನಿ" ಬೆಳವಣಿಗೆ ಸಿದ್ಧಾಂತವು ನಮಗೆ ಹೇಳುವುದು ಈ ಸಿದ್ಧಾಂತವನ್ನೇ.

ಹಾಸ್ಯಾಸ್ಪದ "ಮುಖ್ಯಧಾರೆ"

ಸದಾ ಕಾಲವೂ ಬಂಡವಾಳಶಾಹಿ ವ್ಯವಸ್ಥೆಯು ಕಾರ್ಮಿಕರ ಮೀಸಲು ಪಡೆಯನ್ನು ಸಜ್ಜಾಗಿಟ್ಟಿರುತ್ತದೆ ಎಂಬ ಅಂಶವನ್ನು ಬದಿಗಿಟ್ಟು ನೋಡಿದರೂ ಸಹ, ತನಗೆ ಶ್ರಮಶಕ್ತಿಯ ಅಗತ್ಯವಿದ್ದಾಗಲೆಲ್ಲಾ ಬಂಡವಾಳಶಾಹಿಯು ವಿಶ್ವದ ಎಲ್ಲೆಡೆಯಿಂದಲೂ ಕಾರ್ಮಿಕರನ್ನು ಸೆಳೆದುಕೊಂಡಿದೆ ಎಂಬುದನ್ನು ಎಲ್ಲರೂ ಬಲ್ಲರು. ಈ ಹಿನ್ನೆಲೆಯಲ್ಲಿ, ಆಂತರಿಕ ಶ್ರಮಶಕ್ತಿಯು ಸಾಕಷ್ಟು ವೇಗವಾಗಿ ಬೆಳೆಯದ ಕಾರಣದಿಂದಾಗಿ ಅದರ ಬೆಳವಣಿಗೆ ಕುಂಠಿತಗೊಂಡಿದೆ ಎನ್ನುವ ಬಂಡವಾಳಶಾಹಿಯ ಅಭಿಪ್ರಾಯವು ಹಾಸ್ಯಾಸ್ಪದವಾಗಿ ತೋರುತ್ತದೆ. ಆದರೂ, "ಮುಖ್ಯವಾಹಿನಿ" ಅರ್ಥಶಾಸ್ತ್ರವು ಇದೇ ಶಂಖವನ್ನೇ ಊದುತ್ತದೆ.

ಹೀಗೆ, ಅರ್ಥಶಾಸ್ತ್ರದ ಈ ಅತ್ಯಂತ ಪ್ರಭಾವಶಾಲಿ "ಮುಖ್ಯಧಾರೆ" ಬೆಳವಣಿಗೆ ಸಿದ್ಧಾಂತಕ್ಕೂ ಮತ್ತು ವಾಸ್ತವಾಂಶಗಳು ಹಾಗೂ ಬಂಡವಾಳಶಾಹಿ ಉತ್ಪಾದನಾ ವಿಧಾನದ ಇತಿಹಾಸಕ್ಕೂ ವ್ಯತ್ಯಾಸವಿರುವುದು ಅತ್ಯಂತ ಸ್ಪಷ್ಟವಾಗಿ ಕಾಣುತ್ತದೆ. ಈ ವ್ಯತ್ಯಾಸವು ಉದ್ಧಟತನದಿಂದ ಕೂಡಿದೆ ಮತ್ತು ಅದು ನಿರ್ಲಜ್ಜವೂ ಹೌದು. ಹೀಗಾಗುವುದು ಹೇಗೆ ಸಾಧ್ಯ? ನಿಸ್ಸಂಶಯವಾಗಿ, ಈ ಸಿದ್ಧಾಂತವು "ಅಂಗೀಕಾರಾರ್ಹ" ವಾಗಿದೆ ಏಕೆಂದರೆ, ಅದು ಬಂಡವಾಳ ಶಾಹಿಯ ಬಗ್ಗೆ ಒಂದು ಅಂದ-ಚಂದಗೊಳಿಸಿದ ಚಿತ್ರಣವನ್ನು ಕೊಡುತ್ತದೆ. ಈ ಚಿತ್ರಣದಲ್ಲಿ ಸಾಮ್ರಾಜ್ಯಶಾಹಿ, ಯುದ್ಧ, ವಿಜಯ, ವಶಪಡಿಸಿಕೊಳ್ಳುವಿಕೆ ಅಥವಾ ಹಿಂಸಾಚಾರಗಳಿಗೆ ಅವಕಾಶವಿಲ್ಲ. ಅಂದ ಚಂದಗೊಳಿಸಿದ ಈ ಚಿತ್ರಣವು ಈ ಒಂದು ಸಿದ್ಧಾಂತಕ್ಕೆ ಮಾತ್ರವಲ್ಲ, ಬಂಡವಾಳಶಾಹಿಯ ಕಾರ್ಯಾಚರಣೆಯನ್ನು ನಿರೂಪಿಸುವ ಅರ್ಥಶಾಸ್ತ್ರದ ಎಲ್ಲ "ಮುಖ್ಯವಾಹಿನಿ" ಸಿದ್ಧಾಂತಗಳಿಗೂ ಅನ್ವಯಿಸುತ್ತದೆ. ಹಾಗಾಗಿ, "ಅಂಗೀಕಾರಾರ್ಹ"ತೆಯ ಕಾರಣದಿಂದ ಈ ಸಿದ್ಧಾಂತಗಳು ಚಾಲ್ತಿಯಲ್ಲಿವೆ; ಅವುಗಳ ವಿವರಣೆಗಳು ಹೊಂದಿರುವ ಬಲದಿಂದಲ್ಲ ಎಂಬುದು ಸ್ಪಷ್ಟವಾಗುತ್ತದೆ.



ಚಾಕಚಕ್ಯತೆಗೆ ಕುರುಡಾಗಬಾರದು

ಈ ಸಿದ್ಧಾಂತಗಳನ್ನು ನಿರೂಪಿಸುವಲ್ಲಿ ಕಂಡುಬರುವ ಅಸಾಧಾರಣ ಚಾಕಚಕ್ಯತೆ ಮತ್ತು ಅವುಗಳ ತಳದಲ್ಲಿರುವ ಉತ್ಕೃಷ್ಟ ಪ್ರತಿಭೆಯು ನಮ್ಮನ್ನು ವಾಸ್ತವಕ್ಕೆ ಕುರುಡಾಗಿಸಬಾರದು. ಈ ಎಲ್ಲಾ ಚಾಕಚಕ್ಯತೆ, ಪ್ರತಿಭೆ ಮತ್ತು ಬೆರಗುಗೊಳಿಸುವ ತಾಂತ್ರಿಕ ಸಾಮರ್ಥ್ಯದ ಹೊರತಾಗಿಯೂ, ಈ ಸಿದ್ಧಾಂತಗಳ ವಿವರಣಾತ್ಮಕ ಶಕ್ತಿಯು ಸಂಪೂರ್ಣವಾಗಿ ಟೊಳ್ಳುತನದಿಂದ ಕೂಡಿದೆ.

ಇಷ್ಟಾಗಿಯೂ, ಇಂತಹ ಸಿದ್ಧಾಂತಗಳು ಚಾಲ್ತಿಯಲ್ಲಿರುವುದಾದರೂ ಹೇಗೆ? ಈ ಸಿದ್ಧಾಂತಗಳ ಕರ್ತೃಗಳು ಪ್ರಜ್ಞಾಪೂರ್ವಕ ಅಪ್ರಾಮಾಣಿಕರೂ ಅಲ್ಲ ಅಥವಾ ಅವರೇ ಹೆಣೆದ ಕಥನಗಳು ಸಮರ್ಥಿಸಿಕೊಳ್ಳುವ ಪಾರ ವಹಿಸುತ್ತಿರುವ ಬಗ್ಗೆ ಅವರಿಗೇ ಅರಿವಿಲ್ಲ. ಹಾಗಾಗಿ, "ವಸಾಹತೀಕರಣಗೊಂಡ ಮಾನಸಿಕತೆ" (colonised minds) ಎಂಬ ಪದವು ಕೇವಲ ಮೂರನೇ ಜಗತ್ತಿನ ಮನಸ್ಸುಗಳಿಗೆ ಮಾತ್ರ ಅನ್ವಯಿಸುವುದಿಲ್ಲ; ಮೆಟ್ರಾಪಲಿಸ್ (ಕೈಗಾರೀಕೃತ) ದೇಶಗಳಿಗೂ ಅನ್ವಯಿಸುತ್ತದೆ. ಒಂದು ವೇಳೆ ಯಾರಾದರೂ ಸತ್ಯವನ್ನು ಅನ್ವೇಷಿಸುವ ಧೈರ್ಯ ಮಾಡಿದರೆ ಅಥವಾ ಸಹಿಸಿಕೊಳ್ಳಬಹುದಾದ ಮಿತಿಯನ್ನು ಮೀರಿದರೆ, ಅಕೆಡೆಮಿಕ್ ನೇಮಕಾತಿಗಳು, ಬಡ್ತಿಗಳು, ಪ್ರೌಢ ಪ್ರಬಂಧಗಳ ಪ್ರಕಟಣೆ, ಸಾಧನೆಯ ಪಾರಿತೋಷಕಗಳು ಮತ್ತು ಕೀರ್ತಿ-ಖ್ಯಾತಿಗಳಿಂದ ಹೊರಗಿಡುವ ಬೆದರಿಕೆಯನ್ನು ಈ ಸೊಬಗರ ಮುಂದೆ ಹಿಡಿದರೆ, ಅವರು ತೆಪ್ಪಗೆ ದಾರಿಗೆ ಬರುತ್ತಾರೆ. ಇವೆಲ್ಲ ಪರಿಣಾಮಗಳನ್ನೂ ಹಳಬರಿಂದ ಕೇಳಿಸಿಕೊಂಡು ಭಯಭೀತರಾದ ಹೊಸಬರಂತೂ ತಾವು ಈ ಲಕ್ಷ್ಮಣ "ರೇಖೆ"ಯನ್ನು ಉಲ್ಲಂಘಿಸುವುದಿಲ್ಲ ಮಾತ್ರವಲ್ಲ, ಇತರರನ್ನು ನಿರ್ಬಂಧಿಸುವ ಅಭ್ಯಾಸವನ್ನೂ ಬೆಳೆಸಿಕೊಳ್ಳುತ್ತಾರೆ. ಈ ಎಲ್ಲದರಲ್ಲಿ ಯಾವ ದುರುದ್ದೇಶವೂ ಇಲ್ಲ. ಹಾಗಾಗಿ, ಅದು ಒಂದು "ಸಂಪ್ರದಾಯ"ವೇ ಆಗುತ್ತದೆ.

ಮಾಸಿಕ ಮರುವಸಾಹತೀಕರಣ ಏಕೆ?

ಇವೆಲ್ಲವೂ ಮೆಟ್ರಾಪಲಿಸ್ ದೇಶಗಳ ಮಟ್ಟಿಗೆ ಒಪ್ಪಬಹುದಾದರೂ, ಮೂರನೇ ಜಗತ್ತಿನ ಅಕೆಡಿಮಿಕ್‌ಗಳೂ ಸಹ ಇದೇ "ದಾರಿ"ಯನ್ನು ತುಳಿಯುತ್ತಾರಲ್ಲ ಅದನ್ನು ವಿವರಿಸುವುದು ಹೇಗೆ? ಹೇಳಿ ಕೇಳಿ ವಸಾಹತುಶಾಹಿ-ವಿರೋಧಿ ಹೋರಾಟದ ಸಮಯದಲ್ಲಿ, ಎಷ್ಟೇ ಅರೆಮನಸ್ಸಿನಿಂದಾಗಲಿ ಮತ್ತು ಎಷ್ಟೇ ಹಿಂಜರಿಕೆ ಇದ್ದರೂ ಸಹ ಜನರು "ವಸಾಹತುಶಾಹಿ ಮಾನಸಿಕತೆ"ಯಿಂದ ಹೊರಬಂದರು. ಮಾನಸಿಕತೆಯಲ್ಲಿ ಈ ಬದಲಾವಣೆ ಆಗದಿದ್ದರೆ ವಸಾಹತುಶಾಹಿ ವಿರೋಧಿ ಹೋರಾಟವೇ ಜರುಗುತ್ತಿರಲಿಲ್ಲ. ಹಾಗಾದರೆ, ಮೂರನೆಯ ಜಗತ್ತಿನ ಮಾನಸಿಕ ಮರು-ವಸಾಹತೀಕರಣವನ್ನು ವಿವರಿಸುವುದಾದರೂ ಹೇಗೆ?

ಒಂದು ಪ್ರಮುಖ ಕಾರಣವನ್ನು ಹೀಗೆ ಹೇಳಬಹುದು: ಮಹಾ ಯುದ್ಧ-ಪೂರ್ವ ದಿನಗಳಲ್ಲಿ ಮೆಟ್ರೋಪಾಲಿಟನ್ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ವಿರಳವಾಗಿದ್ದ ಬೋಧಕ ಹುದ್ದೆಗಳಿಗೆ ಮೂರನೇ ಜಗತ್ತಿನ ಶಿಕ್ಷಣ ತಜ್ಞರನ್ನು ದೊಡ್ಡ ಪ್ರಮಾಣದಲ್ಲಿ ನೇಮಿಸಿಕೊಳ್ಳಲಾಗುತ್ತಿತ್ತು. ಇಂತಹ ನೇಮಕಾತಿಗಳು, ಅಥವಾ, ನೇಮಕಾತಿ ಸಾಧ್ಯತೆಯ ಪ್ರಲೋಭನೆಗಳೇ ಮೂರನೇ ಜಗತ್ತಿನ ಅನೇಕ ಶಿಕ್ಷಣ-ತಜ್ಞರನ್ನು ಜೊಲ್ಲು ಸುರಿಸುವಂತೆ ಮಾಡಿದವು. ಅದರ ಜೊತೆಯಲ್ಲಿ, ನಿರ್ವಸಾಹತೀಕರಣದ (decolonisation) ನಂತರ ಈ ಮಾಜಿ ವಸಾಹತುಶಾಹಿ ದೇಶಗಳಲ್ಲಿ ಉನ್ನತ ಶಿಕ್ಷಣ ಅಧ್ಯಾಪಕ-ತರಪೇತಿ ಪಡೆದವರ ಸಂಖ್ಯೆಯ ಹೆಚ್ಚಳವೂ ಒಂದು ಅಂಶವಾಗಿ ಪ್ರಭಾವ ಬೀರಿತು. ಅದೂ ಅಲ್ಲದೆ, ತಜ್ಞ-ಬೋಧಕರ ಪ್ರಾಬಲ್ಯ ಮುಂದುವರಿಯುತ್ತಿರುವ ಮೆಟ್ರೋಪಾಲಿಟನ್ ದೇಶಗಳ ಶೈಕ್ಷಣಿಕ ವಲಯದಲ್ಲಿ ಅಧ್ಯಾಪಕ "ವೃತ್ತಿ" ಗಿಟ್ಟಿಸಿಕೊಂಡು ಅವರಿಂದ ಮನ್ನಣೆ ಸಂಪಾದಿಸುವ ಸ್ವಾಭಾವಿಕ ಹಂಬಲವೂ ಸೇರಿಕೊಂಡು, ಈ ಮಾಜಿ ವಸಾಹತುಶಾಹಿ ದೇಶಗಳ "ತರಪೇತಿ" ಪಡೆದವರನ್ನು ಮೆಟ್ರೋಪಾಲಿಟನ್ ಸಿದ್ಧಾಂತಗಳಿಗೆ ಅಪ್ರಜ್ಞಾಪೂರ್ವಕವಾಗಿ ಮಾರುಹೋಗುವಂತೆ ಮಾಡಿತು.

ಈ ವಿದ್ಯಮಾನವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ರಾಜಕೀಯ ನಿರ್ವಸಾಹತೀಕರಣವು ವೃತ್ತಿಯೊಳಗಿನ ಅಧಿಕಾರ-ಸಂಬಂಧಗಳನ್ನು ಬದಲಾಯಿಸಲಿಲ್ಲ. ಶೈಕ್ಷಣಿಕ ವಲಯದಲ್ಲಿ ಅದೇ ಮೆಟ್ರೋಪಾಲಿಟನ್ ಶಿಕ್ಷಣ-ತಜ್ಞ ಪ್ರಾಬಲ್ಯವೇ ಮುಂದುವರೆಯಿತು. ಅಧಿಕಾರ ಸಂರಚನೆಯ ಈ ಪರಿಸರದಲ್ಲಿ ತಮ್ಮ ವೃತ್ತಿ ಜೀವನದ ಮುನ್ನಡೆಗಾಗಿ ಪ್ರಚಲಿತ ಮೆಟ್ರೋಪಾಲಿಟನ್ ಸಿದ್ಧಾಂತಗಳನ್ನು ಹಿಂದುಮುಂದು ನೋಡದೆ ಒಪ್ಪಿಕೊಳ್ಳುವಂತೆ ಮಾಡಿತು. ಪರಿಣಾಮವಾಗಿ, ವಸಾಹತುಶಾಹಿ ವಿರೋಧಿ ಹೋರಾಟದ ಸಮಯದಲ್ಲಿ ಉಂಟಾಗಿದ್ದ ಹಿಂಜರಿಕೆಯ ವಸಾಹತಿ-ವಿರೋಧಿ ಮನೋಭಾವವುಉಟಾಗಿದ್ದರೂ. ಹಲವರಲ್ಲಿ ಅದು ಹಿಂಜರಿಕೆಯಿಂದ ಕೂಡಿತ್ತು. ನಂತರ ಅದೂ ತಿರುಗುಮುರುಗಾಯ್ತು.

ವಸಾಹತೀಕೃತ ಮಾನಸಿಕತೆಯ ಸಂಸ್ಥೀಕರಣ

ನವಉದಾರೀಕರಣದ ಇಂದಿನ ಕಾಲಮಾನದಲ್ಲಿ, ವಸಾಹತುಶಾಹಿ ಮಾನಸಿಕತೆಯ ಸಮಸ್ಯೆಯ ಇರವು ಬರವುಗಳೇ ಗೊತ್ತಾಗುತ್ತಿಲ್ಲ. ತದ್ವಿರುದ್ಧವಾಗಿ, ಅಕೆಡೆಮಿಕ್ ವೃತ್ತಿಯು ಸಂಪೂರ್ಣವಾಗಿ ಏಕರೂಪದ ಚಟುವಟಿಕೆಯಾಗಿ ಬದಲಾಗುತ್ತಿದೆ ಎಂಬುದನ್ನು ಗಮನಿಸಬಹುದು:

ಪುಟ 14 ನೋಡಿ

ಪುಟ 13 ರಿಂದ

...ವಸಾಹತೀಕರಣಗೊಂಡ ಮನಸ್ಸುಗಳು

ಅರ್ಥಶಾಸ್ತ್ರದಂತಹ ಒಂದು ವಿಷಯದಲ್ಲಿ ಮೆಟ್ರಾಪಲಿಸ್‌ನಲ್ಲಿ ಚಾಲ್ತಿಯಲ್ಲಿರುವುದಕ್ಕಿಂತ ಭಿನ್ನವಾದ ಒಂದು ಅಭಿಪ್ರಾಯವನ್ನು ಮೂರನೇ ಜಗತ್ತಿನ ದೇಶವೊಂದು ತಳೆಯಬಹುದು ಎಂಬ ಭಾವನೆಯೇ ಮೂರನೇ ಜಗತ್ತಿನದೇ ಆದ ಶೈಕ್ಷಣಿಕ ಸಂಸ್ಥೆಗೂ ತೀರಾ ವಿಲಕ್ಷಣವಾಗಿಯೇ ತೋರುತ್ತದೆ. ಒಂದು ಉದಾಹರಣೆಯಾಗಿ ಹೇಳುವುದಾದರೆ, ವಸಾಹತುಶಾಹಿ ಶೋಷಣೆಯ ಕಾರ್ಯವಿಧಾನವನ್ನು ಕರಾರುವಾಕ್ಕಾಗಿ ಪರಿಶೀಲಿಸಿದ ದಾದಾಭಾಯಿ ನವರೋಜಿಯವರ ಅಥವಾ ರೋಮೇಶ್ ಚಂದರ್ ದತ್ ಅವರ ಅಭಿಪ್ರಾಯಗಳನ್ನು ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯಗಳಲ್ಲಿ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ, ಅವುಗಳು ಅಲ್ಲಿ ಕೇಳಬರುವುದೂ ಇಲ್ಲ. ಏಕೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ, ಒಂದು ಅಧ್ಯಯನ ಶಿಸ್ತನ್ನು ನಾವು ಏಕರೂಪದ್ದೆಂದು ಕಲ್ಪಿಸಿಕೊಂಡರೆ, ಆಗ ನಾವೂ ಸಹ ಮೆಟ್ರಾಪಲಿಸ್‌ನ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ. ಆದರೆ, ಮೆಟ್ರಾಪಲಿಸ್ ಹೇಳಿದ್ದೇ ವೇದವಾಕ್ಯ. ಹಾಗಾಗಿ, ವಸಾಹತುಶಾಹಿ ಮಾನಸಿಕತೆಯ ಸ್ಥಿತಿಗೆ ಮರಳುತ್ತೇವೆ. ಇದೀಗ ರಾಷ್ಟ್ರೀಯ ಶಿಕ್ಷಣ ಆಯೋಗವು ಭಾರತದ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಕೋರ್ಸ್‌ಗಳ ಮತ್ತು ಪಠ್ಯಕ್ರಮಗಳ ನಡುವೆ ಸಮನ್ವಯವಿರಬೇಕು ಎಂದು ಹೇಳುವ ಮೂಲಕ ವಸಾಹತೀಕೃತ ಮಾನಸಿಕತೆಯನ್ನು ಸಂಪೂರ್ಣವಾಗಿ ಸಂಸ್ಥೀಕರಿಸಿದೆ.

ವಸಾಹತುಶಾಹಿ ಮಾನಸಿಕತೆಯನ್ನು ಬದಲಿಸಿಕೊಳ್ಳಬೇಕು ಎಂದರೆ, ಅದರ ಸ್ಥಾನದಲ್ಲಿ ದುರಭಿಮಾನದ ಹಿಂದುತ್ವ ಮಾನಸಿಕತೆಯನ್ನು ಅಳವಡಿಸಿಕೊಳ್ಳಬೇಕು ಎಂಬುದು ಅದರ ಅರ್ಥವಲ್ಲ. ಇವೆರಡರ ಪ್ರಪಂಚಗಳೇ ಬೇರೆ ಬೇರೆ. ಹಿಂದುತ್ವವು ವಸಾಹತುಶಾಹಿ ಮಾನಸಿಕತೆಯನ್ನು ಬಲಪಡಿಸುತ್ತದೆ. ಮೆಟ್ರೋಪಾಲಿಟನ್ ಸಮಾಜ ವಿಜ್ಞಾನಗಳ ಒಂದು ಹೆಗ್ಗುರುತಾದ ಸತ್ಯವನ್ನು ಮಬ್ಬುಗವಿಸುವ ಬಗ್ಗೆ ಹಿಂದುತ್ವಕ್ಕೆ ಕಾಳಜಿಯೇ ಇಲ್ಲ. ಹಿಂದುತ್ವದ ಏಕೈಕ ಕಾಳಜಿ ಎಂದರೆ, ಈ ಮೆಟ್ರೋಪಾಲಿಟನ್ ಸಮಾಜ ವಿಜ್ಞಾನಗಳನ್ನು ರೂಪಿಸಿದ ಸಿದ್ಧಾಂತಗಳು ಪ್ರಾಚೀನ ಭಾರತದಲ್ಲೇ ಹುಟ್ಟಿದವು ಎನ್ನುವಂಥಹ ಏಂಥದ್ದೊ ಒಂದು ಪ್ರಮಾಣ ಪತ್ರವನ್ನು ಮೆಟ್ರಾಪಲಿಸ್‌ನಿಂದ ಪಡೆಯುವುದೇ ಆಗಿದೆ! ವಾಸ್ತವವಾಗಿ, ದೇಶದ ಹಿಂದಿನ ಸರ್ಕಾರಗಳು ಸ್ಥಾಪಿಸಿದ ಉನ್ನತ ಶಿಕ್ಷಣದ ಉಪಯುಕ್ತ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸುವ ಅದರ ಅಪ್ರೌಢತೆ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಈ ತೆರನಾಗಿ, ತನಗೆ ಡೊಗ್ಗು ಸಲಾಮು ಹೊಡೆಯದ ಯಾವುದೇ ಸೃಜನಶೀಲತೆಯನ್ನು ನಿರರ್ಥಕಗೊಳಿಸುವ ಹಿಂದುತ್ವವು, ವಾಸ್ತವವಾಗಿ, ಮೆಟ್ರೋಪಾಲಿಟನ್ ವಿಚಾರಗಳ ಆಮದನ್ನು, ಯಾವ ಟೀಕೆ ಟಿಪ್ಪಣಿಗಳೂ ಇಲ್ಲದೆ, ಪ್ರೋತ್ಸಾಹಿಸುತ್ತದೆ ಮತ್ತು ಆ ಮೂಲಕ ಮೆಟ್ರೋಪಾಲಿಟನ್ ಆಧಿಪತ್ಯವನ್ನು ಒಪ್ಪಿಕೊಳ್ಳುತ್ತದೆ.

ಆದ್ದರಿಂದ, ವಸಾಹತುಶಾಹಿ ಮಾನಸಿಕತೆಯನ್ನು ಬದಲಿಸಿಕೊಳ್ಳಬೇಕು ಎಂದಾದರೆ, ಶಿಕ್ಷಣ–ವಿಷಯವಾಗಿ (ಒಂದು ಶಿಸ್ತಾಗಿ) ಸಮಾಜ ವಿಜ್ಞಾನಗಳನ್ನು ತಿರಸ್ಕರಿಸುವ ಅಗತ್ಯವಿಲ್ಲ. ಬದಲಿಗೆ, ಸಾಮ್ರಾಜ್ಯಶಾಹಿಯು ಮಬ್ಬುಗೊಳಿಸಿದ ಕಳಂಕಿತ ಮೆಟ್ರೋಪಾಲಿಟನ್ "ಸಮಾಜ ವಿಜ್ಞಾನಗಳಿಗೆ" ವಿರುದ್ಧವಾಗಿ, ಒಂದು ಶೈಕ್ಷಣಿಕ ಶಿಸ್ತಾಗಿ ಯಾವ ಅಂಜು–ಅಳುಕುಗಳೂ ಇಲ್ಲದೆ ಸಮಾಜ ವಿಜ್ಞಾನಗಳನ್ನು ಬೋಧಿಸುವ ಅಗತ್ಯವಿದೆ. ಒಂದು ಆರಂಭಿಕ ಅವಧಿಯ ನಂತರ, ಬೂರ್ಜ್ವಾವರ್ಗಕ್ಕೆ ಅಗತ್ಯವಾಗುವುದು ಆರ್ಥಿಕ ವಿಜ್ಞಾನವಲ್ಲ; ಅದರ ಅಗತ್ಯವೆಂದರೆ, ಆರ್ಥಿಕ ವಿಜ್ಞಾನ ಪ್ರಪಂಚದ ಒಂದು ಸಿದ್ಧಾಂತ. ತದನಂತರ, ಆ ವೈಜ್ಞಾನಿಕ ಚಟುವಟಿಕೆಗಳನ್ನು ಶ್ರಮಜೀವಿ ವರ್ಗ ದೃಷ್ಟಿಕೋನದಿಂದ ಮಾತ್ರ ನಡೆಸಬಹುದು ಎಂಬುದಾಗಿ ಕಾರ್ಲ್ ಮಾರ್ಕ್ಸ್ ನಂಬಿದ್ದರು. ಸಮಾಜ ವಿಜ್ಞಾನಗಳ ಬಗ್ಗೆ ಕೈಗಾರೀಕೃತ ಕೇಂದ್ರಗಳ ಮನೋಭಾವದ ಬಗ್ಗೆಯೂ ಇದೇ ಮಾತನ್ನೇ ಹೇಳಬಹುದು. ವಸಾಹತೀಕರಣಕ್ಕೆ ಗುರಿಯಾದವರ ದೃಷ್ಟಿಕೋನದಿಂದ ಮಾತ್ರವೇ, ಯಾವುದನ್ನೋ ಸಮರ್ಥಿಸಿಕೊಳ್ಳುವ ಬದಲು ನೈಜ ಸಮಾಜ ವಿಜ್ಞಾನಗಳನ್ನು ಅಭಿವೃದ್ಧಿಪಡಿಸಬಹುದು.

ನೇತಾಜಿಯ ಜಾತ್ಯತೀತತೆಯನ್ನು...

ಪುಟ 8 ರಿಂದ

ಗೆಲ್ಲಲು ಸಹಾಯ ಮಾಡಬಹುದು ಎಂದು ನಂಬಿದ್ದಾರೆಂದು ಹಲವರು ಅರ್ಥೈಸಿದರು. ಆದ್ದರಿಂದಲೋ ಏನೋ, ಚುನಾವಣೆಯಲ್ಲಿ ಅವಮಾನಕಾರಿ ಸೋಲು ಅನುಭವಿಸಿದಾಗ, ಸಮಿತಿ ಮತ್ತು ಆಚರಣೆ ಎರಡನ್ನೂ ಕಸದ ಬುಟ್ಟಿಗೆ ಎಸೆದರು. ನೇತಾಜಿ ಅವರ ಪರಂಪರೆಯನ್ನು ಕಸಿಯಲು ಪ್ರಯತ್ನಿಸಿದಾಗಲೆಲ್ಲ, ಬಿಜೆಪಿ ಮತ್ತು ಮೋದಿಗೆ ಬರುವ ಕಷ್ಟಗಳು ಸಷ್ಟವಾಗಿ ಕಾಣುತ್ತಿದ್ದವು.

ಐದನೆಯ ಜಾರ್ಜ್ ರಾಜನ ಸ್ಥಳದಲ್ಲಿ ನೇತಾಜಿ ಮೂರ್ತಿಯನ್ನು ಸ್ಥಾಪಿಸಲಾಗುತ್ತದೆ ಎಂಬ ಘೋಷಣೆ ಈ ನಿಟ್ಟಿನಲ್ಲಿ ಅವರ ಕೊನೆಯ ಪ್ರಯತ್ನ ಅಂತ ಕಾಣುತ್ತದೆ. ಸರಕಾರದ ನೀತಿಗಳಿಗೆ ತೀವ್ರ ವಿರೋಧ ಹೆಚ್ಚುತ್ತಿರುವ ಸಮಯದಲ್ಲಿ ಬರುತ್ತಿದೆ. ಬ್ರಿಟಿಷ್ ಸಾಮ್ರಾಟನನ್ನು ಓಡಿಸಲು ಶಸ್ತ್ರಗಳನ್ನು ಎತ್ತಿಕೊಂಡ ವ್ಯಕ್ತಿಯ ಮೂರ್ತಿ, ಸಾಮ್ರಾಟನ ಮೂರ್ತಿಯ ಜಾಗದಲ್ಲಿ ಸ್ಥಾಪಿಸುವುದು ಸರಿಯಾದ ಆಯ್ಕೆಯೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಬಿಜೆಪಿ ಮತ್ತು ಪ್ರಧಾನಿಯ ನಿಜವಾದ ಉದ್ದೇಶ ನೇತಾಜಿ ಅವರ ಪರಂಪರೆಯನ್ನು ಕಸಿಯುವುದು ಮತ್ತು ಅದು ಮತ್ತೆ ವಿಫಲವಾಗುವುದು ಎಂಬುದರ ಬಗೆಗೂ ಯಾರಿಗೂ ಸಂದೇಹವಿಲ್ಲ.

ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ಮಾತ್ರವಲ್ಲ, ಸುಭಾಸ್ ಅವರ ಆಳವಾದ ಮತ್ತು ನಿರಂತರವಾಗಿ ವ್ಯಕ್ತವಾಗುತ್ತಿದ್ದ ಜಾತ್ಯತೀತತೆಗೆ ಬದ್ಧತೆಗಳಿಗೆ, ಬಿಜೆಪಿಯ ಮತ್ತು ಅದರ ಪೂರ್ವಜರು ವಿರೋಧಿಗಳಾಗಿದ್ದರು. ಎಲ್ಲ ರೀತಿಯ ಕೋಮುವಾದಗಳಿಗೆ ಮತ್ತು ಧಾರ್ಮಿಕ ಮತಾಂಧತೆಗಳಿಗೂ ನೇತಾಜಿ ಅವರ ತೀವ್ರ ವಿರೋಧವಿತ್ತು ಎಂಬ ವಾಸ್ತವವನ್ನು, ಅವರ ಈ ಮೂರ್ತಿಗೆ ಸಹ ಮರೆಮಾಚಲು ಆಗಲಿಕ್ಕಿಲ್ಲ.

ನೇತಾಜಿ ಮೂರ್ತಿ ಸ್ಥಾಪಿಸಬಹುದು, ಆದರೆ ಐ.ಎನ್.ಎ ಧ್ಯೇಯವಾಕ್ಯ ಕೆತ್ತಲಾರರು!

ನೇತಾಜಿ ಅವರ ಈ ಮೂರ್ತಿ, ಬಿಜೆಪಿ ಮತ್ತು ಮೋದಿ ಗಳಿಗೆ ಅವರು ಹತಾಶೆಯಿಂದ ನಿರೀಕ್ಷಿಸುತ್ತಿರುವ



ದೇಶಭಕ್ತಿಯ ಸರ್ಟಿಫಿಕೇಟುಗಳನ್ನು ಸಹ ಯಾವುದೇ ರೀತಿಯಲ್ಲಿ ಕೊಡಲಿಕ್ಕಿಲ್ಲ. ನೇತಾಜಿ ಸಿಂಗಾಪುರ್ ನಲ್ಲಿ ಐ.ಎನ್.ಎ. ನಾಯಕತ್ವ ವಹಿಸಿಕೊಂಡು ಅವರು, ಅನಿವಾಸಿ ಭಾರತೀಯ ಮಹಿಳೆಯರನ್ನು ರಾಣಿ ಝಾನ್ಸಿ ರೆಜಿಮೆಂಟಿಗೆ ಸೇರಿಸಿಕೊಳ್ಳುತ್ತಿದ್ದಾಗ, ಐ.ಎನ್.ಎ ಯ ವೀರ ಸೈನಿಕರು ಬ್ರಿಟಿಷರ ವಿರುದ್ಧ ಧೀರೋದ್ದಾತ್ತ ಹೋರಾಟ ನಡೆಸುತ್ತಿದ್ದಾಗ, ಬಿಜೆಪಿ–ಮೋದಿಯ 'ಹೀರೊ' ಸಾವರ್ಕರ್ ಬ್ರಿಟಿಷ್ ಸೈನ್ಯಕ್ಕೆ ಭಾರತೀಯರನ್ನು ಸೇರಿಸುವ ಪ್ರಯತ್ನ ಮಾಡುತ್ತಿದ್ದ. ಅವರನ್ನು ತಮ್ಮ ಬ್ರಿಟಿಷ್ ಮಾಲಕರನ್ನು ರಕ್ಷಿಸಲು ಸುಭಾಸ್ ಮತ್ತು ಅವರ ಐ.ಎನ್.ಎ. ವೀರ ಸೈನಿಕರ ಹತ್ಯೆ ಮಾಡಲು ಪ್ರಚೋದಿಸುತ್ತಿದ್ದ ಎಂಬ ವಾಸ್ತವವನ್ನು ಅಳಿಸಿ ಹಾಕಲು ನೇತಾಜಿ ಅವರ ಮೂರ್ತಿಯ ಸ್ಥಾಪನೆಯಿಂದಲೂ ಸಾಧ್ಯವಾಗಲಿಕ್ಕಿಲ್ಲ.

ಬಿಜೆಪಿ ಮತ್ತು ಮೋದಿ ಸ್ಥಾಪಿಸುವ ನೇತಾಜಿ ಅವರ ಸ್ಮಾರಕವು, ಭಾರತದ ಐಕ್ಯತೆ ಮತ್ತು ಪ್ರಗತಿಗೆ ಜಾತ್ಯತೀತತೆ ಅತ್ಯಗತ್ಯ ವೆಂಬ ನೇತಾಜಿ ಅವರ ಒತ್ತಾಯದ ವಾಸ್ತವವನ್ನು ಮರೆಮಾಚಲು ಸಹಾಯವಾಗಲಿಕ್ಕಿಲ್ಲ. ಐ.ಎನ್.ಎ ಯ ಹಲವು ಅಧಿಕಾರಿಗಳು ಮುಸ್ಲಿಮರಾಗಿದ್ದರು. ಅವರ ಮೇಲೆ ನೇತಾಜಿ ಪೂರ್ಣವಾಗಿ ಭರವಸೆಯಿಟ್ಟಿದ್ದರು. ಅವರೂ ತಮ್ಮ ಪ್ರಾಣವನ್ನು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಣವಾಗಿಟ್ಟು ಆ ಭರವಸೆಗೆ ಸ್ಪಂದಿಸಿದ್ದರು ಎಂಬ ವಾಸ್ತವವನ್ನು ಬಿಜೆಪಿ–ಮೋದಿ ಹೇಗೆ ಅರಗಿಸಿಕೊಳ್ಳಲು ಸಾಧ್ಯ?

ಐ.ಎನ್.ಎ ಯಲ್ಲಿ ಗಂಡಸರು ಮತ್ತು ಹೆಂಗಸರು ಸೋದರ–ಸೋದರಿಯರಂತೆ ಒಟ್ಟಿಗೆ ಉಂಡು ಬಾಳಿದರು. ಇಂತಹ ಜಾತಿ–ವರ್ಗ–ಧರ್ಮ–ಲಿಂಗ ಬೇಧ ಮರೆತ ಅಮೋಘ ಐಕ್ಯತೆಯನ್ನು ಸುಭಾಸ್ ಐ.ಎನ್.ಎ ಯಲ್ಲಿ ಸಾಧಿಸಿದರು–ಇವೆಲ್ಲ ವಾಸ್ತವವನ್ನು ಹೇಗೆ ಬಿಜೆಪಿ–ಮೋದಿ ತಮ್ಮ ಪರಂಪರೆಯೆಂದು ಹೇಳಿಕೊಳ್ಳುವುದು ಅಥವಾ ಬಚ್ಚಿಡುವುದು ಸಾಧ್ಯ? ಯಾಕೆಂದರೆ ತಲಾ ಒಬ್ಬ ಹಿಂದೂ, ಒಬ್ಬ ಮುಸ್ಲಿಂ, ಒಬ್ಬ ಸಿಖ್ ಐ.ಎನ್.ಎ ಅಧಿಕಾರಿಯನ್ನು ಬ್ರಿಟಿಷರು ಕೆಂಪು ಕೋಟೆಯಲ್ಲಿ ಬಂಧಿಸಿಟ್ಟು ದೇಶದ್ರೋಹದ ವಿಚಾರಣೆಗೆ ಒಳಪಡಿಸಿದ್ದನ್ನು.. (ಅವರ ಬೆಂಬಲಕ್ಕೆ ಇಡೀ ದೇಶ ಧಾವಿಸಿತ್ತು. ನೆಹರೂ ಸೇರಿದಂತೆ ವಕೀಲಿ ಬಿಟ್ಟುಕೊಟ್ಟಿದ್ದ ಹಲವು ದೇಶಭಕ್ತ ಹೋರಾಟಗಾರ ನಾಯಕರು ಅವರ ರಕ್ಷಣೆಯ ವಕಾಲತ್ತು ವಹಿಸಲು ಮತ್ತೆ ಕರಿಕೋಟು ತೊಟ್ಟು ಧಾವಿಸಿದ್ದರು.) ಸುಭಾಸ್ ಸಾಧಿಸಿದ್ದ ಅಮೋಘ ಐಕ್ಯತೆಯನ್ನು ಕಂಡು ಇಡೀ ದೇಶವೇ ಬೆರಗಾಗಿತ್ತು.

ಐ.ಎನ್.ಯು ಟೋಪಿ ಮೋದಿ ಅವರನ್ನು ಐ.ಎನ್.ಎ ಹೋರಾಟಗಾರ ಮಾಡಲಾರದು. ಸುಭಾಸ್ ಅವರ ಮೂರ್ತಿಯನ್ನು ಕಟ್ಟಿ ಸ್ಥಾಪಿಸುವುದು, ಮೋದಿಯನ್ನು ಅಮೋಘ ರಾಷ್ಟ್ರೀಯ ಚಳುವಳಿಯ ಪರಂಪರೆಯ ವಾರಸುದಾರನನ್ನಾಗಿ ಮಾಡುವುದಿಲ್ಲ.

ಮೋದಿ ಸುಭಾಷ್ ಅವರ ಮೂರ್ತಿಯನ್ನು ರಚಿಸಿ ಸ್ಥಾಪಿಸಬಹುದು. ಆದರೆ ಅದರಲ್ಲಿ ಐ.ಎನ್.ಎ ಯ ಧ್ಯೇಯ ವಾಕ್ಯ [" 'ಐತ್ಮಾದ್ (ನಂಬಿಕೆ), ಇತ್ತಿಹಾದ್ (ಐಕ್ಯತೆ), ಕುರ್ಬಾನಿ (ಬಲಿದಾನ)"] ವನ್ನು ಅವರು ಕೆತ್ತಿಸಲಾರರು.

ಎಲ್‌ಐಸಿ ಯ ಮಹಾ ಐಪಿಒ......



ಪುಟ 9 ರಿಂದ

ಚಿಲ್ಲರೆ ಹೂಡಿಕೆದಾರರು ಜನಸಂಖ್ಯೆಯ ಕೇವಲ ಸುಮಾರು 3% ನಿಜವಾಗಿಯೂ ಹೀಗೆ ಮೌಲ್ಯದ 'ಬೀಗ ತೆಗೆಯುವುದರಿಂದ' ಶ್ರೀಮಂತ, ಕಾರ್ಪೊರೇಟ್ ಮತ್ತು ವಿದೇಶಿ ಬಂಡವಾಳಕ್ಕೆ ಮಾತ್ರ ಪ್ರಯೋಜನವಾಗುತ್ತದೆ, ಅವರುಗಳು ಸಾರ್ವಜನಿಕ ಸ್ವತ್ತುಗಳನ್ನು ಅಗ್ಗದ ಬೆಲೆಗೆ ಪಡೆಯಲು ದಾರಿ ಮಾಡಿಕೊಡುತ್ತದೆ.

ಎಲ್‌ಐಸಿಯ ನ್ಯಾಯಯುತ ಮೌಲ್ಯಮಾಪನ ಮಾಡುತ್ತಾರೆಯೇ?

ಎಲ್‌ಐಸಿಯ ಮೌಲ್ಯಮಾಪನವು ಒಂದು ಕ್ಲಿಷ್ಟ ವ್ಯವಹಾರವಾಗಿದೆ. ಎಲ್‌ಐಸಿಯ ಮೌಲ್ಯಮಾಪನಕ್ಕೆ ಸರ್ಕಾರವು ಮಿಲ್ಲಿಮನ್ ಎಂಬ ಆಕ್ಚುರಿಯಲ್ ಸಂಸ್ಥೆಯನ್ನು ನೇಮಿಸಿದೆ. ಎಲ್.ಐ.ಸಿ. 50 ಕ್ಕೂ ಹೆಚ್ಚು ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ ಮತ್ತು ಈ ಉತ್ಪನ್ನಗಳ ಭವಿಷ್ಯದ ಲಾಭದ ಪ್ರಸಕ್ತ ಮೌಲ್ಯವನ್ನು ನಿರ್ಣಯಿಸಬೇಕು. ಇದು ರೈಲ್ವೇಯ ನಂತರ ದೇಶದ ಅತಿದೊಡ್ಡ ರಿಯಲ್ ಎಸ್ಟೇಟ್ ಮಾಲೀಕನಾಗಿದೆ ಮತ್ತು ಈ ಸ್ವತ್ತುಗಳು ದೇಶದ ಪ್ರತಿಯೊಂದು ಭಾಗದಲ್ಲೂ ಇವೆ. ಸ್ಥಿರಾಸ್ತಿಗಳ ಮೌಲ್ಯಮಾಪನವಾಗಬೇಕು.

ಎಲ್‌ಐಸಿ ಭಾರತ ಮತ್ತು ವಿದೇಶಗಳಲ್ಲಿ ಅನೇಕ ಅಂಗಸಂಸ್ಥೆಗಳನ್ನು ಹೊಂದಿದೆ ಮತ್ತು ಅವುಗಳ ಮೌಲ್ಯೀಕರಣ ಆಗಬೇಕು. ಇದಲ್ಲದೆ, ಎಲ್.ಐ.ಸಿ. ಅಂದಾಜು ಮಾಡಲು ಕಷ್ಟಕರವಾದ ಬ್ರಾಂಡ್ ಮೌಲ್ಯವನ್ನು ಹೊಂದಿದೆ. ಇನ್ನು ಕೆಲವೇ ವಾರಗಳಲ್ಲಿ ಎಲೈಸಿ ಯ ಮೌಲ್ಯಮಾಪನ ಬರುವ ನಿರೀಕ್ಷೆ ಇದೆ. ಇದು ಸ್ಥೂಲ ಅಂದಾಜಿನ ಪ್ರಕಾರ ರೂ.10–15 ಲಕ್ಷ ಕೋಟಿ ಗಿಂತ ಕಡಿಮೆ ಇರುವಂತಿಲ್ಲ. ಈ ಮೌಲ್ಯವನ್ನು 5 ಕೋಟಿ ರೂಪಾಯಿಗಳ ಬಂಡವಾಳದಲ್ಲಿ ರಚಿಸಿರುವುದರಿಂದ ಇದು ಆಶ್ಚರ್ಯಕರವಾಗಿದೆ. ಇದು ನ್ಯಾಯೋಚಿತ ಮೌಲ್ಯವಾಗಿರಬಹುದೇ ಎಂದು ಹೇಳುವುದು ತುಂಬಾ ಕಷ್ಟ. ಸರ್ಕಾರದಿಂದ ಮಾರಾಟವಾಗುವ ಸಾರ್ವಜನಿಕ ವಲಯದ ಘಟಕಗಳ ಮೌಲ್ಯವನ್ನು ಯಾವಾಗಲೂ ಕೀಳಂದಾಜು ಮಾಡಲಾಗಿದೆ, ಅವುಗಳ ನಿಜ ಮೌಲ್ಯಕ್ಕಿಂತ ಬಹಳಷ್ಟು ಕಡಿಮೆ ಬೆಲೆಗೆ ಮಾರಲಾಗಿದೆ ಎಂಬುದನ್ನು ನಾವು ಅನುಭವದಿಂದ ಕಂಡಿದ್ದೇವೆ.

ಬಂಡವಾಳ ಹಿಂಪಡೆಯುವಿಕೆಯು ಅಂತಿಮವಾಗಿ ಖಾಸಗೀಕರಣಕ್ಕೆ ಕಾರಣವಾಗುತ್ತದೆ ಎಂದೂ ಅನುಭವ ತೋರಿಸಿಕೊಟ್ಟಿದೆ. ಬಂಡವಾಳ ಹಿಂತೆಗೆದುಕೊಳ್ಳುವಿಕೆಯು ರಾಷ್ಟ್ರೀಯ ಅಭಿವೃದ್ಧಿಯ ದೃಷ್ಟಿಕೋನದ ಬದಲು ಷೇರುದಾರರಿಗೆ ಲಾಭವನ್ನು ಹೆಚ್ಚಿಸುವತ್ತ ಗಮನಹರಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಎಲ್‌ಐಸಿಯ ಸಂಪೂರ್ಣ ವ್ಯವಹಾರ ಮಾದರಿಯು ಬದಲಾವಣೆಗೆ ಒಳಗಾಗಬೇಕಾಗುತ್ತದೆ. ಸಮಾಜದ ದುರ್ಬಲ ವರ್ಗಗಳಿಗೆ ಸಾಮಾಜಿಕವಾಗಿ ಅಗತ್ಯವಾದ ವಿಮೆಯು ನಿರ್ಲಕ್ಷ್ಯಕ್ಕೊಳಗಾಗಿ ದೊಡ್ಡ ಪ್ರೀಮಿಯಂಗಳೊಂದಿಗೆ ಉಚ್ಚಸ್ತರಗಳ ಜನಗಳಿಂದ ಸಿಗುವ ವ್ಯವಹಾರಗಳ ಮೇಲೆ ಮೇಲೆ ಕೇಂದ್ರೀಕರಿಸಲಾಗುತ್ತದೆ. ಗ್ರಾಮೀಣ ಭಾರತವನ್ನು ಕಡೆಗಣಿಸಿ, ನಗರ ಮತ್ತು ಮಹಾನಗರ ಕೇಂದ್ರಗಳ ಮೇಲೆ ಹೆಚ್ಚು ಗಮನ ಹರಿಸಲಾಗುವುದು. ಹೆಚ್ಚಿನ ಲಾಭವನ್ನು ಖಚಿತಪಡಿಸಿಕೊಳ್ಳಲು, ಸಾಂಪ್ರದಾಯಿಕ ದತ್ತಿ ಉತ್ಪನ್ನಗಳನ್ನು ಪ್ರೋತ್ಸಾಹಿಸುವ ಬದಲು ಷೇರುದಾರರಿಗೆ ಉತ್ತಮ ಆದಾಯವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವ ಪಾಲಿಸಿಗಳನ್ನು ಮಾರಾಟ ಮಾಡುವ ಪ್ರವೃತ್ತಿ ಇರುತ್ತದೆ. ಇಂತಹ ಪರಿಸ್ಥಿತಿಯು ಸಾಮಾಜಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹಣವನ್ನು ಕ್ರೋಢೀಕರಿಸಲು ಗಂಭೀರ ನ್ಯೂನತೆಯಾಗುತ್ತದೆ.

ಎಲ್‌ಐಸಿಯಲ್ಲಿ ವಿದೇಶಿ ಬಂಡವಾಳಕ್ಕೂ ಸರ್ಕಾರ ಅವಕಾಶ ನೀಡುತ್ತಿದೆ. ಇದು ನಿಸ್ಸಂಶಯವಾಗಿ ವಿದೇಶಿ ಬಂಡವಾಳವು ದೇಶೀಯ ಉಳಿತಾಯದ ಮೇಲೆ ಹೆಚ್ಚಿನ ನಿಯಂತ್ರಣವನ್ನು ಪಡೆಯಲು ಅನುವು ಮಾಡಿಕೊಟ್ಟು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗೆ ಹಾನಿಯುಂಟುಮಾಡುತ್ತದೆ.

ಎಲ್‌ಐಸಿ ಎಷ್ಟೊಂದು ಮುಖ್ಯವಾದ ಸಂಸ್ಥೆಯೆಂದರೆ, ಅದು ಖಾಸಗೀಕರಣ ಗೊಳ್ಳಲೇಬಾರದು.ಈ ಮಹಾನ್ ಸಂಸ್ಥೆಯ ಖಾಸಗೀಕರಣಕ್ಕೆ ಖಂಡಿತವಾಗಿಯೂ ದಾರಿ ಮಾಡಿಕೊಡುವ ಎಲ್‌ಐಸಿ ಐಪಿಒ ಸಮಸ್ತ ರಾಷ್ಟ್ರೀಯ ಅರ್ಥವ್ಯವಸ್ಥೆಯ ಮೇಲೆ ಗಂಭೀರವಾದ ಪ್ರಭಾವವನ್ನು ಬೀರುತ್ತದೆ. ಆದ್ದರಿಂದ, ರಾಷ್ಟ್ರೀಯ ಅರ್ಥವ್ಯವಸ್ಥೆ ಮತ್ತು ಆರ್ಥಿಕ ಸ್ವಾತಂತ್ರ್ಯದ ಹಿತದೃಷ್ಟಿಯಿಂದ ಎಲ್‌ಐಸಿಯ ಹೂಡಿಕೆ ಹಿಂಪಡಿಕೆ ಮತ್ತು ಅದರ ಅಂತಿಮವಾಗಿ ಖಾಸಗೀಕರಣದತ್ತ ಸರ್ಕಾರದ ನಡೆಯನ್ನು ವಿರೋಧಿಸುವುದು ಇಡೀ ಸಮಾಜದ ಜವಾಬ್ದಾರಿಯಾಗಿದೆ.

ಉಕ್ರೇನಿನಲ್ಲಿ ಯುದ್ಧದ ಅಪಾಯ ಏಕಿದೆ?

ಗೋರ್ಬಚೆವ್ 1980ರ ದಶಕದ ಕೊನೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ನಾಟೋ ಕೂಟದ ಜತೆ ಶಾಂತಿ ಸ್ಥಾಪಿಸಲು "ಶಾಂತಿ ಅಭಿಯಾನ"ದ ಏಕಪಕ್ಷೀಯ ಕ್ರಮಗಳ ಭರದಲ್ಲೋ, ಸಾಮ್ರಾಜ್ಯಶಾಹಿಯ ಒತ್ತಡದಲ್ಲೋ ಎರಡು ಪ್ರಮುಖ ಕ್ರಮಗಳನ್ನು ಘೋಷಿಸಿದರು. ಇವೆರಡೂ ಉಕ್ರೇನಿನ ಇಂದಿನ ಸಮಸ್ಯೆಗಳ ಮೂಲ. ಒಂದು ಪೂರ್ವ ಯುರೋಪಿನ ಮತ್ತು ಸೋವಿಯೆಟ್ ಒಕ್ಕೂಟದ ಸಮಾಜವಾದಿ ದೇಶಗಳ ಜಂಟಿ ಶಾಂತಿ– ಭದ್ರತೆಗಳಿಗೆ ಬದ್ಧವಾಗಿದ್ದ "ವಾರ್ಸಾ ಒಪ್ಪಂದ" ಮಿಲಿಟರಿ ಕೂಟವನ್ನು ಏಕಪಕ್ಷೀಯವಾಗಿ ಬರ್ಖಾಸ್ತು ಮಾಡಿದ್ದು. ಎರಡನೆಯದು ಜರ್ಮನಿಯ ಏಕೀಕರಣಕ್ಕೆ ಒಪ್ಪಿಕೊಂಡದ್ದು. ಈ ಒಪ್ಪಂದಕ್ಕೆ ಸಹಿ ಮಾಡುವ ಮೊದಲು ಅಮೆರಿಕನ್ ವಿದೇಶಾಂಗ ಸಚಿವ ಬೇಕರ್ ನಾಟೋ ಕೂಟ ಮತ್ತು ಅದರ ಪಡೆಗಳು ಈಗಿನ 'ಗಡಿ ದಾಟಿ ಒಂದು ಇಂಚು' ಸಹ ಮುಂದೆ ಬರುವುದಿಲ್ಲವೆಂದು ಗಟ್ಟಿ ಭರವಸೆ ನೀಡಿದ್ದರು ಎನ್ನಲಾಗಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಉಕ್ರೇನಿನಲ್ಲಿ ರಶ್ಯಾ ಪಡೆಗಳನ್ನು ಜಮಾಯಿಸಿದೆ, ರಶ್ಯಾ ಉಕ್ರೇನ್ ವಶಪಡಿಸಿಕೊಳ್ಳಲು ಹವಣಿಸುತ್ತಿದೆ ಎಂದು ಅಮೆರಿಕದ ಸರಕಾರ ಮತ್ತು ಮಾಧ್ಯಮಗಳು ಹುಯಿಲೆಬ್ಬಿಸುತ್ತಿವೆ. ಯುರೋಪಿನ ಕೆಲವು ಸರಕಾರಗಳು ಮತ್ತು ಮಾಧ್ಯಮಗಳೂ ಇದಕ್ಕೆ ಸಾಥ್ ನೀಡುತ್ತಿವೆ. ರಶ್ಯಾ ಆಕ್ರಾಮಕ ನೀತಿಗಳನ್ನು ಅನುಸರಿಸುತ್ತಿದೆ ಎಂದು ಆಪಾದಿಸುತ್ತಾ ಅಮೆರಿಕ ಸಹ ಯುದ್ಧ ನೌಕೆ, ಪಡೆಗಳು, ಶಸ್ತ್ರಾಸ್ತ್ರಗಳನ್ನು ಉಕ್ರೇನಿಗೆ ಸಾಗಿಸುತ್ತಿದೆ. ರಶ್ಯಾ ಉಕ್ರೇನನ್ನು ಆಕ್ರಮಿಸಿದರೆ ಅದಕ್ಕೆ ತಕ್ಕ ಬುದ್ಧಿ ಕಲಿಸಲಾಗುವುದು ಎಂಬ ಬೆದರಿಕೆಯನ್ನು ಸಹ ಅಮೆರಿಕ ಹಾಕಿದೆ. ಈ ನಡುವೆ ಯುದ್ಧದ ಅಪಾಯ ತಪ್ಪಿಸಲು ಮಾತುಕತೆಗಳೂ ನಡೆದಿವೆ. ಅಧ್ಯಕ್ಷ ಬಿಡೆನ್ ಮತ್ತು ಪುಟಿನ್ ನಡುವೆ ಜಿನಿವಾದಲ್ಲಿ ಮಾತುಕತೆಗಳು ನಡೆದಿವೆ. ಎರಡೂ ದೇಶಗಳ ವಿದೇಶಾಂಗ ಸಚಿವರುಗಳು ಮಾತನಾಡಿದ್ದಾರೆ. ಸದ್ಯ "ನಾರ್ಮಂಡಿ ಥರದ" (ಫ್ರಾನ್ಸ್, ಜರ್ಮನಿ, ಉಕ್ರೇನ್, ರಶ್ಯಾ) ಉನ್ನತ ಅಧಿಕಾರಿಗಳ ಮಾತುಕತೆ ನಡೆಯುತ್ತಿದೆ. ಜಿನಿವಾ ಮಾತುಕತೆಗಳಲ್ಲಿ ನಿರ್ಧರಿಸಿದಂತೆ ಪ್ರತಿ ಪಕ್ಷ ಸಮಸ್ಯೆ ಪರಿಹಾರಕ್ಕೆ ಏನನ್ನು ಸೂಚಿಸುತ್ತದೆ ಎಂಬ ಲಿಖಿತ ಸೂಚನೆಗಳ ವಿನಿಮಯ, ಅದರ ಮೇಲೆ ಆಂತರಿಕ ಚರ್ಚೆ, ಉತ್ತರ ಇತ್ಯಾದಿ ಪ್ರತಿಕ್ರಿಯೆ ನಡೆಯುತ್ತಿದೆ. ಈಗಿನ ಸಮಸ್ಯೆ ಏನು? ಇದು ಹೇಗೆ ಉದ್ಭವವಾಯಿತು? ಇದಕ್ಕೇನು ಪರಿಹಾರ? ಎಂದು ತಿಳಿಯಬೇಕಾದರೆ ಹಲವು ದಶಕಗಳ ಹಿಂದಿನ ಚಾರಿತ್ರಿಕ ಅನುಭವಕ್ಕೆ ಹೋಗಬೇಕು.

ಉಕ್ರೇನ್ ಸಮಸ್ಯೆ ಹಿನ್ನೆಲೆ

ಉಕ್ರೇನ್ ಮಧ್ಯಕಾಲದಲ್ಲಿ ಹಲವು (ಆಸ್ಟ್ರೊ–ಹಂಗರಿಯನ್, ಒಟ್ಟೊಮಾನ್ ಇತ್ಯಾದಿ) ಸಾಮ್ರಾಜ್ಯಗಳ ಭಾಗವಾಗಿದ್ದು ಕೊನೆಗೆ ರಶ್ಯನ್ ಝಾರ್ ನ ಸಾಮ್ರಾಜ್ಯದ ಭಾಗವಾಗಿತ್ತು. ಅಕ್ಟೋಬರ್ ಮಹಾಕ್ರಾಂತಿಯ ಭಾಗವಾಗಿ ಝಾರ್ ಶಾಹಿಯಿಂದ ವಿಮೋಚನೆ ಹೊಂದಿ ಸ್ವತಂತ್ರ ಸೋವಿಯೆಟ್ ಸಮಾಜವಾದಿ ಗಣತಂತ್ರವಾಗಿತ್ತು. 1922ರಲ್ಲಿ ಅಂದರೆ ಸರಿಯಾಗಿ ನೂರು ವರ್ಷಗಳ ಹಿಂದೆ ರಶ್ಯನ್ ಮತ್ತು ಇತರ ಸಮಾಜವಾದಿ ಗಣತಂತ್ರಗಳ ಜತೆ ಸೇರಿ "ಸೋವಿಯೆಟ್ ಸಮಾಜವಾದಿ ಗಣತಂತ್ರಗಳ ಒಕ್ಕೂಟ" (ಯು.ಎಸ್.ಎಸ್.ಆರ್ ಅಥವಾ ಸಂಕ್ಷಿಪ್ತವಾಗಿ ಸೋವಿಯೆಟ್ ಯೂನಿಯನ್) ಸ್ಥಾಪಿಸಿಕೊಂಡಿತ್ತು. ಸೋವಿಯೆಟ್ ಯೂನಿಯನ್ ರಚನೆಯಾದಾಗ ಸೋವಿಯೆಟ್ ಗಣತಂತ್ರಗಳು ನಿರ್ದಿಷ್ಟ ರಾಷ್ಟ್ರೀಯತೆಯ ಆಧಾರದ ಮೇಲೆ ರಚಿಸಲಾಗಿದ್ದವು. ಸಹಜವಾಗಿಯೇ ನೆರೆಯ ಗಣತಂತ್ರಗಳ ರಾಷ್ಟ್ರೀಯತೆಗಳು ಕೆಲವು ಗಡಿ ಪ್ರದೇಶಗಳಲ್ಲಿ ದೊಡ್ಡ ಅಲ್ಪಸಂಖ್ಯಾತ ರಾಷ್ಟ್ರೀಯತೆಗಳಾಗಿರುತ್ತವೆ. ಸೋವಿಯೆಟ್ ಒಕ್ಕೂಟದ ಹಲವು ದಶಕಗಳ ಅಗಾಧ ಬೆಳವಣಿಗೆಗಳ ಭಾಗವಾಗಿ ವಿವಿಧ ರಾಷ್ಟ್ರೀಯತೆಯ ಜನ ಪರಸ್ಪರ ವಲಸೆ ಸಹ ಹೋಗಿದ್ದರು. ಹೀಗೆ ಯಾವುದೇ ಗಣತಂತ್ರದಲ್ಲಿ ಒಂದು ಬಹುಸಂಖ್ಯಾತ ಮತ್ತು ಹಲವು ಅಲ್ಪಸಂಖ್ಯಾತ ರಾಷ್ಟ್ರೀಯತೆಗಳು ಇರುವುದು ಸಾಮಾನ್ಯವಾಗಿತ್ತು. ವಿಘಟನೆಯ ನಂತರ ಸ್ವತಂತ್ರವಾದ ಗಣತಂತ್ರಗಳೂ ಅದನ್ನೆ ಗಡಿಗಳಾಗಿ ಇಟ್ಟುಕೊಂಡದ್ದರಿಂದ ಈ ಪರಿಸ್ಥಿತಿ ಮುಂದುವರೆದಿತ್ತು. ಉಕ್ರೇನಿನ ಪಶ್ಚಿಮ ಭಾಗದಲ್ಲಿ ಉಕ್ರೇನಿ ರಾಷ್ಟ್ರೀಯತೆಯ ಜನ ಇದ್ದರೆ, ರಶ್ಯನ್ ಭಾಗದೊಂದಿಗೆ ಹತ್ತಿರದ ಸಂಪರ್ಕ ಮತ್ತು ಶತಮಾನಗಳ ಕೊಡು–ಕೊಳ್ಳುವಿಕೆ ಹೊಂದಿದ್ದ ಪೂರ್ವ ಭಾಗದಲ್ಲಿ ರಶ್ಯನ್ ರಾಷ್ಟ್ರೀಯತೆಯ ಜನ ಬಹುಸಂಖ್ಯೆಯಲ್ಲಿದ್ದರು.

1991ರಲ್ಲಿ ನಡೆದ ಸೋವಿಯೆಟ್ ಒಕ್ಕೂಟದ ವಿಘಟನೆಯ ಹಿಂದೆ, ಕೆಲವು ಆಂತರಿಕ ಪ್ರಕ್ರಿಯೆಗಳ ಜತೆ ಅವುಗಳನ್ನು ಉತ್ತೇಜಿಸಲು ಪ್ರಚೋದಿಸಲು ಕಾರಣವಾದ ಅಮೆರಿಕನ್ ಸಾಮ್ರಾಜ್ಯಶಾಹಿಯ ಕರಾಮತ್ತುಗಳೂ ಇದ್ದವು. ಮೊದಲು ಯುರೋಪಿಯನ್ ಮತ್ತು ಆ ಮೇಲೆ ಯುರೋಪಿಯನ್–ಅಮೆರಿಕನ್ ಸಾಮ್ರಾಜ್ಯಶಾಹಿಯ ಕೂಟವು, ಸೋವಿಯೆಟ್ ಯೂನಿಯನಿನ ಜನ್ಮದಿಂದ ಆರಂಭಿಸಿ ಅದರ ವಿಘಟನೆಗೆ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದವು. ಇದು ಉಕ್ರೇನ್ ಕುರಿತೂ ನಿಜವಾಗಿತ್ತು. ಇದರಲ್ಲಿ ಸೋವಿಯೆಟ್ ಒಕ್ಕೂಟದ ಕುರಿತು ರೇಡಿಯೊ ಲಿಬರ್ಟಿಯ ಸತತ ಅಪಪ್ರಚಾರಗಳು ಅದರ ಮುಖ್ಯ ಅಸ್ತ್ರಗಳಾಗಿದ್ದವು. ಝಾರ್ ಶಾಹಿಯಡಿಯಲ್ಲಿ ಧೀರ್ಘ ದಮನಕ್ಕೆ ಒಳಗಾಗಿದ್ದ ಅಲ್ಪಸಂಖ್ಯಾತ ರಾಷ್ಟ್ರೀಯತಾ



ಭಾವನೆಗಳನ್ನು ಬಡಿದೆಬ್ಬಿಸುವುದು, ಉಕ್ರೇನಿಯನ್–ರಶ್ಯನ್ ರ ನಡುವೆ ಸಂಘರ್ಷದ ವಾತಾವರಣ ಸೃಷ್ಟಿಸಲು ಪ್ರಯತ್ನಿಸುವುದು, ನಾಜಿ–ಬೆಂಬಲಿಗರು ಸೇರಿದಂತೆ ಸೋವಿಯೆಟ್–ವಿರೋಧಿ ರಾಜಕೀಯ ವಿರೋಧಿಗಳ ಮೇಲೆ ಸೋವಿಯೆಟ್ ಸರಕಾರದ ಕ್ರಮಗಳನ್ನು ಉಕ್ರೇನಿಯನ್ ರಾಷ್ಟ್ರೀಯತೆಯನ್ನು ರಶ್ಯನರು ದಮನಿಸುತ್ತಿದ್ದಾರೆಂದು ಬಿಂಬಿಸುವುದು, ಇಂತಹ ಕೆಲವು ರಾಜಕೀಯ ವಿರೋಧಿಗಳನ್ನು ಬಳಸಿ ಬುಡಮೇಲು ಕೃತ್ಯಗಳನ್ನು ನಡೆಸುವುದು ಇತ್ಯಾದಿ ಅದರ ತಂತ್ರವಾಗಿತ್ತು. 1980ರ ದಶಕದ ಕೊನೆಯಲ್ಲಿ ಸೋವಿಯೆಟ್ ಒಕ್ಕೂಟದೊಳಗೆ ಎದ್ದ ತುಮುಲವನ್ನು ಪೂರ್ಣವಾಗಿ ಬಳಸಿಕೊಂಡು ಈ ಬುಡಮೇಲು ಕೃತ್ಯಗಳು ಮುಂದುವರೆದವು. ಸೋವಿಯೆಟ್ ವಿಘಟನೆಯ ನಂತರವೂ ಈ ಚಟುವಟಿಕೆಗಳೂ ಇನ್ನಷ್ಟು ರಭಸದಿಂದ ನಡೆದವು.

ಗೋರ್ಬಚೆವ್ ಪ್ರಮಾದಗಳು ಮೂಲಕಾರಣ

ಗೋರ್ಬಚೆವ್ 1980ರ ದಶಕದ ಕೊನೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ನಾಟೋ ಕೂಟದ ಜತೆ ಶಾಂತಿ ಸ್ಥಾಪಿಸಲು "ಶಾಂತಿ ಅಭಿಯಾನ"ದ ಏಕಪಕ್ಷೀಯ ಕ್ರಮಗಳ ಭರದಲ್ಲೋ, ಸಾಮ್ರಾಜ್ಯಶಾಹಿಯ ಒತ್ತಡದಲ್ಲೋ ಎರಡು ಪ್ರಮುಖ ಕ್ರಮಗಳನ್ನು ಘೋಷಿಸಿದರು. ಇವೆರಡೂ ಉಕ್ರೇನಿನ ಇಂದಿನ ಸಮಸ್ಯೆಗಳ ಮೂಲ. ಒಂದು ಪೂರ್ವ ಯುರೋಪಿನ ಮತ್ತು ಸೋವಿಯೆಟ್ ಒಕ್ಕೂಟದ ಸಮಾಜವಾದಿ ದೇಶಗಳ ಜಂಟಿ ಶಾಂತಿ–ಭದ್ರತೆಗಳಿಗೆ ಬದ್ಧವಾಗಿದ್ದ "ವಾರ್ಸಾ ಒಪ್ಪಂದ" ಮಿಲಿಟರಿ ಕೂಟವನ್ನು ಏಕಪಕ್ಷೀಯವಾಗಿ ಬರ್ಖಾಸ್ತು ಮಾಡಿದ್ದು. ಈ ಕ್ರಮದ ಮತ್ತು ಇದರ ನಂತರ ಪಶ್ಚಿಮ ಯುರೋಪಿನ ಜನರ ಒತ್ತಡದ ಫಲವಾಗಿ ನಾಟೋ ಮಿಲಿಟರಿ ಕೂಟ ಸಹ ಬರ್ಖಾಸ್ತು ಮಾಡಬೇಕಾಗುತ್ತದೆ ಎಂಬುದು ಅವರ ನಿರೀಕ್ಷೆಯಾಗಿತ್ತು. ಸಮಾಜವಾದಿ ದೇಶಗಳಲ್ಲಿ ಮತ್ತು ಜಾಗತಿಕ ಶಾಂತಿ ಚಳುವಳಿಯಲ್ಲೂ, ನಾಟೋ ಮಿಲಿಟರಿ ಕೂಟದ ಬರ್ಖಾಸ್ತು ಬಗ್ಗೆ ಗಟ್ಟಿ ಭರವಸೆಯಿಲ್ಲದೆ "ವಾರ್ಸಾ ಒಪ್ಪಂದ" ಬರ್ಖಾಸ್ತು ಶರಣಾಗತಿಯ ಕ್ರಮವಾಗುತ್ತದೆ ಎಂಬ ಸಂದೇಹ ಈ ಕ್ರಮಕ್ಕೆ ವ್ಯಕ್ತವಾಗಿದ್ದವು.

ಎರಡನೆಯದು ಜರ್ಮನಿಯ ಏಕೀಕರಣಕ್ಕೆ ಒಪ್ಪಿಕೊಂಡದ್ದು. ಈ ಒಪ್ಪಂದಕ್ಕೆ ಸಹಿ ಮಾಡುವ ಮೊದಲು ಅಮೆರಿಕನ್ ವಿದೇಶಾಂಗ ಸಚಿವ ಬೇಕರ್ ನಾಟೋ ಕೂಟ ಮತ್ತು ಅದರ ಪಡೆಗಳು ಈಗಿನ 'ಗಡಿ ದಾಟಿ ಒಂದು ಇಂಚು' ಸಹ ಮುಂದೆ ಬರುವುದಿಲ್ಲವೆಂದು ಗಟ್ಟಿ ಭರವಸೆ ನೀಡಿದ್ದರು ಎನ್ನಲಾಗಿದೆ. ಆಗ ಪಶ್ಚಿಮ ಜರ್ಮನಿಯ ಛಾನ್ಸಲರ್ ಆಗಿದ್ದ ಕೊಹ್ಲ್ ಈ ಮಾತುಕತೆಗಳಲ್ಲಿ, ಏಕೀಕೃತ ಜರ್ಮನಿ ಸಹ ತನ್ನ ಭಧ್ರತೆ ಕುರಿತು (ಪೂರ್ವ ಜರ್ಮನಿ ಸೇರಿದಂತೆ) ಎಲ್ಲರ ಅಭಿಪ್ರಾಯ ತೆಗೆದುಕೊಳ್ಳುವುದರಿಂದ 'ನಾಟೋ' ಬಿಡುವ ಸಾಧ್ಯತೆಯಿದೆ ಎಂದಿದ್ದರಂತೆ. ಗೋರ್ಬಚೇವ್ ಅವರನ್ನು ನಾಟೋ ನಾಯಕರು ಮಂಕುಗೊಳಿಸಿದ್ದರೋ, ಗೋರ್ಬಚೇವ್ ಸಮಾಜವಾದಿ ದೇಶಗಳ ಎಲ್ಲ ನಾಯಕರ ಜನರ ಕಣ್ಣಿಗೆ ಮಣ್ಣೆರಚಿದರೋ, ಒಟ್ಟಿನಲ್ಲಿ ಇವೆರಡು ಭರವಸೆಗಳು ಹುಸಿಯಾಗಿ, ಇಂದಿನ ಉಕ್ರೇನಿಯನ್ ಸಮಸ್ಯೆಗೆ ಕಾರಣವಾಗಿವೆ.

ಮೇಲಿನ ಭರವಸೆಗಳಿಗೆ ವಿರುದ್ಧವಾಗಿ ಯು.ಎಸ್ ಮತ್ತು ನಾಟೋ ಸೋವಿಯೆಟ್ ಒಕ್ಕೂಟದ ವಿಘಟನೆಯ ನಂತರ ಎಲ್ಲ ಪೂರ್ವ ಯುರೋಪಿನ್ ಮತ್ತು ಮಾಜಿ ಸೋವಿಯೆಟ್ ದೇಶಗಳಲ್ಲಿ ತಮಗೆ ಪರವಾದ ಸರಕಾರವನ್ನು ಅಧಿಕಾರಕ್ಕೆ ತರಲು ನೇರ ರಾಜಕೀಯ ಮಧ್ಯಪ್ರವೇಶ ಮಾಡತೊಡಗಿತು. ಅದಕ್ಕೆ ಭಾರೀ ಹಣ ಖರ್ಚು ಮಾಡಿ ಹಲವು ಸಂಘಟನೆಗಳನ್ನು ವ್ಯಕ್ತಿಗಳನ್ನು ಎತ್ತಿಕಟ್ಟಲಾರಂಭಿಸಿದವು. ಚುನಾವಣೆಗಳಲ್ಲಿ ತಮಗೆ ಪರವಾದವರು ಗೆಲ್ಲದಾಗ ಅಂತಹ ಚುನಾವಣೆ ಬೋಗಸ್ ಎಂದು ಜಾಗತಿಕ ಅಪಪ್ರಚಾರ ನಡೆಸಿದವು. ತಾವು ಬೆಳೆಸಿದ್ದ ಎಲ್ಲ ಬುಡಮೇಲು ಪರಿಕರಗಳನ್ನು ಬಳಸಿ 'ಬಣ್ಣ ಬಣ್ಣದ (ಕ್ಷಿಪ್ರ) ಕ್ರಾಂತಿ'ಗಳನ್ನು ಸಂಘಟಿಸಿದವು. ಈ ತಂತ್ರ ಪೂರ್ವ ಯುರೋಪಿನಲ್ಲಿ ಮೊದಲು ಫಲ ಕೊಟ್ಟಿತು. ಬಲಪಂಥ ಅಧಿಕಾರಕ್ಕೆ ಬಂದ ದೇಶಗಳಲ್ಲಿ ಐ.ಎಂ.ಎಫ್/ವಿಶ್ವ ಬ್ಯಾಂಕ್ ಸಾಲದ, ಯುರೋ ಕೂಟದಲ್ಲಿ ಸೇರಿಸಿಕೊಳ್ಳುವ ಆಸೆ ತೋರಿಸಿ ನಾಟೋ ಕೂಟ ಕ್ಕೆ ಸೇರುವುದು ಅಜೆಂಡಾಕ್ಕೆ ಬರುವಂತೆ ಮಾಡಿದವು. ಕಳೆದ ಮೂರು ದಶಕಗಳಲ್ಲಿ 14 ದೇಶಗಳನ್ನು (ಸರ್ಬಿಯಾ ಬಿಟ್ಟು ಎಲ್ಲ ಪೂರ್ವ ಯುರೋಪಿನ ಮಾಜಿ ಸಮಾಜವಾದಿ ಬಣದ ದೇಶಗಳು ಮತ್ತು ಮೂರು ಮಾಜಿ ಸೋವಿಯೆಟ್ ದೇಶಗಳು) ನಾಟೋ ಗೆ ಸೇರಿಸಿಕೊಳ್ಳಲಾಗಿದೆ. ಈ ದೇಶಗಳಲ್ಲಿ ನಾಟೋ ಪಡೆಗಳು ಅಣ್ವಸ್ತ್ರ ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸ್ಥಾಪಿಸಲಾಗಿದೆ. ಇವೆಲ್ಲವೂ ರಶ್ಯಾದ ಪಶ್ಚಿಮ ಗಡಿಯಲ್ಲಿದ್ದು ರಶ್ಯಾವನ್ನು ಸುತ್ತುವರೆಯುವ ಯು,ಎಸ್ ಯೋಜನೆಯ ಭಾಗವಾಗಿದೆ ಎಂಬುದು ರಶ್ಯಾದ ವಾಸ್ತವಿಕ ಆತಂಕ.

ನಾಟೋದಲ್ಲೂ ತಳಮಳ

ಉಕ್ರೇನಿನಲ್ಲಿ ಯು.ಎಸ್ ಕೈಗೊಂಬೆ ಸರಕಾರ ಸ್ಥಾಪಿಸಿ ಈ ಸುತ್ತುವರೆಯುವಿಕೆಯನ್ನು ಪೂರ್ಣಗೊಳಿಸುವ ಹುನ್ನಾರವನ್ನು ಮೊದಲಿನಿಂದಲೂ ಮಾಡಿದೆ. ಇದಕ್ಕಾಗಿ ಹಿಂದೆ ಸೂಚಿಸಿದ ಹಾಗೆ ಹಲವು ಪ್ರಯತ್ನಗಳನ್ನು ನಡೆಸಿತ್ತು. ಉಕ್ರೇನ್ ಮತ್ತು ರಶ್ಯಾ ನಡುವೆ ಘನಿಷ್ಠ ಸಂಬಂಧವಿದ್ದು 2014 ರ ವರೆಗೆ ಅವರಿಗೆ ಕೈಗೊಂಬೆ ಸರಕಾರ ಸ್ಥಾಪಿಸುವುದು ಸಾಧ್ಯವಾಗಲಿಲ್ಲ. ಕೊನೆಗೂ ಆಗ ಉಕ್ರೇನಿನ ಚುನಾಯಿತ ಅಧ್ಯಕ್ಷನಾಗಿದ್ದ ಯಾಕುನೆವಿಚ್ ಅವರ ಸರಕಾರವನ್ನು ಕ್ಷಿಪ್ರಕ್ರಾಂತಿ ಮೂಲಕ ಉರುಳಿಸಿ ಬಲಪಂಥೀಯ ಉಗ್ರರಾಷ್ಟ್ರವಾದಿಗಳು ಮತ್ತು ನವ–ನಾಜಿ ಗುಂಪುಗಳನ್ನು ಅಧಿಕಾರಕ್ಕೆ ತರಲಾಯಿತು. ಆ ಅವಧಿಯಲ್ಲಿ ರಶ್ಯನ್ ಅಲ್ಪಸಂಖ್ಯಾತರ, ಅವರ ಹಕ್ಕುಗಳ ಮೇಲೆ ತೀವ್ರ ದಾಳಿಗಳು ನಡೆದವು. ಕಮ್ಯುನಿಸ್ಟ್ ಮತ್ತಿತರ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳನ್ನು ದಮನ ಮಾಡಲಾಯಿತು. ರಶ್ಯನ್ ಅಲ್ಪಸಂಖ್ಯಾತರು ದಾಳಿ ತಡೆಯಲಾರದೆ ರಶ್ಯ ಕಡೆ ನಿರಾಶ್ರಿತರಾಗಿ ಓಡಲು ಆರಂಭಿಸಿದರು. ಈ ಕಾರಣ ಮುಂದಿಟ್ಟು ರಶ್ಯನ್ ಪಡೆಗಳು ಕ್ರಿಮಿಯ ವನ್ನು 'ವಿಮೋಚನೆ'ಗೊಳಿಸಿದವು. ದೊಂಬಾಸ್ ಪ್ರದೇಶದಲ್ಲಿ ಸ್ಥಳೀಯ ರಶ್ಯನ್ ಗೆರಿಲ್ಲಾ ಪಡೆಗಳ ಉಕ್ರೇನ್ ಸೈನ್ಯದ ವಿರುದ್ಧದ ಹೋರಾಟದಲ್ಲಿ ನೆರವು ನೀಡಿದವು.

ಆ ನಂತರ ಮಿನ್ಸ್ಕ್ ಒಪ್ಪಂದದಂತೆ ಕದನ ನಿಲುಗಡೆಯಾಯಿತು. 2019ರಲ್ಲಿ ಈ ಸರಕಾರ ಬಿದ್ದು ಹೋಗಿ ಝೆಲೆನ್ಸ್ಕಿ ಸರಕಾರ ಬಂದಿದ್ದು ಅದು ರಶ್ಯ ಮತ್ತು ನಾಟೋ ನಡುವೆ ಸಮಜಾಯಿಷಿ ನೀತಿಗೆ ಪ್ರಯತ್ನಿಸುತ್ತಿದೆ. ಆದರೆ ಯು.ಎಸ್ ಮಿಲಿಟರಿ ಸೇರಿದಂತೆ ಎಲ್ಲ ವಿಷಯಗಳಲ್ಲಿ ಹಿಂದಿನ ಸರಕಾರ ನೇಮಿಸಿದ ಸಲಹೆಗಾರರ ರೂಪದಲ್ಲಿ ಮೂಗು ತೂರಿಸುತ್ತಿದೆ. ಉಕ್ರೇನ್ ನಾಟೋದ ಭಾಗವಾಗಿ ಅತ್ಯಾಧುನಿಕ ಕ್ಷಿಪಣಿಗಳನ್ನು ರಶ್ಯಾ ಗಡಿಗಳಲ್ಲಿ ಸ್ಥಾಪಿಸಿದರೆ, ಮಾಸ್ಕೋ ವನ್ನು ಕ್ಷಿಪಣಿಗಳು ಕೇವಲ 5 ನಿಮಿಷದಲ್ಲಿ ಮುಟ್ಟಬಹುದು. ಇಷ್ಟು ಕಡಿಮೆ ಸಮಯದಲ್ಲಿ ಯಾವುದೇ ಪ್ರತಿದಾಳಿ ಅಥವಾ ರಕ್ಷಣೆ ಸಾಧ್ಯವಿಲ್ಲ. ಹಾಗಾಗಿ ಇದು ದೇಶದ ಭದ್ರತೆಯ ಪ್ರಶ್ನೆ. ಇದನ್ನು ಆಗಗೊಡುವುದಿಲ್ಲವೆಂಬುದು ರಶ್ಯಾದ ದೃಢ ನಿರ್ಧಾರ.

ಉಕ್ರೇನನ್ನು ಏನ ಕೇನ ಪ್ರಕಾರೇಣ ನಾಟೊ ಗೆ ಸೇರಿಸಿಕೊಳ್ಳುವ ಯು.ಎಸ್ ನ ಧೋರಣೆ ಪ್ರಮುಖ ಯುರೋ ದೇಶಗಳಾದ ಜರ್ಮನಿ, ಫ್ರಾನ್ಸ್ ಗಳಿಗೆ ಇಷ್ಟವಿಲ್ಲ. ರಶ್ಯದ ನಾರ್ಡ್ –1 ಗ್ಯಾಸ್ ಮೇಲೆ ಜರ್ಮನಿ ಮತ್ತು ಕೆಲವು ದೇಶಗಳು ನಿರ್ಣಾಯಕವಾಗಿ ಅವಲಂಬಿಸಿದ್ದು ರಶ್ಯ ದ ವಿರುದ್ಧ ತೀರಾ ಅತಿರೇಕ ಮಾಡಿದರೆ ಗ್ಯಾಸ್ ನಿಲ್ಲಿಸಬಹುದೆಂಬ ಆತಂಕವಿದೆ. ಅದರ ಬದಲು ತಾನು ಗ್ಯಾಸ್ ಪೂರೈಸುತ್ತೇನೆ ಎಂದು ಯು.ಎಸ್ ಹೇಳುತ್ತದೆ. ಆದರೆ ಅದು ಬಹಳ ದುಬಾರಿಯೆಂದು ಯುರೋ ದೇಶಗಳಿಗೆ ಗೊತ್ತಿದೆ. ನಾರ್ಡ್ –1 ಗ್ಯಾಸ್ ಪೈಪ್ ಲೈನ್ ಉಕ್ರೇನಿನ ಮೂಲಕ ಹೋಗುತ್ತಿದ್ದು, ಉಕ್ರೇನಿಗೆ ಇದರಿಂದ ಬಹಳ ಆದಾಯವಿದೆ. ಆದರೆ ಯು.ಎಸ್ ಉಕ್ರೇನಿನ ಈ ಆಯಕಟ್ಟಿನ ಪಾತ್ರ ದುರ್ಬಳಕೆ ಮಾಡಿ ನಾರ್ಡ್ –1 ಗ್ಯಾಸ್ ನಿಲ್ಲಿಸಲು ಹವಣಿಸುತ್ತಿದೆ. ಇದು ಉಕ್ರೇನ್ ಸೇರಿದಂತೆ ಯುರೋ ದೇಶಗಳಿಗೆ ಇಷ್ಟವಿಲ್ಲ.

ಯು.ಎಸ್ ನ ಈ ಹುನ್ನಾರವನ್ನು ಅರಿತ ರಶ್ಯಾ ನಾರ್ಡ್ –2 ಗ್ಯಾಸ್ ಪೈಪ್ ಲೈನ್ ಪ್ರಾಜೆಕ್ಟನ್ನು (ಉಕ್ರೇನ್ ಹಾದಿ ಬಿಟ್ಟು) ಸಾಗರ ಹಾದಿಗಳ ಮೂಲಕ ಮುಗಿಸಿದ್ದು, ಪೂರೈಕೆಗೆ ರೆಡಿ ಮಾಡುತ್ತಿದೆ. ಜರ್ಮನಿಯ ತಾಂತ್ರಿಕ ಚೆಕ್–ಅಪ್ ಮತ್ತು ಸರ್ಟಿಫಕೇಶನ್ ಮಾತ್ರ ಬಾಕಿಯಿದೆ. ಇದೂ ಯು.ಎಸ್ ಮತ್ತು ಯುರೋ ದೇಶಗಳ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ. ಯು.ಎಸ್ ಮಿಲಿಟರಿ (ವಿಶೇಷವಾಗಿ ಅಣ್ವಸ್ತ್ರಗಳ) ಭದ್ರತೆಯ 'ಕೊಡೆ'ಯನ್ನು ಅವು ಬಿಟ್ಟುಕೊಡಲು ಸಿದ್ಧವಿಲ್ಲದಿದ್ದರೂ, ಉಕ್ರೇನಿನಲ್ಲಿ ರಶ್ಯಾವನ್ನು ಯುದ್ಧಕ್ಕೆ ಪ್ರಚೋದಿಸಬಲ್ಲ ಯು.ಎಸ್ ನ ಅತಿರೇಕಗಳಿಗೆ ಅವುಗಳ ಬೆಂಬಲವಿಲ್ಲ. ವಿಶೇಷವಾಗಿ ಫ್ರಾನ್ಸ್, ಜರ್ಮನಿ ಅದನ್ನು ಬಲವಾಗಿ ಪ್ರತಿರೋಧಿಸುತ್ತಿವೆ.

ಮುಂದೇನು?

ಉಕ್ರೇನಿನ ರಾಜಕೀಯ, ಮಿಲಿಟರಿ ಸಾರ್ವಭೌಮತೆ ಮತ್ತೆ ಸ್ಥಾಪಿಸಬೇಕು. ಅಲ್ಲಿರುವ ವಿದೇಶಿ ಪಡೆಗಳು, ಸಲಹೆಗಾರರು ಅಲ್ಲಿಂದ ಕಾಲ್ತೆಗೆಯಬೇಕು. ಉಕ್ರೇನ್ ಎಂದೂ ನಾಟೋ ಮಿಲಿಟರಿ ಕೂಟ ಸೇರುವುದಿಲ್ಲ ಎಂಬುದರ ಬಗ್ಗೆ ನಾಟೋ ಮತ್ತು ಉಕ್ರೇನ್ ರಶ್ಯಾಕ್ಕೆ ಖಾತ್ರಿ ಕೊಡಬೇಕು. ರಶ್ಯನ್ ಅಲ್ಪಸಂಖ್ಯಾತರ ಹಕ್ಕುಗಳ ಸ್ಥಾಪನೆಯಾಗಬೇಕು. ಇಲ್ಲದಿದ್ದರೆ ಉಕ್ರೇನಿನ ರಶ್ಯನ್ ಅಲ್ಪಸಂಖ್ಯಾತರ ರಕ್ಷಣೆಗಾಗಿ ಮಿಲಿಟರಿ ಮಧ್ಯಪ್ರವೇಶ ಅಗತ್ಯವಾದರೆ ಅದನ್ನು ಮಾಡಿಯೇ ತೀರುತ್ತೇನೆಂದು ಬೆದರಿಕೆ ಹಾಕಿದೆ.

ಯು.ಎಸ್ ಅಧ್ಯಕ್ಷ ಬಿಡೆನ್ ಉಕ್ರೇನ್ ಕುರಿತು ಉಗ್ರ ದೋರಣೆ ತಾಳಿರುವುದಕ್ಕೆ ದೇಶೀಯ ರಾಜಕೀಯ ಕಾರಣಗಳೂ ಇವೆ. ಕೊವಿದ್ ನಿಯಂತ್ರಣದಲ್ಲಿ, ಪರಿಹಾರ ಕ್ರಮಗಳಲ್ಲಿ ಮತ್ತು ಆರ್ಥಿಕ ಪರಿಸ್ಥಿತಿಯ ನಿರ್ವಹಣೆಯಲ್ಲಿ ವೈಫಲ್ಯದಿಂದ ಜನಾಕ್ರೋಶ ಹೆಚ್ಚುತ್ತಿರುವುದರಿಂದ, ವಿದೇಶದಲ್ಲಿ ಮಿಲಿಟರಿ ಬಲ ತೋರಿಸುವ ತುರ್ತು ಅಗತ್ಯ ಅವರಿಗಿದೆ. ರಶ್ಯಾವನ್ನು ಹಿಂದೆ ಅಫ್ಘಾನಿಸ್ತಾನದಲ್ಲಿ ಮಾಡಿದಂತೆ ಗೆಲ್ಲಲಾಗದ ಯುದ್ಧದಲ್ಲಿ ಸಿಲುಕಿಸಿ ಪುಟಿನ್ ಮುಂದೆ ಅಧಿಕಾರಕ್ಕೆ ಬರದಂತೆ ಮಾಡುವ 'ದುರಾಲೋಚನೆ'ಯೂ ಇದೆ ಎನ್ನಲಾಗಿದೆ. ಚೀನಾ–ರಶ್ಯಾ ವ್ಯೂಹಾತ್ಮಕ ಐಕ್ಯತೆಯೂ ಯು.ಎಸ್ ನಿದ್ದೆಗೆಡಿಸುತ್ತಿದೆ. ರಶ್ಯಾದಲ್ಲಿ ಇನ್ನೊಬ್ಬ 'ಯೆಲ್ಸಿನ್' ನನ್ನು ಅಧ್ಯಕ್ಷ ಮಾಡಲು ಸಾಧ್ಯವಾದರೆ, ಚೀನಾ ವನ್ನು ಮಟ್ಟ ಹಾಕುವುದು ಸುಲಭವಾದೀತು ಎಂಬ 'ದುರಾಲೋಚನೆ'ಯೂ ಇದೆ ಎನ್ನಲಾಗಿದೆ.

ಉಕ್ರೇನ್ ಬಿಕ್ಕಟ್ಟು ಸೃಷ್ಟಿಸುವುದರಲ್ಲಿ ಯು.ಎಸ್ ದುರುದ್ದೇಶವನ್ನು, ಉಕ್ರೇನ್ ಮತ್ತು ನಾಟೋ ದೇಶಗಳ ಶಾಂತಿಪ್ರಿಯ ಜನತೆ ವಿರೋಧಿಸಬೇಕು. 2015ರಲ್ಲಿ ಮಾಡಿಕೊಂಡ ಮಿನ್ಸ್ಕ್ ಒಪ್ಪಂದದ ಜಾರಿ ಎಲ್ಲಾ ಪಕ್ಷಗಳು ಮಾಡಬೇಕು. ಅದೊಂದೇ ಇದಕ್ಕೆ ಪರಿಹಾರ.

JANASHAKTHI KANNADA VARA PATRIKE JANUARY 31-FEBRUARY 6, 2022 Price: Rs. 10/- Date of Publication: 28 JANUARY 2022 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate**

ಜೀವ ರಕ್ಷಿಸಿ–ಜೀವನ ಉಳಿಸಿ–ಜೀವಿಸಲು ಬಿಡಿ ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನ

























ಅಂಬೇಡ್ಕರ್ ಭಾವಚಿತ್ರಕ್ಕೆ ನ್ಯಾಯಾಧೀಶರಿಂದ ಅಪಮಾನ: ಸಿಪಿಐಎಂ ಖಂಡನೆ







JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**